# ನೀರಿನ ಋಣ

ರತ್ನ ಸೂನು

BlueRose ONE.com
Stories Matter
NewDelhi • London

**BLUEROSE PUBLISHERS**
India | U.K.

Copyright © Keralapura Srinivasa 2025

All rights reserved by author. No part of this publication may be reproduced, stored in a retrieval system or transmitted in any form or by any means, electronic, mechanical, photocopying, recording or otherwise, without the prior permission of the author. Although every precaution has been taken to verify the accuracy of the information contained herein, the publisher assumes no responsibility for any errors or omissions. No liability is assumed for damages that may result from the use of information contained within.

BlueRose Publishers takes no responsibility for any damages, losses, or liabilities that may arise from the use or misuse of the information, products, or services provided in this publication.

BlueRoseONE.com
Stories Matter
NewDelhi • London

For permissions requests or inquiries regarding this publication, please contact:

BLUEROSE PUBLISHERS
www.BlueRoseONE.com
info@bluerosepublishers.com
+91 8882 898 898
+4407342408967

ISBN: 978-93-7310-891-9

Cover design: Yash Singhal
Typesetting: Namrata Saini

First Edition: December 2025



ನನ್ನ  ಪ್ರೀತಿಯ ಅಕ್ಕನ ಸವಿ ನೆನಪಿನಲ್ಲಿ

# ಪ್ರಿಯ ವಾಚಕರೇ!

ಈ ಹಿಂದೂ ರಾಷ್ಟ್ರದಲ್ಲಿರುವ, ಓರ್ವ, ಸನಾತನ ಧರ್ಮ ರಕ್ಷಣೆಗಾಗಿ ನಿರಂತರ ಹೋರಾಡುತ್ತಿದ್ದ, ಆಧ್ಯಾತ್ಮ ಪ್ರಿಯರಾದ, ಶ್ರೀ ಗೋಯಂಕಾರವರ ಕರಕಮಲಗಳಿಂದ ಗೋರಖಪುರದಲ್ಲಿ ಸ್ಥಾಪಿತವಾದ ಗೀತಾಪ್ರೆಸ್ನ ಮಾಧ್ಯಮದಲ್ಲಿ ಮುದ್ರಿತಗೊಂಡ ಉಪದೇಶ ಕಥಾ ಸಮುದ್ರದಿಂದ ಆಯ್ದ ಕೆಲವು ಕಥಾರತ್ನಮಾಲೆಯ ಒಂದು ರತ್ನವು ಈ "ಏಕಲೋಟಾ ಪಾನಿ" ಎಂಬುದು. ಇದರಲ್ಲಿ ಸುಮಾರು 24 ಔಪದೇಶಿಕ ಕಥೆಗಳ ಗುಚ್ಛವಿದೆ. ಈ ಕಥಾಮಾಲಿಕೆಯ ಪ್ರಥಮ ಸುಮವೇ "ಏಕ್ ಲೋಟಾ ಪಾನೀ" ಎಂಬುದು, ಹಿಂದಿ ಭಾಷಾ ಪ್ರೇಮಿಗಳ ಮನಕ್ಕೆ ಮುದನೀಡಿದ ಈ ಕಥೆಯನ್ನು "ನೀರಿನ ಋಣ" ಎಂಬ ಕನ್ನಡ ಶೀರ್ಷಿಕೆಯ ಮೂಲಕ ಕರ್ನಾಟಕದ ಜನಮಾನಸವನ್ನು ಪುಲಕಿತಗೊಳಿಸುವುದಷ್ಟೇ ಈ ಲೇಖನದ ಕನ್ನಡೀಕರಣದ ಉದ್ದೇಶವು.

ಮೂಲ ಲೇಖನಕಾರರ ಭಾವನೆಗಳಿಗೆ ಧಕ್ಕೆ ಉಂಟಾಗದಂತೆ ಅನುವಾದ ಮಾಡಲು ಪ್ರಯತ್ನಿಸುತ್ತಿದ್ದೇನೆ. ಸಮೃದ್ಧ ಹಿಂದಿ ಸಾಹಿತ್ಯದ ಹಲವಾರು ಶಬ್ದಪುಂಜಗಳ ಮರ್ಮವನ್ನರಿತು ಅದಕ್ಕೆ ತಕ್ಕಂತೆ ಕನ್ನಡೀಕರಿಸುವುದು ಕಷ್ಟಸಾಧ್ಯವೇ ಸರಿ. ಹೆಚ್ಚಾಗಿ ಈ ಉಪನ್ಯಾಸಗಳು ಗ್ರಾಮೀಣ ಭಾಷೆಯಲ್ಲಿದ್ದರೂ ಸಹ ಅದನ್ನು ಪ್ರಬುದ್ಧ ನಾಗರೀಕ ಭಾಷಾ ವ್ಯಾಪ್ತಿಗೆ ಒಳಪಡಿಸಿ ಹಿಂದಿ ಸದೃಶ ಭಾವವನ್ನು ಕನ್ನಡದಲ್ಲಿ ತರುವ ಅಲ್ಪ ಸಾಹಸವಿದು. ಕನ್ನಡಾನುವಾದದಲ್ಲಿರುವ ಭಾಷಾ ನಿರೂಪಣೆಯಲ್ಲಿ ವಿರೂಪತೆ ಕಂಡುಬಂದಲ್ಲಿ ಕ್ಷಮಾಕಾಂಕ್ಷಿಯಾಗಿರುತ್ತೇನೆ.

ಪ್ರಸ್ತುತ ಈ ಲೇಖನವು ನೀರಿನ ಋಣ ಮತ್ತು ವಚನಬದ್ಧತೆಯನ್ನು ಎತ್ತಿ ತೋರಿಸುತ್ತದೆ. ಮೂಲ

ಲೇಖನದಲ್ಲಿರುವ ದೇಶ-ಕಾಲ-ಪಾತ್ರಧಾರರ ಹೆಸರು ಇವುಗಳಲ್ಲಿ ಯಾವುದೇ ಮಾರ್ಪಾಟು ಮಾಡದೇ, ಇದ್ದದ್ದು ಇದ್ದಂತೆಯೇ ಸಹೃದಯರಾದ ಪಾಠಕರಿಗೆ ಅರ್ಪಿಸುತ್ತಿದ್ದೇನೆ.

ಈ ಲೇಖನವು ಪಾಠಕರ ಮನಕ್ಕೆ ಯಃಕಶ್ಚಿತ್ ಮುದ ನೀಡಿದರೂ ಸಾಕು, ನನ್ನ ಈ ಪರಿಶ್ರಮವು ಸಾರ್ಥಕವೆಂದು ಭಾವಿಸುತ್ತೇನೆ.

**ಇಂತಿ ತಮ್ಮವ**

**ರತ್ನಸೂನು**

# ಕಥಾ ಸೂಚಿ

ಪ್ರಿಯ ವಾಚಕರೇ!..........5
ಕಥಾ ಸೂಚಿ..........7
"ಒಂದು ತಂಬಿಗೆ ನೀರು"..........1
ಮುಗ್ಧಭಕ್ತಿ..........15
ತ್ರಿಕೂಟ ನಿರೂಪಣೆ - ಗುರುವಿನಲ್ಲಿ ಬ್ರಹ್ಮ-ವಿಷ್ಣು-ಮಹೇಶ್ವರ ಅಂಶ ಕೂಡಿರುತ್ತದೆ..........33
ಶತ್ರುವನ್ನಲ್ಲ, ಶತ್ರುತ್ವವನ್ನು ನಿವಾರಿಸಿ..........45
ರಾಜಾ ಭರ್ತೃಹರಿ..........64
ಮಾನವತೆ ಮತ್ತು ಜಾತೀಯತೆ..........77
ಗೋ ಭಕ್ತ ರಾಮಸಿಂಹ..........85

# “ಒಂದು ತಂಬಿಗೆ ನೀರು”

ವಸಂತದ ಚೈತ್ರಮಾಸದ ಸಮಯ – ಶಿಶಿರ ಋತುವಿನ ಶೈತ್ಯದಿಂದ ಹೊರಬಂದ ಭೂಮಿಗೆ ಜೀವವನ್ನು ತುಂಬುವ ಸಮಯವು. ಮಧ್ಯ ಭಾರತದ ಗ್ವಾಲಿಯರ್ ರಾಜ್ಯದಲ್ಲಿ ವಿಖ್ಯಾತನಾದ ಡಕಾಯಿತ ಪರಶುರಾಮ ತನ್ನ ಉತ್ತಮ ಅಶ್ವವನ್ನೇರಿ ದಮೋಹ ಜಿಲ್ಲೆಯ ಹಳ್ಳಿಗಳನ್ನು ಹಾದು ಎಲ್ಲಿಗೋ ಹೋಗುತ್ತಿದ್ದ.

ನಡುನೆತ್ತಿಯ ಮೇಲೆ ಸೂರ್ಯನು ತನ್ನ ಉಷ್ಣಕಿರಣಗಳಿಂದ ಜಗತ್ತನ್ನೇ ಉರಿಸುತ್ತಿದ್ದ. ಬಿಸಿಲ ಬೇಗೆಯಿಂದ ಪರಶುರಾಮನ ಕಂಠ ಒಣಗಿ ಹೋಗಿತ್ತು. ಎಲ್ಲಾದರೂ ಹೇಗಾದರೂ ಸ್ವಲ್ಪ ನೀರು ಕುಡಿಯಲು ಸಿಕ್ಕಿದ್ದರೆ ಸಾಕಾಗಿತ್ತು. ಆದರೆ, ಆತನಿಗೆ ಸಮೀಪದಲ್ಲೆಲ್ಲೂ ನದಿಯಾಗಲೀ, ಹಳ್ಳ-ಬಾವಿಯಾಗಲೀ, ಯಾವ ಹಳ್ಳಿಯೂ ಸಹ ಕಾಣುತ್ತಿರಲಿಲ್ಲ. ಬಾಯಾರಿಕೆಯಿಂದ ಸಂಕಟಪಡುತ್ತಿರುವ ಪರಶುರಾಮನಿಗೆ ಒಂದು ಸಣ್ಣ ಚಪ್ಪರ ಕಣ್ಣಿಗೆ ಬಿತ್ತು. ಆ ಚಪ್ಪರದ ಮಧ್ಯದಲ್ಲಿ ಪಾಣಿಪೀಠದ ಮೇಲೆ ಶಿವಲಿಂಗವಿತ್ತು. ಮಳೆಗಾಲದ ಮಳೆಯ ಹನಿಗಳಿಂದಾಗಿ ನೆಲದಲ್ಲಿ ಗುಳಿಗಳಾಗಿದ್ದ ಕಾರಣ ಪಾಣಿಪೀಠದ ಸಹಿತ ಶಿವಲಿಂಗವೂ ಸ್ವಲ್ಪ ವಾಲಿತ್ತು.

ತನ್ನ ಕುದುರೆಯಿಂದ ಕೆಳಗಿಳಿದು ಅದನ್ನು ಮರಕ್ಕೆ ಕಟ್ಟಿದ ಪರಶುರಾಮನು ತನ್ನ ಕತ್ತಿಯಿಂದ ನೆಲವನ್ನು ಕೆರೆದು ಶಿವಲಿಂಗವನ್ನು ಸರಿಪಡಿಸಲಾರಂಭಿಸಿದ ಮತ್ತು ತನ್ನ ಮನದಲ್ಲೇ “ಜಗಕ್ಕೆಲ್ಲಾ ಈ ಮಹದೇವ ಗುರುವು, ಪರಶುರಾಮರಿಗೆ ಗುರುವಾದ ಇವರು ಅದೇ ಹೆಸರುಳ್ಳ ನನಗೂ ಸಹ ಗುರುವೇ ಸರಿ. ಪರಶುರಾಮರು ಜಾತಿಯಲ್ಲಿ ಹೇಗೆ ಬ್ರಾಹ್ಮಣರಾಗಿದ್ದರೋ ಹಾಗೆಯೇ ನಾನು ಸಹ ಬ್ರಾಹ್ಮಣ ವಂಶದವನೇ. ಅವರು ದರ್ಪಿಷ್ಟರು, ಪ್ರಜಾಭಕ್ಷಕರು ಹಾಗೂ ದುರ್ಮಾಗದಲ್ಲಿ

ಸಂಚರಿಸುತ್ತಿದ್ದ ದುಷ್ಟಕ್ಷತ್ರಿಯರನ್ನು ಸಂಹರಿಸಿ ಅವರ ಧನಸಂಪತ್ತಿನಿಂದ ದೀನದಲಿತರ ಪಾಲನೆ-ಪೋಷಣೆ ಮಾಡುತ್ತಿದ್ದರು. ನಾನು ಸಹ ಅಷ್ಟೇ; ಜನರ ರಕ್ತಹೀರಿ ಧನವಂತರಾದ ಶ್ರೀಮಂತರ ಹಣವನ್ನು ಬಲವಂತವಾಗಿ ಕಿತ್ತುಕೊಂಡು ದುರ್ಬಲರು-ದುಃಖಿಗಳಿಗೆ ಹಂಚಿ ಅವರನ್ನು ಪಾಲಿಸುತ್ತೇನೆ. ಅನಾಥರು ಮತ್ತು ದರಿದ್ರರನ್ನು ಸಾಕುತ್ತೇನೆ. ಹೀಗಿರುವಲ್ಲಿ ಆ ಪರಶುರಾಮರನ್ನು ದೈವರೂಪದಿಂದ ನೋಡುವ ಈ ಜನತೆಯು ಅದೇ ಕಾರ್ಯದಲ್ಲಿರುವ ನನ್ನನ್ನು ದರೋಡೆಗಾರನೆಂದು ನೋಡುತ್ತಾರೆ. ಇದೆಂತಹ ನ್ಯಾಯ? ಬಿಡು, ಇವರೆಲ್ಲಾ ನನ್ನನ್ನು ಸುಲಿಗೆಗಾರನೆಂದರೂ ಚಿಂತೆ ಇಲ್ಲ."

ಈ ಗ್ವಾಲಿಯರ್ ರಾಜ್ಯವು ನನ್ನನ್ನು ಹಿಡಿದು ತಂದವರಿಗೆ ಅಥವಾ ತನ್ನ ತಾಣದ ಬಗ್ಗೆ ತಿಳಿಸಿದವರಿಗೆ 5,000=00 ರೂಪಾಯಿಯ ಬಹುಮಾನ ಕೊಡುವುದೆಂದು ಹಾಗೂ ಭಾರತ ಸರ್ಕಾರವು 25,000 ರೂಪಾಯಿಗಳ ಬಹುಮಾನವನ್ನು ಪ್ರಕಟಿಸಿದೆ. ಈ ಸರಕಾರವು ಪ್ರಜಾಶೋಷಣೆಯಷ್ಟೇ ಅಲ್ಲದೇ ಶ್ರೀಮಂತರನ್ನು ರಕ್ಷಿಸುವ ಕೆಲಸ ಮಾಡುತ್ತದೆ. ಆದರೆ, ಬಡವರಿಗಾಗಿ, ದರಿದ್ರರೂ, ದುಃಖಿಗಳೂ ಆದ ನಮ್ಮ ಜನತೆಯ ಕೆಲಸವನ್ನು ಮಾಡುವೆನೋ ಅಲ್ಲಿಯ ತನಕ ಏನೂ ಭಯವಿಲ್ಲ. ಎಲ್ಲಿಯವರೆಗೆ ಈ ಮಹದೇವನ ಹಸ್ತ ನನ್ನ ಬೆನ್ನ ಮೇಲಿರುವುದೋ ಅಲ್ಲಿಯ ತನಕ ಯಾರೂ ನನ್ನನ್ನು ಸೆರೆಹಿಡಿಯಲಾರರು.

ಆದರೆ, ಇದೇನು? ಈ ದಿನ ಕಡು ಬಾಯಾರಿಕೆಯಿಂದ ಬಳಲುತ್ತಿರುವ ನನಗೆ ಕುಡಿಯಲು ಒಂದು ಹನಿ ನೀರು ಲಭಿಸಲಾರದೇ?! ಇದೇ ಬಾಯಾರಿಕೆಯು ನನ್ನ ಸಾವಿಗೆ ಕಾರಣವಾಗಬಹುದೇ!

ಹೇ ಮಹದೇವ! ಏನಿದು ನಿನ್ನ ಆಟ. ನನ್ನ ಅನುಯಾಯಿಗಳು ತಮ್ಮ ಕುದುರೆಯನ್ನೇರಿ ನನ್ನನ್ನು ಎಲ್ಲೆಡೆ ಹುಡುಕುತ್ತಿರಬಹುದು. ಅವರಿಗೆ ನಾನು ಈ ಸ್ಥಾನದಲ್ಲಿ ಸತ್ತಿರುವ

ವಿಚಾರ ಗೊತ್ತಾದರೆ ನೇತ್ರಹೀನರಾಗಿ ಅವರು ಎಷ್ಟು ಪರಿತಪಿಸಬಹುದು!

ಬಾಬಾ! ಮಹಾದೇವ! ಏನು? ಒಂದು ತಂಬಿಗೆ ನೀರು ಲಭಿಸದೇ ಇಲ್ಲೇ ನನ್ನ ಮರಣವಾಗಬಹುದೇ! ಎಂದು ಬಗೆಬಗೆಯಾಗಿ ಚಿಂತಿಸುತ್ತಿರುವ ಸಮಯದಲ್ಲೇ ಓರ್ವ ವೃದ್ಧೆಯು ಕೈಯಲ್ಲಿ ನೀರಿನ ತಂಬಿಗೆ ಮತ್ತು ಒಂದು ಸಣ್ಣ ಬಟ್ಟಲಲ್ಲಿ ಬತಾಸನ್ನೂ (ಸಕ್ಕರೆ ಕಾಳು) ತೆಗೆದುಕೊಂಡು ಅಲ್ಲಿಗೆ ಬಂದಳು. ಆಕೆಯನ್ನು ಕಂಡ ಪರಶುರಾಮನು –ಅಜ್ಜಿ! ನೀನು ಎಲ್ಲಿಂದ ಬರುತ್ತಿರುವೆ? ನಿನ್ನ ಊರು ಯಾವುದು? ಎಂದು ಪ್ರಶ್ನಿಸಲು ಅದಕ್ಕುತ್ತರವಾಗಿ

**ಅಜ್ಜಿ –** ಮಗೂ! ಇಲ್ಲೇ ಹತ್ತಿರದಲ್ಲಿ ಸೇಖೂಪುರ ಎಂಬ ಹೆಸರಿನ ಗ್ರಾಮವಿದೆ. ನನ್ನ ಮನೆಯೂ ಸಹ ಅಲ್ಲೇ. ನನ್ನೂರಿನ ಸುತ್ತ ಕಾಡಿರುವ ಕಾರಣ ಅದು ಇಲ್ಲಿಗೆ ಕಾಣಿಸುವುದಿಲ್ಲ. ನಾನು ಗೊಲ್ಲರ ವಂಶದವಳು.

**ಪರಶುರಾಮ –** ಸರಿ ಬಿಡು, ಇಲ್ಲಿಗೆ ಬಂದ ಕಾರಣ?

ವೃದ್ಧೆಯು ನೀರಿನ ತಂಬಿಗೆ ಮತ್ತು ಬತಾಸನ್ನು ಅಲ್ಲೇ ಪಕ್ಕದಲ್ಲಿ ಇರಿಸಿ ಅಳಲಾರಂಭಿಸಿದಳು. ಈತ ಪರಿ-ಪರಿಯಾಗಿ ಸಂತೈಸಿದರೂ ಸಹ ಅಳು ಮಾತ್ರ ನಿಲ್ಲಲಿಲ್ಲ. ಕಡೆಗೆ ತನಗೆ ತಾನೇ ದುಃಖವನ್ನು ನುಂಗಿಕೊಂಡು ಬಾಯಿಬಿಟ್ಟಳು.

**ಅಜ್ಜಿ –** ಏನು ಹೇಳಲಿ? ನೋಡು ಮಗು. ನಾನು ನನ್ನ ಸಾವನ್ನು ಎದುರು ನೋಡುತ್ತಿದ್ದೇನೆ, ನನ್ನ ಅಂತಿಮ ಕ್ಷಣಗಳನ್ನು ಎದುರಿಸುತ್ತಿದ್ದೇನೆ. ನೋಡು, ನನಗೆ ನಿನ್ನಷ್ಟೇ ವಯಸ್ಸಿನವನಾದ ಮಗ ಬಿಹಾರಿ ಮತ್ತು ಮುದ್ದಿನ ಸೊಸೆ – 09 ವರ್ಷದ ಮೊಮ್ಮಗಳು ಚಂಪಾ ಸಂತೋಷದಿಂದಿದ್ದೆವು. ಬಿಹಾರಿಯೇ ಇಲ್ಲಿ ಚಪ್ಪರ ಕಟ್ಟಿ ಎಲ್ಲಿಂದಲೋ ಈ ಶಿವಲಿಂಗವನ್ನು ತಂದು ಇಲ್ಲಿ ಸ್ಥಾಪಿಸಿ ಪ್ರತಿದಿನ ಪೂಜಿಸುತ್ತಿದ್ದ. ಈ ಸುಖ-ಸಂತೋಷದಿಂದ ಕೂಡಿದ ನಮ್ಮ ಸಂಸಾರಕ್ಕೆ ಯಾರ ಕೆಟ್ಟ ದೃಷ್ಟಿ ತಗುಲಿತೋ ತಿಳಿಯದು. ಹೋದ

ವರ್ಷ ಈ ಊರಿಗೆ ಮಹಾಮಾರಿ (ಪ್ಲೇಗ್) ಜ್ವರ ಬಂದಿತ್ತು. ಅದು ನನ್ನ ಮಗ ಬಿಹಾರಿ ಮತ್ತು ಸೊಸೆಯನ್ನು ಆಹುತಿ ತೆಗೆದುಕೊಂಡಿತು. ಮಗ ಸೊಸೆ ಇಬ್ಬರೂ ತಮ್ಮ ಮಗಳನ್ನು ನನಗೆ ಒಪ್ಪಿಸಿ ಮಹದೇವನ ಪಾದ ಸೇರಿದರು. ಅಳುವುದಕ್ಕಾಗಿ ನಾನೊಬ್ಬಳು ಉಳಿದುಕೊಂಡೆ. ನನ್ನ ಮಗ ಸೊಸೆ ಎಂದು ಭಗವಂತನ ಪಾದ ಸೇರಿದರೋ, ಅಂದಿನಿಂದ ಪ್ರತಿದಿನ ನಾನಿಲ್ಲಿಗೆ ಬಂದು ಮಹದೇವನಿಗೆ ನೀರನ್ನರ್ಪಿಸಿ ಮಿಠಾಯಿ ಇಟ್ಟು ಕೆಲಕಾಲ ಅತ್ತು ನಂತರ ಮನೆಗೆ ಹೋಗುತ್ತೇನೆ.

ಈ ವರ್ಷದ ವೈಶಾಖದಲ್ಲಿ ನನ್ನ ಮೊಮ್ಮಗಳು ಚಂಪಾಳ ಮದುವೆ ಇದೆ. ಆದರೆ, ಮನೆಯಲ್ಲಿ ಏನೆಂದರೆ ಏನೂ ಇಲ್ಲ. ಈ ಪರಿಸ್ಥಿತಿಯಲ್ಲಿ ನಾವಿರುವಾಗ ಮಹದೇವನು ಹೇಗೆ ಚಂಪಾಳ ವಿವಾಹವನ್ನು ಮಾಡಿಸುತ್ತಾನೋ ಗೊತ್ತಿಲ್ಲ.

**ಪರಶುರಾಮ** – ಚಿಂತಿಸಬೇಡ ಅಜ್ಜಿ! ಈ ಮಹಾದೇವನು ಚೆನ್ನಾಗಿಯೇ ಚಂಪಾಳ ವಿವಾಹವನ್ನು ಮಾಡಿಸುತ್ತಾನೆ. ಅದಿರಲಿ, ನನಗೀಗ ತುಂಬಾ ಬಾಯಾರಿಕೆಯಾಗಿ ಕಂಠ ಒಣಗಿಹೋಗಿ ಪ್ರಾಣವೇ ಹೋಗುವಂತಿದೆ. ದಯವಿಟ್ಟು ನನಗೆ ಸ್ವಲ್ಪ ನೀರನ್ನು ಕುಡಿಸುತ್ತೀಯಾ?

**ಅಜ್ಜಿ**– ಅಯ್ಯೋ ಮಗು! ಇದಕ್ಕಿಂತ ಪುಣ್ಯದ ಕಾರ್ಯವೇನಿದೆ ಹೇಳು.

ಪ್ರೇಮದಿಂದ, "ತೆಗೆದುಕೋ ಈ ನೀರನ್ನು ಕುಡಿ. ಈ ಬತಾಸನ್ನು ತಿನ್ನು ನೀನು. ಈ ಕೆಲಸ ಮಾಡಿದರೆ ಅದು ಮಹಾದೇವನಿಗೆ ಸಮರ್ಪಿತವಾಯಿತು ಎಂದುಕೊಳ್ಳುತ್ತೇನೆ. ಜನಸೇವೆಯೇ ಜನಾರ್ಧನನ ಸೇವೆಯಲ್ಲವೇ? ಆತ್ಮವೇ ಪರಮಾತ್ಮವಲ್ಲವೇ! ಕುಡಿ ಮಗು. ನಾನು ಮತ್ತೊಮ್ಮೆ ಇಲ್ಲಿಗೆ ಬಂದು ಈ ಮಹದೇವನಿಗೆ ಜಲವನ್ನರ್ಪಿಸುವೆ" ಎಂದು ಹೇಳಿ ಬತಾಸು ಮತ್ತು ನೀರನ್ನು ಪರಶುರಾಮನ ಮುಂದೆ ಇರಿಸಿದಳು. ಈತ ಸಿಹಿಯನ್ನು ತಿಂದು ಶೀತಲವಾದ ಜಲವನ್ನು ಕುಡಿದು ಸಂತೃಪ್ತನಾಗಿ, "ಎಂದು ಚಂಪಾಳ ವಿವಾಹ?" ಎಂದು ಕೇಳಿದ.

**ಅಜ್ಜಿ -** ಇದೇ ವೈಶಾಖ ಮಾಸ ಶುಕ್ಲ ಪಕ್ಷದ ಪಂಚಮಿ ಎಂದು ನಿರ್ಣಯಿಸಲಾಗಿದೆ. ಕೇಸರಿಪುರದಿಂದ ಗಂಡಿನ ಕಡೆಯವರು ಬರಲಿದ್ದಾರೆ.

**ಪರಶುರಾಮ –** ಆ ಮಹಾದೇವ ಅದ್ದೂರಿಯಿಂದಲೇ ಚಂಪಾಳ ವಿವಾಹವನ್ನು ಮಾಡಿಸುತ್ತಾನೆ.

**ಅಜ್ಜಿ** - ನೀನು ಯಾರು ಮಗು?

**ಪರಶುರಾಮ** - ನಿನ್ನ ಇನ್ನೊಬ್ಬ ಮಗನೆಂದು ಭಾವಿಸು.

**ಅಜ್ಜಿ** - ನೂರಾರು ವರ್ಷ ಚೆನ್ನಾಗಿರು. ನನ್ನ ಆಯಸ್ಸು ಸಹ ನಿನಗೆ ಸೇರಲೆಂದು ಕೋರಿಕೊಳ್ಳುತ್ತೇನೆ. ನಿನ್ನ ಮುಖವನ್ನು ನೋಡಿದರೆ ನೀನು ಬಹಳ ಹಸಿದಿರುವೆ ಎಂದು ಕಾಣುತ್ತಿದೆ. ನೀನು ಊರಿಗೆ ಬಂದರೆ ನಾನು ನಿನ್ನ ಹಸಿವನ್ನು ನೀಗಿಸಲು ಪ್ರಯತ್ನಿಸುತ್ತೇನೆ.

**ಪರಶುರಾಮ** - ನೀನು ಹೇಳುವಂತೆ ನಿಜವಾಗಿಯೂ ನಾನು ಹಸಿದಿರುವೆ. ಆದರೂ ನಿನ್ನ ಊರಿಗೆ ಬರಲಾರೆ. ನನ್ನ ಹೆಸರು ಪರಶುರಾಮ ಎಂದು, ಜನರಲ್ಲೆರೂ ನನ್ನನ್ನು ದರೋಡೆಗಾರನೆಂದು ಕರೆಯುತ್ತಾರೆ. ಪ್ರಸಿದ್ಧ ದರೋಡೆಗಾರನಾದ ಸುಲ್ತಾನನನ್ನು ಸೆರೆಹಿಡಿದ ಆಗ್ರಾದ ಕ್ಯಾಪ್ಟನ್ ಯಂಗ್ ಸಾಹೇಬನು ಈಗ ನನ್ನನ್ನು ಸೆರೆಹಿಡಿಯಲೋಸುಗ ತನ್ನ 30 ಜನ ಸೈನಿಕರೊಡನೆ ಹಿಂಬಾಲಿಸುತ್ತಿದ್ದಾನೆ. ಹಾಗಾಗಿ, ನಿನ್ನ ಊರಿಗೆ ನಾನು ಬರಲಾರೆ ಚಂಪಾಳ ವಿವಾಹ ಎಂದಿದೆಯೋ ಅಂದು ಐದು ನಿಮಿಷಕ್ಕಾದರೂ ಸರಿ ಖಂಡಿತವಾಗಿಯೂ ನಿನ್ನೂರಿಗೆ ಬರುವೆ.

**ಅಜ್ಜಿ** - ನೀನು ನನಗಂತೂ ದೇವತಾ ಪುರುಷನಂತೆ ಕಾಣುವೆ.

ಕುದುರೆಯನ್ನೇರುತ್ತಾ ಪರಶುರಾಮನು ಹಿಂತಿರುಗುತ್ತಾ ಅಜ್ಜಿಯನ್ನು ನೋಡಿ, ಓಹ್! ಅಜ್ಜಿ, ಈಗಿನ ಕಾಲವೇ ಹೀಗಿದೆ. ಕಲಿಯುಗವಲ್ಲವೇ. ಉದಾರಿ-ಪರೋಪಕಾರಿ ಹಾಗೂ ಸಾಹಸಿಯನ್ನು ಕಳ್ಳನೆಂದು, ದೊಡ್ಡ ಮಹಲುಗಳಲ್ಲಿ ಕುಳಿತು

ಬಡವರ ರಕ್ತ ಹೀರಿ ಧನವಂತರಾದವರನ್ನು ಶ್ರೀಮಂತನೆಂದು ಕರೆಯುತ್ತಾರೆ. ದುರಾತ್ಮರು ಅಧಿಕಾರ ನಡೆಸುತ್ತಿದ್ದರೆ, ಧರ್ಮಾತ್ಮರು ಭಿಕ್ಷೆ ಬೇಡುತ್ತಾರೆ. ಪ್ರತಿವ್ರತೆಯು, ಸಾಧ್ವಿಯು ಹರಕು ಬಟ್ಟೆಯನ್ನು ಉಡುತ್ತಿದ್ದರೆ, ವೇಶ್ಯೆಯು ರೇಷ್ಮೆ ವಸ್ತ್ರವನ್ನು ಧರಿಸುತ್ತಾಳೆ. ಕಲಿಗಾಲವಲ್ಲವೇ ತಾಯಿ. ನನ್ನ ಹೆಸರನ್ನು ನೆನಪಿನಲ್ಲಿಟ್ಟುಕೋ ಸಾಕು. ನಾನು ಬರುತ್ತೇನೆ ಎಂದು ಹೇಳಿ ಅಲ್ಲಿಂದ ಹೊರಟು ಹೋದ. ಮುದುಕಿಯು ಸಹ ಮತ್ತೊಮ್ಮೆ ಮನೆಯಿಂದ ಸಿಹಿ ಮತ್ತು ನೀರನ್ನು ಕೊಂಡು ಮಹದೇವನಿಗೆ ಅರ್ಪಿಸಿ ಮನೆಗೆ ಹಿಂತಿರುಗಿದ ನಂತರ ಚಂಪಾಳ ಬಳಿಗೆ ಹೋಗಿ ತಾನು ಪರಶುರಾಮನನ್ನು ಭೇಟಿಯಾದದ್ದು, ಅಲ್ಲಿ ನಡೆದ ಮಾತುಕತೆ ಎಲ್ಲವನ್ನು ವಿಷದವಾಗಿ ಅರುಹಿದಳು. ಈ ಸಮಾಚಾರವನ್ನು ಚಂಪಾ ಒಬ್ಬಳೇ ಅಲ್ಲ, ಆ ಊರಿನ ಮುಖಂಡನೂ ಸಹ ಕೇಳಿಸಿಕೊಂಡಿದ್ದ.

ಆತ ಮನದಲ್ಲೇ ಮಂಡಿಗೆಯನ್ನು ತಿನ್ನುತ್ತಾ, ನನ್ನ ಭಾಗ್ಯದ ಬಾಗಿಲು ತೆರೆಯಲಿದೆ. ಈ ಸಮಾಚಾರವನ್ನು ಸರ್ವ ಪ್ರಥಮವಾಗಿ ಕ್ಯಾಪ್ಟನ್ ಸಾಹೇಬರಿಗೆ ತಿಳಿಯುವಂತೆ ಮಾಡಿದರೆ ಪುರಸ್ಕಾರ ರೂಪದಲ್ಲಿ ಹೆಚ್ಚಿನ ಧನ ನನಗೆ ಸಿಗುತ್ತದೆ ವಿಳಂಬ ಮಾಡಬಾರದು ಎಂದು ನಿರ್ಣಯಿಸಿ ತತ್-ಕ್ಷಣವೇ ಪೊಲೀಸ್ ಕಚೇರಿಗೆ ತೆರಳಿ, ನೀವು ಹುಡುಕುತ್ತಿರುವ ಕಳ್ಳ ಪರಶುರಾಮನು ಇಂದಿಗೆ ಆರು ದಿನಗಳ ನಂತರ ಸೇಖುಪುರದಲ್ಲಿರುವ ಗೊಲ್ಲ ಬಿಹಾರಿಯ ಮಗಳು ಚಂಪಾಳ ಮದುವೆಗೆ ಅವಶ್ಯಕವಾಗಿ ಬರುತ್ತಾನೆ. ಕ್ಯಾಪ್ಟನ್ ಸಾಹೇಬರಿಗೆ ಈ ವಿಚಾರವನ್ನು ಅವಶ್ಯವಾಗಿ ತಿಳಿಸಬೇಕು. ಒಂದು ವೇಳೆ ಅಂದು ಅವನನ್ನು ಸೆರೆಹಿಡಿಯದಿದ್ದಲ್ಲಿ ಮತ್ತೆಂದೂ ಸಾಧ್ಯವಾಗದು ಎಂದು ವರದಿ ಸಲ್ಲಿಸಿದ.

ವೈಶಾಖ ಶುಕ್ಲ ಚತುರ್ಥಿಯಂದು ಸೇಖೂಪುರದ ಗೊಲ್ಲ ಬಿಹಾರಿಯ ಮನೆಯ ಮುಂದೆ ಐದು ಎತ್ತಿನ ಬಂಡಿಗಳು ನಿಂತಿದ್ದವು. ಮೊದಲ ಗಾಡಿಯಲ್ಲಿ ಅಕ್ಕಿ-ಬೇಳೆ-ಗೋಧಿಹಿಟ್ಟಿನ ಮೂಟೆಗಳಿದ್ದರೆ, ಎರಡನೆಯ ಗಾಡಿಯಲ್ಲಿ ಸಕ್ಕರೆ-ತುಪ್ಪ-ಎಣ್ಣೆ-ಬೆಲ್ಲ ಮತ್ತು ಬಗೆ-ಬಗೆಯ ತರಕಾರಿಗಳು ತುಂಬಿದ್ದವು.

ಮೂರನೆಯದರಲ್ಲಿ ಹೊಚ್ಚ ಹೊಸ ಸೀರೆಗಳು, ಬಟ್ಟೆಗಳು ಮತ್ತು ಪಂಚೆ ತುಂಬಿದ್ದವು. ನಾಲ್ಕನೆಯದರಲ್ಲಿ ಗೃಹಸ್ಥ ನಡೆಸಲು ಉಪಯುಕ್ತವಾದ ಎಲ್ಲಾ ಪಾತ್ರೆ-ಪರಡಿಗಳೂ ಮತ್ತು ಕಡೆಯ ಗಾಡಿಯಲ್ಲಿ ಬಗೆ-ಬಗೆಯ ಮಿಠಾಯಿಗಳು ಭಕ್ಷ್ಯಗಳು ತುಂಬಿತ್ತು.

ಇವೆಲ್ಲವನ್ನೂ ಬಿಹಾರಿಯ ಮನೆಗೆ ತಂದು ತುಂಬಿದ ಗಾಡಿಯವರನ್ನು ಊರಿನ ಜನರು ಕುತೂಹಲದಿಂದ – ನೀವ್ಯಾರು? ಎಲ್ಲಿಯವರು? ಈ ಸಾಮಾನುಗಳನ್ನು ಇಲ್ಲಿಗೆ ಕಳುಹಿಸಿದ ಆ ಮಹಾನುಭಾವನಾರು? ಎಂದು ಕೇಳಲು ಅವರು – ನೋಡಿ ಸ್ವಾಮಿ, ನಾವು ದಮೋಹದಲ್ಲಿ ವಾಸಿಸುವವರು, ಬಾಡಿಗೆಗಾಗಿ ಗಾಡಿ ನಡೆಸುವವರು. ಓರ್ವ ವ್ಯಕ್ತಿ ನಮ್ಮ ಬಳಿಗೆ ಬಂದು ಇದೆಲ್ಲಾ ವಸ್ತುವನ್ನು ಇಲ್ಲಿಗೆ ತಲುಪಿಸಬೇಕೆಂದು ಆದೇಶಿಸಿ ಬಾಡಿಗೆ ಮತ್ತು ಕೂಲೀ ಹಣವನ್ನು ಕೊಟ್ಟು ಕಳುಹಿಸಿದರು. ಇಷ್ಟಲ್ಲದೆ, ಅವರು ಯಾರು? ಎಲ್ಲಿಯವರು? ಎಂಬೀ ವಿಚಾರಗಳೇನೂ ತಿಳಿಯದು ಎಂದು ಹೇಳಿ ಅಲ್ಲಿಂದ ಹೊರಟು ಹೋದರು. ಈ ಅದ್ಭುತ ಮತ್ತು ವಿಸ್ಮಯ ಘಟನೆಯಿಂದ ಗ್ರಾಮದ ಜನರು ಆಶ್ಚರ್ಯಚಕಿತರಾಗಿದ್ದರು. ಆದರೆ, ಈ ಘಟನೆಯ ರಹಸ್ಯವು ಇಬ್ಬರಿಗೆ ಮಾತ್ರ ತಿಳಿದಿತ್ತು, ಆ ಅಜ್ಜಿಗೆ ಮತ್ತು ಗ್ರಾಮದ ಮುಖಂಡನಿಗೆ ಪರಶುರಾಮನೇ ಈ ಎಲ್ಲಾ ಸಾಮಾನು ಕಳುಹಿಸಿದ್ದಾನೆಂದು.

ತಕ್ಷಣವೇ ಆ ಮುಖಂಡನು ಪೊಲೀಸ್ ಠಾಣೆಗೆ ತೆರಳಿ ಈ ವಿಚಿತ್ರ ಘಟನೆಯನ್ನು ತಿಳಿಸಿ ನಾಳೆ ಪಂಚಮೀ ಬೆಳಿಗ್ಗೆ ಪರಶುರಾಮ ಕನ್ಯಾದಾನದ ವೇಳೆಗೆ ನಿಶ್ಚಿತವಾಗಿ ಬರುತ್ತಾನೆ. ವಿವಾಹದ ಸಮಯಕ್ಕೆ ಬರುತ್ತೇನೆಂದು ಅಜ್ಜಿಗೆ ವಚನವನ್ನು ನೀಡಿದ್ದಾನೆ. ಹಾಗಾಗಿಯೇ ಇಂದಿನವರೆವಿಗೂ ಆತ ಈ ಕಡೆಗೆ ಬಂದಿಲ್ಲ. ನಾಳೆ ಕನ್ಯಾದಾನದ ಸಮಯಕ್ಕೆ ಖಂಡಿತವಾಗಿಯೂ ಬರುತ್ತಾನೆ. ಪ್ರಪಂಚವೇ ಉರುಳಲಿ ಇಲ್ಲ ಸೂರ್ಯನು ಪಶ್ಚಿಮದಲ್ಲೇ ಉದಯಿಸಲಿ ಈ ಪರಶುರಾಮ ಮಾತ್ರ ತನ್ನ ಕೊಟ್ಟ ಮಾತಿನ ಅನುಸಾರ ವಚನವನ್ನು ಪಾಲಿಸಲು ಬಂದೇ ಬರುತ್ತಾನೆ ಎಂದು ವರದಿಯನ್ನು ಒಪ್ಪಿಸಿದ.

ಅಂದೇ ರಾತ್ರಿ ಯಂಗ್ ಸಾಹೇಬನು ಕುದುರೆ ಮಾರಾಟಗಾರರ ರೂಪದಲ್ಲಿ ಇರುವ ತನ್ನ 30 ಜನ ಸೈನಿಕರ ಸಂಗಡ ಸೇಖೂಪುರಕ್ಕೆ ಬಂದು ಗ್ರಾಮದ ಮುಖಂಡನ ಮನೆಯಲ್ಲಿ ಬೀಡುಬಿಟ್ಟ. ಆ ಊರಿನವರಿಗೆ ಅನ್ನಿಸಿತ್ತು, ಜಾತ್ರೆಯಲ್ಲಿ ಕುದುರೆ ಮಾರಾಟ ಮಾಡಲು ಬಂದಿರುವ ಇವರು ಇಂದು ಇಲ್ಲಿಗೆ ಬಂದಿರುವರು ಎಂದು ತಿಳಿದಿದ್ದರು. ಆದರೆ, ಈ ಸತ್ಯವು ಗ್ರಾಮದ ಮುಖಂಡ ಮತ್ತು ಗ್ರಾಮ ರಕ್ಷಕನನ್ನು ಬಿಟ್ಟರೆ ಮತ್ತಾರಿಗೂ ತಿಳಿದಿರಲಿಲ್ಲ.

ವೈಶಾಖ ಶುಕ್ಲಪಕ್ಷದ ಪಂಚಮಿಯ ಉಷೋದಯ ಸಮಯದಲ್ಲಿ ಪರಶುರಾಮನು ತನ್ನ ಕುದುರೆಯನ್ನು ಹತ್ತಲು ರಿಕಾಬಿನ ಮೇಲೆ ಕಾಲಿಟ್ಟಿದ್ದನಷ್ಟೇ, ಅಷ್ಟರಲ್ಲಿ ಆ ಕುದುರೆಯು ಒಂಟಿ ಸೀನಿತು. ಅವನ ಸಮೀಪದಲ್ಲೇ ಇದ್ದ ಪೇಜಾವರದವನು, B.A ಡಿಗ್ರಿ ಪಡೆದವನೂ ಆದ ರಹೀಮನು ಪರಶುರಾಮನ ಆಪ್ತ ಮತ್ತು ಒಲುಮೆಯ ಅಂಗರಕ್ಷಕನಾಗಿದ್ದು, ಕುದುರೆ ಸವಾರಿ ಲಕ್ಷ್ಯವನ್ನು ಸಾಧಿಸಿ ಗುಂಡು ಹಾರಿಸುವಲ್ಲಿ ನಿಷ್ಣಾತನಿದ್ದ. ಈತ ಪರಶುರಾಮನನ್ನು ತಡೆದ.

**ರಹೀಮ** – ನೀವೀಗ ಎಲ್ಲಿಗೆ ತೆರಳಲಿದ್ದೀರೆಂದು ಕೇಳಬಹುದೇ?

**ಪರಶುರಾಮ** – ಸೇಖೂಪುರಕ್ಕೆ, ಚಂಪಾಳ ಕನ್ಯಾದಾನ ಮಾಡಲು

**ರಹೀಮ** – ಕುದುರೆ ಒಂಟಿ ಸೀನಿದೆ. ಇದು ಶುಭಶಕುನವಲ್ಲ.

**ಪರಶುರಾಮ** – ಮುಸಲ್ಮಾನನಾಗಿ ಈ ಶಕುನ-ಅಪಶಕುನಗಳಲ್ಲಿ ವಿಶ್ವಾಸ ಇಡುವೆಯಾ? ನೋಡು, ನಾನು ನೆನ್ನೆಯೇ ವಿಸ್ತಾರವಾಗಿ ನಿನಗೆ ಹೇಳಿದ್ದೇನೆ. ಈ ಅಪಶಕುನವನ್ನು ಪ್ರಧಾನವಾಗಿಟ್ಟುಕೊಂಡು ನಾನು ಕನ್ಯಾದಾನವನ್ನು ಕೈ ಬಿಡುವುದೇ. ಅದೆಂದೂ ಸಾಧ್ಯವಿಲ್ಲ. ಈ ಸಮಯ ನನ್ನನ್ನು ತಡೆಯಬೇಡ.

**ರಹೀಮ** – ಶಕುನ-ಅಪಶಕುನ ಮಾತಲ್ಲ. ಪ್ರಧಾನವಾಗಿ ಹೇಳುವುದೇನೆಂದರೆ, ನೆನ್ನೆ ಸಂಜೆ ಯಂಗ್ ಸಾಹೇಬನು ತನ್ನ ಮೂವತ್ತು ಜನ ಸೈನಿಕರ ಸಂಗಡ ಇದೇ ರಸ್ತೆಯಲ್ಲಿ ಸೇಖೂಪುರಕ್ಕೆ ಹೋಗುತ್ತಿದ್ದ. ಅವನ ಸೈನಿಕರೆಲ್ಲಾ ಕುದುರೆ ವರ್ತಕರ ರೂಪದಲ್ಲಿದ್ದರು. ನನ್ನ ದೃಷ್ಟಿಯು ನನಗೆ ಮೋಸ ಮಾಡುವುದಿಲ್ಲ.

**ಪರಶುರಾಮ –** ಹೋಗಲಿ ಬಿಡು. ಆ ಸಾಹೇಬ ನನ್ನನ್ನೇನು ಮಾಡಬಲ್ಲ?

**ರಹೀಮ –** ನನಗೆ ತಿಳಿದಿರುವಂತೆ ಆ ಹುಚ್ಚು ಮುದುಕಿಯು ನೀವು ಮದುವೆಗೆ ಬರುವ ವಿಚಾರ ಎಲ್ಲರಿಗೂ ಹೇಳಿರಬಹುದು. ನಗರ ರಕ್ಷಕರಿಗೂ ಈ ವಿಚಾರ ತಿಳಿದಿರಬಹುದು. ಹಾಗಾಗಿಯೇ ಯಂಗ್ ಸಾಹೇಬನು ನಿಮ್ಮನ್ನು ಸೆರೆಹಿಡಿಯಲೆಂದೇ ತನ್ನ ದಳದಿಂದ ಕೂಡಿ ಅಲ್ಲಿಗೆ ಹೋಗಿರಬಹುದು.

**ಪರಶುರಾಮ** – ಇರಬಹುದು. ನಿನ್ನ ಮಾತು ಸತ್ಯವೇ ಆಗಿದ್ದರೂ ಸಹ ಈ ಭಯದಿಂದ ನನ್ನೀ ಯಾತ್ರೆಯನ್ನು ನಿಲ್ಲಿಸಿ ವಚನಭ್ರಷ್ಟನಾಗಲಾರೆ. ಆ ವಿಕಟ ಸಂದರ್ಭದಲ್ಲಿ ನನಗೆ ನೀರು ಕುಡಿಸಿ ಪ್ರಾಣ ರಕ್ಷಿಸಿದವರ ಋಣವನ್ನಾದರೂ ತೀರಿಸಲೇಬೇಕಲ್ಲವೇ! ಜಲಋಣವನ್ನು ತೀರಿಸುವುದಕ್ಕಾದರೂ ನಾನಲ್ಲಿಗೆ ಹೋಗಲೇಬೇಕು.

**ರಹೀಮ** – ಋಣ ವಿಮೋಚನೆ-ಪಾಪ ವಿಮೋಚನೆಗಳು ಸದಾ ಉತ್ತಮವೇ, ಸತ್ಕಾರ್ಯವೇ ಸರಿ. ಆದರೂ ನಿಮ್ಮನ್ನು ಒಂಟಿಯಾಗಿ ಅಲ್ಲಿಗೆ ಕಳುಹಿಸಲಾರೆ. ನಿಮ್ಮೊಡನೆ ನಾನೂ ಬರುವೆ.

**ಪರಶುರಾಮ** – ಬೇಡ, ನಿನ್ನ ಅಗತ್ಯವೇನಿಲ್ಲ. ನೀನಿಲ್ಲಿಯೇ ಇರು.

**ರಹೀಮ -** ನಿಮ್ಮನ್ನು ಒಂಟಿಯಾಗಿ ಮಾತ್ರ ನಾನು ಕಳುಹಿಸುವುದಿಲ್ಲ. ವಿಪತ್ತಿನ ಸಮಯದಲ್ಲಿ ಯಾರು ಸಹಾಯ ಮಾಡುತ್ತಾರೋ, ಅವರೇ ನಿಜವಾದ ಸಹಾಯಕರು. ನಿಮ್ಮ

ಉಪ್ಪನ್ನು ತಿಂದ ನಾನು ಅದರ ಋಣದಿಂದಲೂ ಮುಕ್ತನಾಗಬೇಕೆಂದು ಬಯಸುವಲ್ಲಿ ತಪ್ಪೇನು? ನಿಮ್ಮ ಪ್ರಾಣ ಹೋಗುವ ಸಂದರ್ಭ ಕಂಡುಬಂದಲ್ಲಿ ನಿಮಗಿಂತ ಮೊದಲು ನನ್ನ ಪ್ರಾಣ ಹೋಗಲಿ.

**ಪರಶುರಾಮ:** ಹಾಗಾದರೆ, ಬಾ ಹೊರಡೋಣ. ಸಮಯ ಮೀರುತ್ತಿದೆ.

ಇಬ್ಬರು ಕುದುರೆಯನ್ನೇರಿ ನಾಗಾಲೋಟದಿಂದ ಓಡಿಸಿದರೂ ಸೇಖೂಪುರ ತಲುಪುವ ವೇಳೆಗೆ ಮಾಂಗಲ್ಯಧಾರಣೆಯಾಗಿ ಕನ್ಯಾದಾನದ ಸಮಯವಾಗಿತ್ತು.

ತನ್ನ ಕುದುರೆಯ ಲಗಾಮನ್ನು ರಹೀಮನ ಕೈಗಿತ್ತು ಮನೆಯೊಳಗೆ ಪ್ರವೇಶಿಸಿದ ಪರಶುರಾಮನು ಸರ್ವ ಪ್ರಥಮನಾಗಿ ಐದು ನಾಣ್ಯಗಳ ಸಂಗಡ ತಂದೆಯ ಸ್ಥಾನದಲ್ಲಿದ್ದು ಕನ್ಯಾದಾನ ಮಾಡಿ ಮನೆಯಿಂದ ಹೊರಡಲು ಸಿದ್ಧನಾದನು. ಅಜ್ಜಿಯ ಸಂತೋಷವಂತೂ ಮೇರೆ ಮೀರಿ ಮಾತುಗಳನ್ನು ತಡೆಹಿಡಿದಿತ್ತು. ಆನಂದಾಶ್ರುವಂತೂ ಗಂಗಾಪ್ರವಾಹದಂತೆ ಎರಡೂ ಕಣ್ಣುಗಳಿಂದ ಪ್ರವಹಿಸುತ್ತಿತ್ತು.

ಅಲ್ಲಿ ನೆರೆದಿರುವ ಸಮಸ್ತ ಗ್ರಾಮವಾಸಿಗಳಿಗೆ ನೆನ್ನೆ ಮದುವೆಗೆ ಬೇಕಾಗುವ ಸಮಸ್ತ ಸಾಮಗ್ರಿಗಳನ್ನು ಕಳುಹಿಸಿದ ಮಹಾಪುರುಷ ಇವನೇ ಎಂದು ಅರಿತ ಮೇಲಂತೂ ಆನಂದ-ಕೃತಜ್ಞತೆ ಭಾವದಿಂದ ಕೂಡಿ ಅವನನ್ನು ಸುತ್ತುವರಿದು ಆತನ ಸೇವೆ ಮಾಡುವ ಸಲುವಾಗಿ ಸಿದ್ಧರಾದರು. ಅಲ್ಲಿದ್ದ ಓರ್ವ ಗ್ರಾಮಸ್ಥ –

ವಾಹ್! ವಾಹ್!! ಇದೇನು ಸ್ವಾಮಿಗಳೇ ನೀವು ಮಾಡುತ್ತಿರುವುದು? ಮದುವೆಯ ಪೂರ್ಣ ಜವಾಬ್ದಾರಿ ವಹಿಸಿಕೊಂಡ ನೀವೇ ಜಲಪಾನವನ್ನು, ನಮ್ಮ ಆತಿಥ್ಯವನ್ನು ಸ್ವೀಕರಿಸಿದೇ ಇಲ್ಲಿಂದ ತೆರಳುವುದೆಂದರೇನು? ಇದು ನ್ಯಾಯವೇ ನೀವೇ ಹೇಳಿ ಎಂದು ಪ್ರಶ್ನಿಸುತ್ತಾ ಅಲ್ಲಿದ್ದ ಇನ್ನೊಬ್ಬನ ಮುಖವನ್ನು ನೋಡಿ – ಹೋಗು, ಕಾಲು ತೊಳೆಯಲು ಒಂದು

ಹರಿವಾಣ ಮತ್ತು ನೀರನ್ನು ತೆಗೆದುಕೊಂಡು ಬಾ ಎಂದು ಹೇಳಿ ಮತ್ತೊಬ್ಬನಿಗೆ, ಇವರು ಕುಳಿತುಕೊಳ್ಳಲು ಮಣೆ ಹಾಕಳಲು ಹೇಳಿ, ಮತ್ತೋರ್ವನನ್ನು ನೋಡಿ, ಹೋಗಿ ಸ್ವಲ್ಪ ಸಿಹಿ ತಿಂಡಿ ಮತ್ತು ಭಕ್ಷ್ಯವನ್ನು ತಾರೆಂದು ಹೇಳಲು ಇದನ್ನೆಲ್ಲಾ ನೋಡಿದ ಪರಶುರಾಮ ಕನಲಿ ಗ್ರಾಮಸ್ಥರನ್ನು ಕುರಿತು – ಅಲ್ಲ, ನಿಮಗೇನಾದರೂ ಹುಚ್ಚು ಹಿಡಿದಿದೆಯೇನು? ಪಿತೃಸ್ಥಾನದಲ್ಲಿ ಕುಳಿತು ಯಾವ ಕನ್ಯೆಯನ್ನು ಧಾರೆ ಎರೆದು ಕೊಟ್ಟೆನೋ, ಈಕೆಯ ಮನೆಯಲ್ಲಿ ಆತಿಥ್ಯವನ್ನು ಹೇಗೆ ತಾನೇ ಸ್ವೀಕರಿಸುವುದು ಸಾಧ್ಯ? ನೀವೇ ಹೇಳೀ! ಎಂಬೀ ಮಾತನ್ನಾಡಿ ಅವರಿಂದ ಬೇರ್ಪಟ್ಟು ಮನೆಯಿಂದ ಹೊರಬಂದು ತನ್ನ ಕುದುರೆಯನ್ನೇರುತ್ತಾ ತಲೆ ಎತ್ತಿ ನೋಡಲು- ತನ್ನನ್ನು ಹಿಡಿಯಲು ಯಂಗ್ ಸಾಹೇಬನು ತನ್ನ ಸೈನಿಕರೊಡನೆ ಸುತ್ತುವರೆದು ನಿಂತಿದ್ದ ದೃಶ್ಯ ಕಣ್ಣಿಗೆ ಬಿತ್ತು. ಆಗ ಪರಶುರಾಮನು ಯಂಗ್ ಸಾಹೇಬನಿಗೆ ನೀನು ನಿಜವಾಗಿ ಸಾಹಸಿಯೇ ಆಗಿದ್ದರೆ ಇಲ್ಲಲ್ಲ, ಊರ ಹೊರಗೆ ನಿನ್ನ ಪರಾಕ್ರಮವನ್ನು ತೋರಿಸು – ಎಂದು ಹೇಳಿ ರಹೀಮನ ಸಂಗಡ ಆ ಗ್ರಾಮದ ಸೀಮೆಯನ್ನು ದಾಟಿದನು. ನಂತರ ಪ್ರಾರಂಭವಾಯಿತು ಇಕ್ಕಡೆಯಿಂದ ತುಮುಲಯುದ್ಧ. ಎಲ್ಲರೂ ಅಶ್ವಾರೋಹಿಗಳಾಗಿದ್ದರು. ಎರಡೂ ಕಡೆಯಿಂದ ಗುಂಡಿನ ಸುರಿಮಳೆಯಾಗುತ್ತಿತ್ತು.

ಪರಶುರಾಮ ಮತ್ತು ರಹೀಮರಿಬ್ಬರೂ ಶಸ್ತ್ರವಿದ್ಯಾಪಾರಂಗತರು. ಸಾಹೇಬನ ಕಡೆಯವರ ಗುಂಡುಗಳಿಗೆ ಸಿಲುಕದೇ ಆ ಕಡೆಯ ಐದು ಜನರ ಪ್ರಾಣಗಳನ್ನು ಆಹುತಿಯಾಗಿ ಪಡೆದಿದ್ದರು. ಪರಶುರಾಮ ಅಲ್ಲಿಂದ ಓಡಿ ಹೋಗಲು ಅನುವು ಮಾಡುವುದಕ್ಕೋಸ್ಕರವಾಗಿ ರಹೀಮನು ತನ್ನ ಕುದುರೆಯನ್ನು ಹಿಂತಿರುಗಿಸಿ ಸೈನ್ಯದೊಡನೆ ಹೋರಾಡಲು ಪ್ರಾರಂಭಿಸಿದನು.

ರಹೀಮನ ಗುಂಡಿಗೆ ಇಬ್ಬರು ಬಲಿಯಾದರೆ ಮೂವರು ಹಾರಿಸಿದ ಗುಂಡುಗಳಿಗೆ ಕುದುರೆ ಸಹಿತ ರಹೀಮನ ಪ್ರಾಣಪಕ್ಷಿ ಹಾರಿಹೋಯಿತು. ಈ ವೇಳೆಯಷ್ಟರಲ್ಲಿ ಪರಶುರಾಮನು ಮೂರು ಮೈಲು ಮುಂದಿದ್ದ. ರಹೀಮನ ಶವವನ್ನು ಬಿಟ್ಟ ಕ್ಯಾಪ್ಟನ್ ತನ್ನ

ಉಳಿದ ಸೈನಿಕರೊಡನೆ ಪರಶುರಾಮನನ್ನು ಹಿಂಬಾಲಿಸಿದ. ಸುಮಾರು 04 ಮೈಲಿ ದೂರ ದಾಟಿದ ತರುವಾಯ ಕ್ಯಾಪ್ಟನ್ನನಿಗೆ ಪರಶುರಾಮನು ದೂರದಲ್ಲಿ ಕಂಡು ಬಂದ.

ಯಂಗ್ ಸಾಹೇಬನು ಹಾರಿಸಿದ ಗುಂಡಿಗೆ ಪರಶುರಾಮನ ಕುದುರೆ ಕೆಳಗುರುಳಿತು. ಅದರಿಂದ ಕೆಳಕ್ಕೆ ಹಾರಿದ ಪರಶುರಾಮನು ಓಡಲಾರಂಭಿಸಿದ. ಅವನ ಮುಂಧೆ 5-6 ಗಜ ಅಗಲದ ನಾಲೆಯೊಂದಿತ್ತು. ಮಳೆನೀರು ಅದರಲ್ಲಿ ತುಂಬಿದ್ದು ಕಂದಕದ ರೂಪವನ್ನು ಧರಿಸಿತ್ತು. ಸುಮಾರು 30 ಗಜ ಆಳವಿತ್ತು.

ಪರಶುರಾಮನು ಆ ನಾಲೆಯನ್ನು ದಾಟಲು ಪ್ರಯತ್ನಿಸುವಾಗ ಕಾಲು ಜಾರಿ ಕಂದಕದೊಳಗೆ ಬಿದ್ದ. ಅಷ್ಟರೊಳಗೆ ಯಂಗ್ ಸಾಹೇಬನು ನಾಲೆಯ ದಡವನ್ನು ತಲುಪಿ ಕೆಳಗೆ ಬಗ್ಗಿ ನೋಡಿದ. ಕಂದಕದಲ್ಲಿ ಕತ್ತಲು ಆವರಿಸಿದ್ದ ಕಾರಣ ಯಾವುದು ಸ್ಪಷ್ಟವಾಗಿ ಕಾಣುತ್ತಿರಲಿಲ್ಲ.

ಸಾಹೇಬನು ಯಾವಾಗ ಕೆಳಗೆ ಬಗ್ಗಿ ನೋಡಿದನೋ ಅದೇ ಸಮಯದಲ್ಲಿ ಪರಶುರಾಮನು ಹಾರಿಸಿದ ಗುಂಡೊಂದು ಕೆಳಗಿನಿಂದ ಮೇಲಕ್ಕೆ ಬಂದು ಸಾಹೇಬರ ಟೋಪಿಯನ್ನು ಹಾರಿಸಿತು. ವಿಕ್ಟೋರಿಯಾ ಸಾಹೇಬರು ಇಂಚು ಅಂತರದಲ್ಲಿ ಬದುಕುಳಿದರು. ಸೈನಿಕರು ಸತತವಾಗಿ ಗುಂಡುಗಳ ಮಳೆಯನ್ನೇ ಸುರಿಸಿದರೂ ಸಹ ಮೂಲೆಯಲ್ಲಿ ಅಡಗಿದ್ದ ಪರಶುರಾಮನಿಗೆ ಏನೂ ಆಗಲಿಲ್ಲ. ಗೋಲಿಗಳ ಗರ್ಜನೆಯು ಶಾಂತವಾಗಿತ್ತು.

**ಯಂಗ್ ಸಾಹೇಬ –** ಭೇಷ್! ಪರಶುರಾಮ!! ಮೂವತ್ತು ಅಡಿ ಆಳದಲ್ಲಿದ್ದರೂ ನಿನ್ನ ನಿಶಾನೆಯು ಅತ್ಯದ್ಭುತವು. ನೀನು ಅತ್ಯಂತ ಸಾಹಸಿಯು ಎಂದು ಹೇಳಿದ ಮಾತಿನ ದಿಕ್ಕನ್ನು ಸಾಧಿಸಿ ಕೆಳಗಿನಿಂದ ಬಂದ ಪರಶುರಾಮನ ಗುಂಡು ಸಾಹೇಬರ ಪಕ್ಕದಲ್ಲಿದ್ದ ಸೈನಿಕನ ಆಹುತಿಯನ್ನು ಪಡೆಯಿತು.

**ಯಂಗ್ ಸಾಹೇಬ –** ನಮ್ಮ ಸೈನ್ಯದ ಒಂಭತ್ತು ಜನ ಸೈನಿಕರ ಪ್ರಾಣತೆತ್ತರೆ ಪರುಶುರಾಮನ ಒಬ್ಬ ಮಾತ್ರ ಪ್ರಾಣ ತೆತ್ತ ಎಂದು

ಉದ್ಗರಿಸುವ ವೇಳೆಯಲ್ಲಿ ಒಬ್ಬ ರಾಜಪೂತ ಸೈನಿಕನು ಮುಂದುವರೆದು ಈ ಕಂದಕದಲ್ಲಿ ಮಣ್ಣು ತುಂಬಿ ಪರಶುರಾಮನನ್ನು ಸೆರೆಹಿಡಿಯಬಹುದೆಂದು ಸಲಹೆ ನೀಡಿದನು. ಆ ಮಾತಿನ ಧ್ವನಿಯನ್ನನುಸರಿಸಿ ಪರಶುರಾಮನು ಹಾರಿಸಿದ ಗುಂಡಿಗೆ ಪಾಪ! ಬಡಪಾಯಿ ರಾಜಪೂತನ ತಲೆ ಸಿಡಿದು ಹೋಯಿತು. ಆತ ಧರಾಶಾಹಿಯಾದ.

**ಯಂಗ್ ಸಾಹೇಬ** – ಒಳ್ಳೆಯದು ಪರಶುರಾಮ! ನಿನ್ನ ಈ ವೀರತಾಯುಕ್ತ ಕಾರ್ಯದಿಂದ ನಾನು ತುಂಬಾ ಹರ್ಷಿತನಾಗಿದ್ದೇನೆ. ಹೊರಗೆ ಬಾ. ನೀನು ಸಾಹಸಿಯಷ್ಟೇ ಅಲ್ಲದೆ, ಕೊಟ್ಟ ವಚನವನ್ನು ಪಾಲಿಸುವಲ್ಲಿ ಕೂಡ ಬದ್ಧನಿರುವೆ. ನಿನ್ನಂತೆಯೇ ನಾನು ಸಹ ಕೊಟ್ಟ ವಚನವನ್ನು ಪಾಲಿಸುವವನೆ. ನೀನು ಹೊರಗೆ ಬಾ. ನಿನ್ನ ವೀರತೆಯಿಂದ ನಾನು ಸಂತುಷ್ಟನಿರುವೆ.

**ಪರಶುರಾಮ** – ಒಂದು ಹನಿ ನೀರಿನ ಋಣವೇನಿತ್ತೋ ಅದನ್ನು ನಾನು ತೀರಿಸಿಯಾಗಿದೆ. ಇನ್ನು ನನ್ನ ಪ್ರಾಣವೇ ಹೋದರೂ ಚಿಂತೆ ಇಲ್ಲ, ದುಃಖವೂ ಇಲ್ಲ.

**ಯಂಗ್ ಸಾಹೇಬ –** ನೋಡು ಪರಶುರಾಮ, ನೀನು ಹೊರಬಂದು ಆತ್ಮ ಸಮರ್ಪಣೆ ಮಾಡುವ ಸಂಗಡ ಇನ್ನು ಮುಂದೆ ದರೋಡೆ ಮಾಡುವುದಿಲ್ಲವೆಂದು ಶಪಥ ಮಾಡಿದರೆ ನಾನು ವೈಸರಾಯಿಯ ಸಂಗಡ ಮಾತನಾಡಿ ನಿನ್ನನ್ನು ಬಿಡುಗಡೆ ಮಾಡಿಸುವೆ. ನನ್ನನ್ನು ನಂಬು. ನಾನು ಕೊಟ್ಟ ಮಾತಿಗೆ ಎಂದೂ ತಪ್ಪುವವನಲ್ಲ. ಇಂದಿನಿಂದ ನಾವಿಬ್ಬರೂ ಮಿತ್ರರಾಗಿರೋಣ ಬಾ!

ಆಗ ಪರಶುರಾಮನು ಕಂದಕದಿಂದ ಹೊರಬಂದು ತನ್ನ ಆತ್ಮಸಮರ್ಪಣೆ ಮಾಡಿದ. ಸಾಹೇಬ ಆತನನ್ನು ಬಂಧಿಸಿ ಆಗ್ರಾಗೆ ಕರೆದೊಯ್ದ. ವೈಸರಾಯಿಯ ಸಮಕ್ಷಮದಲ್ಲಿ ಕೆಲವಾರು ದಿನ ವಾದ-ವಿವಾದ ನಡೆಯಿತು. ಆದರೆ, ಯಂಗ ಸಾಹೇಬನು ತಾನು ಕೊಟ್ಟ ವಚನದಂತೆಯೇ ಮೇಲಾಧಿಕಾರಿಗಳಿಗೆ

ಪರಶುರಾಮನನ್ನು ಕ್ಷಮಿಸುವಂತೆ ಪ್ರಾರ್ಥಿಸಿ ಅವರ ಮನವನ್ನೊಳಿಸಿದವನಾಗಿ ಈತನನ್ನು ಬಿಡುಗಡೆ ಮಾಡಿಸಿದ.

ಅಷ್ಟರವೇಳೆಗೆ ಪರಶುರಾಮನಿಗೆ ಒಂದು ಕಟುಸತ್ಯದ ಅರಿವಾಗಿತ್ತು. ಏನೆಂದರೆ, ಉದ್ದೇಶ ಎಷ್ಟೇ ಒಳ್ಳೆಯದೇ ಆಗಿರಲಿ, ಸುಲಿಗೆ-ದರೋಡೆ ಸರಿಯಲ್ಲ. ಯಾರು ಸಹ ಇದನ್ನು ಒಪ್ಪಲಾರರು ಎಂದು. ತಾನು ಈವರೆಗೆ ನಡೆಸಿದ ಈ ಘೋರ ಪಾಪ ಕಾರ್ಯಗಳಿಂದ ಲಜ್ಜಿತನಾಗಿ ಪ್ರಾಯಶ್ಚಿತ ರೂಪದಲ್ಲಿ ತನ್ನಲ್ಲಿರುವ ಸಮಸ್ತ ಸಂಪತ್ತನ್ನೂ ದೀನ-ದಲಿತರಿಗೆ ದಾನ ಮಾಡಿ ಅಂತತಃ ಸನ್ಯಾಸಿ ದೀಕ್ಷೆಯನ್ನು ಪಡೆದು ತನು-ಮನದಲ್ಲಿ ನಿವಾಸ ಮಾಡುತ್ತಿರುವ ಆ ಸನಾತನ ದಿವ್ಯಜ್ಯೋತಿ ಸ್ವರೂಪನಾದ ಮಹದೇವನ ದಿವ್ಯ ಪಂಚಾಕ್ಷರಿಯನ್ನು ಜಪಿಸುತ್ತಿದ್ದು, ಕಡೆಗೆ ಸನ್ 1935 ರಲ್ಲಿ ಪುಣ್ಯ ನಗರಿಯಾದ ಹರಿದ್ವಾರದಲ್ಲಿ ತುಂಬಿ ಹರಿಯುತ್ತಿದ್ದ ಗಂಗಾನದಿಯ ಮಧ್ಯಭಾಗದಲ್ಲಿ ತನ್ನ ಶರೀರವನ್ನು ಗಂಗಾಮಾತೆಯ ಒಡಲಿಗರ್ಪಿಸಿದನು.

ವಿಪತ್ತಿನ ಸಮಯದಲ್ಲೂ ವಚನಭ್ರಷ್ಟನಾಗಬಾರದೆಂಬ ಕಟು ಸತ್ಯಕ್ಕೆ ಮಾದರಿಯಾದ ಈ ಪರಶುರಾಮ!

**ಓಂ ನಮಃ ಶಿವಾಯ!**

# ಮುಗ್ಧಭಕ್ತಿ

ಪರಮಪುರುಷನ ಸಾಕ್ಷಾತ್ಕಾರಕ್ಕೆ ಪ್ರಬಲ ಶಕ್ತಿಸ್ರೋತ್ರವೇ ಭಕ್ತಿ. ಕೆಲವರಿಗೆ ಬಾಲ್ಯದಿಂದಲೇ ಭಕ್ತಿಯು ನೆಲೆಸಿ ಆತನನ್ನು ದಿವ್ಯ ಸ್ವರೂಪ ದರ್ಶನಾಧಿಕಾರಿಯನ್ನಾಗಿಸುತ್ತದೆಯೋ. ಇದೇ ಭಕ್ತಿಯು ಭೌತಿಕ ಪರಿವೇಶದಿಂದ ವಿರಕ್ತಿಭಾವವನ್ನು ಜಾಗೃತಗೊಳಿಸುವುದರ ಮೂಲಕ ಭಕ್ತಿಮಾರ್ಗವನ್ನು ತೋರಿಸುತ್ತದೆ.

ಇವೆರಡನ್ನೂ ಬಿಟ್ಟು ಮತ್ತೊಂದು ಭಕ್ತಿಭಾವದ ಸ್ರೋತ್ರವಿದೆ. ಭಕ್ತಿ ಏನೆಂದೂ ಅರಿಯದೇ ಅದರ ಸ್ವರೂಪವನ್ನರಿಯದೇ ಕರ್ಮಯೋಗಿಯಾದ ಪುರುಷನನ್ನು ತನ್ನೆಡೆ ಆಕರ್ಷಿಸುವ ಕ್ಷಮತೆಯನ್ನಿರಿಸಿಕೊಂಡಿರುತ್ತದೆ. ಇದೇ ಮುಗ್ಧಭಕ್ತಿಯು ತನ್ನ ಸ್ವರೂಪವನ್ನು ತಿಳಿಸದೇ ತನ್ನೆಡೆ ಆಕರ್ಷಿಸುವುದು.

ಈ ಬಗ್ಗೆ ಎರಡು ಕಥಾವಸ್ತುಗಳನ್ನು ತಮ್ಮೆದುರು ಇಡಲು ಬಯಸುತ್ತೇನೆ.

## ಪುಷ್ಪ -01

ಈ ಘಟನೆಯು ಹೆಚ್ಚು ಪುರಾತನವಲ್ಲ. ವಿಕ್ರಮ ಸಂವತ್ಸರ 1990ರಲ್ಲಿ ನಡೆದೊಂದು ಸತ್ಯವೂ ಮತ್ತು ವಿಚಿತ್ರವೂ ಆದ ಘಟನೆಯಿದು. ಭಾರತದ ದಕ್ಷಿಣಪ್ರಾಂತದಲ್ಲಿ ವಿಶಾಖಪಟ್ಟಣವೆಂಬ ಪ್ರಸಿದ್ಧನಗರವಿದೆ. ಅಲ್ಲಿ ಗೋಪಾಲಕೃಷ್ಣನ ಪ್ರಸಿದ್ಧಮಂದಿರವಿದೆ. ಆ ಸಮಯದಲ್ಲಿ ಈ ಮಂದಿರದ ಮೇಲ್ವಿಚಾರಿಕೆಯ ಜವಾಬ್ದಾರಿಯು ಬಾಬಾ ಧರ್ಮದಾಸರವರಿಗಿತ್ತು. ಒಂದು ದಿನ ಒಬ್ಬ ಗೊಲ್ಲರ ಬಾಲಕನು ಇವರ ಬಳಿಗೆ ಬಂದು ಇವರ ಶಿಷ್ಯನಾದ. ತಂದೆ/ ತಾಯಿಯಿಲ್ಲದ

12 ವಯಸ್ಸಿವನಾದ ಈ ಬಾಲಕ ತನ್ನ ಚಿಕ್ಕಪ್ಪನ ಕಿರುಕುಳವನ್ನು ತಡೆಯಲಾರದೇ ಮನೆ ಬಿಟ್ಟು ಮಂದಿರದಲ್ಲಿ ಆಶ್ರಯವನ್ನು ಪಡೆದಿದ್ದ. ಗುರುವು ಈತನಿಗೆ ಗರೀಬದಾಸನೆಂದು ಹೆಸರಿಟ್ಟಿದ್ದನು.

ಈತನ ಕೆಲಸವಿಷ್ಟೇ, ದೇಗುಲಕ್ಕೆ ಸೇರಿದ 05 ದನಗಳನ್ನು ಕಾಯುವುದು, ಮಧ್ಯಾಹ್ನ ಹಾಗೂ ರಾತ್ರಿ ಊಟ ಮಾಡುವುದು, ಹಾಲು ಕುಡಿದು ಮಲಗುವುದಷ್ಟೇ. ಓದು-ಬರೆಯುವ ಕೆಲಸವಿಲ್ಲ. ಪೂಜಾ ಪಾಠಗಳ ಗೊಂದಲವಿಲ್ಲದ ನಿಶ್ಚಿಂತ ಜೀವನವಾಗಿತ್ತು.

ಕೆಲವು ದಿನಗಳ ನಂತರ ಏಕಾದಶಿ ತಿಥಿಯಿತ್ತು. ಮಹಾಂತರರು ಗರೀಬದಾಸನನ್ನು ಕರೆದು, ಇಂದು ಏಕಾದಶಿ ತಿಥಿ ಇರುವ ಕಾರಣ ನೀನು ಮಧ್ಯಾನ್ಹ ಇಲ್ಲಿಗೆ ಬರುವ ಅಗತ್ಯವಿಲ್ಲ. ನಾನು ಅರ್ಧಸೇರು ಹಿಟ್ಟು, 20 ಆಲೂಗೆಡ್ಡೆ ಕೊಡುತ್ತೇನೆ. ಮಧ್ಯಾನ್ಹ ಸ್ನಾನ ಮಾಡಿ ಕಾಡಿನಲ್ಲೇ ಸಿಗುವ ಸೌದೆಯಿಂದ ಬೆಂಕಿ ಮಾಡುವುದು, ನೀರಿನಿಂದ ಆ ಸ್ಥಾನವನ್ನು ಶುದ್ಧಗೊಳಿಸುವುದು, ತಿಳಿಯಿತೇ!

**ಗರೀಬ** – ಹಾ, ತಿಳಿಯಿತು

**ಧರಮ** – ನಿನ್ನ ಅಂಗವಸ್ತ್ರದಲ್ಲೇ ಹಿಟ್ಟನ್ನು ಕಲೆಸುವುದು. ನಾನು ನಿನಗೊಂದು ಸೋರೆಕಾಯಿಯ ಕಮಂಡಲು ಕೊಡುತ್ತೇನೆ. ನೀರಿನ ಕೆಲಸಕ್ಕಾಗುತ್ತದೆ ಅದು, ತಿಳಿಯಿತೇ!

**ಗರೀಬ** – ತಿಳಿಯಿತು!

**ಧರಮ** – ನಂತರ ಅರ್ಧ-ಅರ್ಧ ಪಾವಿಗೊಂದರಂತೆ 04 ರೊಟ್ಟಿ ಮಾಡುವುದು. ಮತ್ತೆ ಆಲೂಗೆಡ್ಡೆಯನ್ನು ಬೇಯಿಸುವುದು. ಇಂದು ಉಪ್ಪನ್ನು ಕೊಡಲಾರೆ. ಯಾಕೆಂದರೆ ಇಂದು ಉಪ್ಪನ್ನು ಸೇವಿಸಬಾರದು, ತಿಳಿಯಿತೇ!

**ಗರೀಬ –** ತಿಳಿಯಿತು! ಆ ಆಲೂಗೆಡ್ಡೆ ಕೊಡುವ ಅಗತ್ಯವಿಲ್ಲ. ನೀವೇ ಇಟ್ಟುಕೊಳ್ಳಿ.

ಶಿಷ್ಯನ ಸ್ವಭಾವವನ್ನು ಅರಿತಿದ್ದ ಆ ಗುರುವಿಗೆ ಈ ಮಾತಿನಿಂದ ಬೇಸರವೇನೂ ಆಗಲಿಲ್ಲ. ಆದರೆ, ಹರ್ಷದಿಂದ ಕೂಡಿದ್ದರು. ನನ್ನ ಮಾತನ್ನೆಲ್ಲಾ ಇವನು ಅರ್ಥೈಸಿಕೊಳ್ಳುತ್ತಿದ್ದಾನೆಂದು.

**ಧರಮ -** ನಿನಗೇನು ಹುಚ್ಚು ಹಿಡಿದಿದೆಯಾ? ಉಪ್ಪಿಲ್ಲದ ಆಲೂಗೆಡ್ಡೆಯೂ ಸಹ ರುಚಿಯಾಗಿಯೇ ಇರುತ್ತದೆ. ತಿಳಿಯಿತೇ!

**ಗರೀಬ –** ತಿಳಿಯಿತು

**ಧರಮ** – ಭೋಜನ ಸಿದ್ಧವಾದ ಮೇಲೆ ನಿನ್ನ ಕುತ್ತಿಗೆಯಲ್ಲಿರುವ ವಜ್ರವನ್ನು ತೆಗೆಯುವುದು, ತಿಳಿಯಿತೇ!

**ಗರೀಬ –** ತಿಳಿಯಿತು. ಆದರೆ, ವಜ್ರವೆಂದು ಹೇಳಿದಿರಿ. ಇದು ತಿಳಿಯಲಿಲ್ಲ.

**ಧರಮ** – ಎಂದು ನನ್ನ ಶಿಷ್ಯನನ್ನಾಗಿ ಮಾಡಿದೆನೋ ಅಂದು ಒಂದು ಶಾಲಿಗ್ರಾಮವನ್ನು ನಿನ್ನ ಕುತ್ತಿಗೆಗೆ ಕಟ್ಟಿದ್ದೆ. ಆದರೆ, ಇಂದು ನಿನ್ನ ಕುತ್ತಿಗೆ ಖಾಲಿಯಾಗಿ ಕಾಣುತ್ತಿದೆ.

**ಗರೀಬ** – ಅನ್ನು ಬಿಚ್ಚಿ ಎಸೆದುಬಿಟ್ಟೆ, ತಿಳಿಯಿತೇ

**ಧರಮ** – ದೊಡ್ಡ ಕತ್ತೆ ನೀನು. ಎಲ್ಲಿ ಎಸೆದೆ?

**ಗರೀಬ** – ಚಾವಣಿಯ ಮೇಲೆ

**ಧರಮ** – ನೀನೊಬ್ಬ ಗೂಬೆ ಎಂದರಿವಾಗುತ್ತದೆ. ತಿಳಿಯಿತೇ? ಅಲ್ಲಾ, ಅದನ್ನು ಯಾವ ಕಾರಣಕ್ಕಾಗಿ ಎಸೆದೆ?

**ಗರೀಬ** – ಕುತ್ತಿಗೆಯಲ್ಲಿ ಕಲ್ಲು ಕಟ್ಟಿಕೊಳ್ಳುವುದರಿಂದ ಪ್ರಯೋಜನವೇನು? ಮಲಗಿರುವ ಸಮಯದಲ್ಲಿ ಅದೇನಾದರೂ ಕಂಠಕ್ಕೆ ಬಂದಿದ್ದರೆ ಪ್ರಾಣವೇ ಹೋಗುವ ಭಯವಿತ್ತು. ತಿಳಿಯಿತೇ. ನಾನದನ್ನು ಧರಿಸುವುದಿಲ್ಲ.

**ಧರಮ –** ಅಯ್ಯೋ ರಾಮ ರಾಮ! ಎಂತಹ ಶಿಷ್ಯನಪ್ಪ ಇವನು. ಈಗಲೇ ಹೋಗಿ ಅದನ್ನು ಹುಡುಕಿಕೊಂಡು ಬಾ ಹೋಗು, ತಿಳಿಯಿತೇ!

ಗರೀಬದಾಸನು ಈ ಗುರುವಿನ ಮಾತಿನಿಂದ ಹೆದರಿಕೊಂಡು ಆ ಒಂದು ಕಲ್ಲಿಗಾಗಿ ನನ್ನನ್ನು ಹೊಡೆಯಲೂಬಹುದು ಎಂದು ತೀರ್ಮಾನಿಸಿಕೊಂಡು ಬೇಗನೇ ಆ ಕಲ್ಲನ್ನು ಹುಡುಕಿ ಗುರುವಿನ ಕೈಗಿತ್ತನು.

**ಧರಮ** – ನೋಡು ಮಗೂ! ನೀನೀಗ ಏನನ್ನೂ ಅರಿಯದವನು. ಈ ಬಟ್ಟೆಯ ಒಳಗೆ ಶಾಲಿಗ್ರಾಮ ಮೂರ್ತಿ ಇದೆ. ಈ ಮೂರ್ತಿಯ ಒಳಗೆ ಗೋಪಾಲನಿರುತ್ತಾನೆ, ತಿಳಿಯಿತೇ!

**ಗರೀಬ** – ಅದೇ ಗೋಪಾಲ. ಹಿಂದೆ ವೃಂದಾವನದಲ್ಲಿದ್ದ. ನಮ್ಮ ಜಾತಿಯವನೇ. ಹಸುಗಳನ್ನು ಕಾಯುವುದು ಮತ್ತು ಕೊಳಲನ್ನೂದುವುದು.

**ಧರಮ –** ಹಾ, ಅವನೇ ತಿಳಿಯಿತೇ! ಯಾವಾಗ ಭೋಜನ ಸಿದ್ಧವಾಗುತ್ತದೋ ಆವಾಗ ಈ ಮೂರ್ತಿಯನ್ನು ಕಂಠದಿಂದ ತೆಗೆದು ಮುಂದಿರಿಸಿಕೊಂಡು ಕಣ್ಣುಮುಚ್ಚಿ ಕೈ ಜೋಡಿಸುತ್ತಾ 'ಹೇ ಗೋಪಾಲ! ಭೋಜನ ಮಾಡು' ಎಂದು ಕರೆದು ಅವನ ಭೋಜನದ ತರುವಾಯ ನೀನು ಮಾಡುವುದು, ತಿಳಿಯಿತೇ. ಒಳ್ಳೆಯದು ಬಾ ಇಲ್ಲಿ ನಿನ್ನ ಕೊರಳಿಗೆ ಈ ಮೂರ್ತಿಯನ್ನು ಕಟ್ಟುತ್ತೇನೆ, ತಿಳಿಯಿತೇ.

**ಗರೀಬ** – ತಿಳಿಯಿತು

**ಧರಮ** – ಯಾವುದೇ ತೊಂದರೆ ಇಲ್ಲ ತಾನೇ?

**ಗರೀಬ** – ಇಲ್ಲ, ಆದರೆ ಕಂಠಕ್ಕೆ ಮಾತ್ರ ಕಟ್ಟಬೇಡಿ. ನಿದ್ರೆ ಮಾಡುವಾಗ ಈ ಗೋಪಾಲ ನನ್ನ ಕುತ್ತಿಗೆಯನ್ನು ಹಿಸುಕಿಬಿಟ್ಟರೇ! ಕಳ್ಳರಿಂದ ದೂರವಿರುವುದೇ ಒಳ್ಳೆಯದು. ಬೇಕಾದರೆ ನನ್ನ ಸೊಂಟದಲ್ಲಿ ಕಟ್ಟಿ, ತಿಳಿಯಿತೇ.

**ಧರಮ** – ಉಷ್! ಸೊಂಟದಲ್ಲಲ್ಲ. ನಿನ್ನ ಭುಜದಲ್ಲಿ ಕಟ್ಟುತ್ತೇನೆ. ತಿಳಿಯಿತೇ. ಕೈ ಮುಗಿದುಕೊಂಡು ಕಣ್ಣುಗಳನ್ನು ಮುಚ್ಚಿಕೊಂಡು ನಿವೇದನೆ ಮಾಡಬೇಕು, ತಿಳಿಯಿತೇ ಎಂದಷ್ಟು ಹೇಳಿ ಗರೀಬದಾಸನ ಬಲಗೈಯಲ್ಲಿ ಆ ಯಂತ್ರವನ್ನು ಕಟ್ಟಿದ ತರುವಾಯ ಅರ್ಧಸೇರು ಹಿಟ್ಟು ಮತ್ತು 20 ಆಲೂಗೆಡ್ಡೆಯನ್ನು ಕೊಟ್ಟ. ಜೊತೆಗೆ ಸ್ವಲ್ಪ ಬೆಲ್ಲವನ್ನು ಮತ್ತು ಸೋರೇ ಬುರುಡೆಯನ್ನು ಕೊಟ್ಟು ಹೋಗಿ ಬಾ ಮಗೂ! ಪ್ರತ್ಯೇಕ ಏಕಾದಶಿಯಂದು ಇದೇ ಕ್ರಮವನ್ನನುಸರಿಸಬೇಕಾಗುತ್ತದೆ, ತಿಳಿಯಿತೇ!

**ಗರೀಬ** – ತಿಳಿಯಿತು!

ಹಸುಗಳನ್ನಟ್ಟಿಕೊಂಡು ಕಾಡಿನ ಮಾರ್ಗವನ್ನು ಹಿಡಿದ.

ಯಾವಾಗ ಮಧ್ಯಾನ್ಹದ ಸಮಯವಾಯಿತೋ ಆವಾಗ ಗರೀಬದಾಸನು ಗುರುಗಳು ಹೇಳಿದಂತೆ 04 ರೊಟ್ಟಿ ತಯಾರು ಮಾಡಿ, ಆಲೂಗೆಡ್ಡೆಯನ್ನು ಬೇಯಿಸಿ ನಾಲ್ಕು ರೊಟ್ಟಿಗಳ ಮೇಲೂ ಸ್ವಲ್ಪ-ಸ್ವಲ್ಪ ಇಟ್ಟ. ಮುತ್ತುಗದ ಎಲೆಗಳಿಂದ ದೊನ್ನೆಯನ್ನು ಮಾಡಿ ಆ ದೊನ್ನೆಯ ಮೇಲೆ ರೋಟಿಯನ್ನಿಟ್ಟು ಬಾಹುವಿನಿಂದ ಮೂರ್ತಿಯನ್ನು ತೆಗೆದು ಆ ದೊನ್ನೆಗಳ ಮಧ್ಯೆ ಇಟ್ಟು ಎದ್ದ, ಕೈ ಮುಗಿದುಕೊಂಡು ಕಣ್ಣು ಮುಚ್ಚಿ 'ಹೇ, ಗೋಪಾಲ ನೀವೇದನವನ್ನು ಮಾಡು' – ಎಂದು ಪ್ರಾರ್ಥಿಸುತ್ತಿದ್ದು ನಂತರ ಕಣ್ಣು ತೆರೆದು ನೋಡಿದರೆ, ಎಲ್ಲಾ ರೊಟ್ಟಿಗಳು ಹಾಗೆಯೇ ಇದ್ದವು. ಅಂದರೆ, ಗೋಪಾಲ ನೈವೇದ್ಯವನ್ನು ಸ್ವೀಕರಿಸಿಲ್ಲ. ಅನ್ಯಥಾ ಒಂದಾದರೂ ರೊಟ್ಟಿ ಕಡಿಮೆಯಾಗುತ್ತಿತ್ತು.

ಪುನಃ ಗರೀಬದಾಸ ಮೊದಲಿನಂತೆಯೇ ವಿನಂತಿಸಿಕೊಂಡ. ಆದರೂ ಸಹ ರೊಟ್ಟಿ ಕಡಿಮೆಯಾಗಲಿಲ್ಲ. ಈ ಸಲ ಗರೀಬದಾಸನ ಮನದಲ್ಲೇ ನಿರ್ಣಯಿಸಿಕೊಂಡ. ಏನೆಂದರೆ, 'ಎಲ್ಲಿಯವರೆಗೆ ಗೋಪಾಲನು ಈ ನೈವೇದ್ಯವನ್ನು ಸ್ವೀಕರಿಸುವುದಿಲ್ಲವೋ ಅಲ್ಲಿಯವರೆವಿಗೂ ನಾನು ಏನನ್ನೂ ತಿನ್ನಲಾರೆ'. ಗುರು ವಚನವೂ

ಹಾಗೇ ಇತ್ತು. ಇದಂತೂ ಸಂಭವವೇ ಅಲ್ಲ, ನೈವೇದ್ಯವೂ ಆಗಿ ಭೋಜನವೂ ಅಷ್ಟೇ ಉಳಿದಿರುವುದು.

ಮಧ್ಯಾಹ್ನ 11 ರಿಂದ ಸಂಜೆ 04 ರವರೆವಿಗೂ ಈ ಕ್ರಮ ನಡೆಯುತ್ತಲೇ ಇತ್ತು. ಕಡೆಗೂ ಈ ವಜ್ರಮೂರ್ಖನ ಬಳಿಗೆ ಗೋಪಾಲನು ಬರಲೇಬೇಕಾಯಿತು. ಈ ಸಲ ಗರೀಬದಾಸ ತನ್ನೆರಡು ಕಣ್ಣುಗಳನ್ನು ತೆರೆದಾಗ ಕಂಡದ್ದೇನು? ಒಬ್ಬ 12 ವಯಸ್ಸಿನ ಬಾಲಕನು ಕುಳಿತುಕೊಂಡು ಒಂದು ರೊಟ್ಟಿಯನ್ನು ತಿನ್ನುತ್ತಿದ್ದ.

**ಗರೀಬ** - ಗೋಪಾಲ, ನೀನೆಷ್ಟು ಸುಂದರವಾಗಿದ್ದೀಯಾ, ನೋಡುತ್ತಿದ್ದರೆ ಕಣ್ಣೆರಡೂ ಸಾಲದು. ನಿನ್ನನ್ನಪ್ಪಿಕೊಂಡಿರು ಎಂದು ಮನವು ಹೇಳುತ್ತದೆ. ಆದರೆ, ನೀನು ತುಂಬಾ ಕಠೋರನೂ, ಹಸಿವಿನಿಂದ ನನ್ನನ್ನು ಸಾಯುವಂತೆ ಮಾಡಿದೆ. ಕರೆದೊಡನೆ ಬಂದಿದ್ದರೆ ಏನಾಗಿತ್ತು? ನಿನ್ನ ಗಂಟೇನು ಮುಳುಗುತ್ತಿತ್ತು?

**ಗೋಪಾಲ** – ಇನ್ನು ಮೇಲೆ ನೀನು ಕರೆದಕೂಡಲೇ ಬರುತ್ತೇನೆ – ಎಂದು ಹೇಳಿ ರೊಟ್ಟಿ ತಿಂದು ಹೊರಡುವಾಗ – ನಿನಗಂತೂ ಹಸಿವಾಗುವುದಿಲ್ಲ ತಾನೇ?

**ಗರೀಬ –** ಇಲ್ಲ, ಒಂದು ರೊಟ್ಟಿ ಹೆಚ್ಚಾಗಿಯೇ ಇತ್ತು, ತಿಳಿಯಿತೇ?

**ಗೋಪಾಲ** – ಆದರೆ, ಮುಂದಿನ ಸಮಯ ನನ್ನ ಜೊತೆಯಲ್ಲಿ ರಾಧೆಯು ಬರಳಿದ್ದಾಳೆ. ನಿನಗೆ ಎರಡು ರೊಟ್ಟಿ ಮಾತ್ರ ಉಳಿಯಲಿದೆ. ಇಷ್ಟು ಹೇಳಿ ಅಂತರ್ಧಾನನಾದ. ಗರೀಬದಾಸ ಭೋಜನ ಮಾಡಿದ, ತನ್ನ ಕೆಲಸದಲ್ಲಿ ಮಗ್ನನಾದ. ವಾಸ್ತವವಾಗಿ, ಇವನ ನಿತ್ಯದ ಭೋಜನ ½ ಸೇರೇ ಆಗಿತ್ತು. ಇವತ್ತು ಸ್ವಲ್ಪ ಹಸಿವೆ ತೋರುತ್ತಿತ್ತು.

ಪುನಃ ಏಕಾದಶೀ ಬಂದಿತು. ಬಾಬಾ ಧರಮದಾಸ ಮೊದಲಿನಂದ ಅರ್ಧ ಸೇರು ಹಿಟ್ಟು ಕೊಟ್ಟಾಗ, **ಗರೀಬದಾಸ** - ಹಿಂದೆ ಏಕಾದಶಿಯಂದು ಗೋಪಾಲ ಮಾತ್ರ ಬಂದಿದ್ದ, ಈಗ

ಅವನ ಪತ್ನಿ ಕೂಡ ಬರುವವಳಿದ್ದಾಳೆ. ಹಾಗಾಗಿ, ಒಂದು ಪಾವು ಹಿಟ್ಟನ್ನು ಹೆಚ್ಚಾಗಿ ಕೊಡಿ – ಅಂದ.

ಬಾಬಾ ತನ್ನಲ್ಲೇ ಚಿಂತಿಸಿದರು. – ಪಾಪ ಹಸಿದಿದ್ದಾಂತ ಕಾಣುತ್ತೆ. ಅದಕ್ಕೆ ಹೀಗೆ ಹೇಳುತ್ತಿದ್ದಾನೆ ಎಂದು ಮತ್ತಷ್ಟು ಹಿಟ್ಟು ಮತ್ತು ಆಲೂಗೆಡ್ಡೆ ಕೊಟ್ಟು ಕಳುಹಿಸಿದರು. ಬಾಬಾಗೆ ಇವನ ಮನದ ಮಾತು ತಿಳಿಯಲಿಲ್ಲ. ಕೇಳಲೂ ಇಲ್ಲ.

ಮಧ್ಯಾನ್ಹ ಮತ್ತೆ ಅದೇ ಲೀಲೆಯು ನಡೆಯಿತು. ಗರೀಬದಾಸ ಆರು ರೊಟ್ಟಿ ಮಾಡಿ ಎಲ್ಲದರ ಮೇಲೂ ಬೇಯಿಸಿದ ಆಲೂಗೆಡ್ಡೆಯನ್ನಿರಿಸಿ ಮೊದಲಿನಂತೆಯೇ ಗೋಪಾಲನನ್ನು ಪ್ರಾರ್ಥಿಸಿದ.

ತಕ್ಷಣವೇ, ರಾಧಾ ಸಹಿತನಾಗಿ ಗೋಪಾಲನು ಅಲ್ಲಿಗೆ ಬಂದು ಒಂದೊಂದೇ ರೊಟ್ಟಿಯನ್ನು ತಿಂದು – ನೀನು ಹಸಿದಿರುವುದಿಲ್ಲ ತಾನೇ! ಎಂದು ಗರೀಬದಾಸನನ್ನು ಕೇಳಲು – ಅದಕ್ಕುತ್ತರವಾಗಿ

**ಗರೀಬ** – ಅವತ್ತಂತೂ ಮೂರೇ ರೊಟ್ಟಿ ಉಳಿದಿತ್ತು. ಇಂದು ನಾಲ್ಕು ರೊಟ್ಟಿ ಉಳಿದಿದೆ, ನನಗೆ ಸಾಕು.

**ಗೋಪಾಲ** – ಆದರೆ, ಈ ಬರುವ ಏಕಾದಶಿಯಂದು ಒಂದು ಸೇರು ಹಿಟ್ಟನ್ನು ತರುವುದನ್ನು ಮಾತ್ರ ಮರೆಯಬೇಡ, ಎಂದಷ್ಟು ಹೇಳಿ ಅಲ್ಲಿಂದ ತೆರಳಿದನು.

ತನಗಾಗಿ ಉಳಿದಿದ್ದ ರೊಟ್ಟಿಗಳನ್ನು ತಿಂದು ತನ್ನ ಕೆಲಸ ಮಾಡುವಲ್ಲಿ ಮಗ್ನನಾದ. ಗೋಪಾಲನು ಹೇಳಿದ ಮಾತನ್ನು ಮರತೇ ಹೋದ.

ಮತ್ತೆ ಏಕಾದಶಿ ಬಂದು ಗರೀಬದಾಸನು ಮೊದಲಿನಂತೆ 03 ಪಾವು ಹಿಟ್ಟು, ಆಲೂಗೆಡ್ಡೆ ತೆಗೆದುಕೊಂಡು ಕಾಡಿಗೆ ಹೋದ. ಮಾಮೂಲಿನಂತೆಯೇ 06 ರೊಟ್ಟಿ ಮಾಡಿ ಬೆಂದ ಆಲೂಗೆಡ್ಡೆಯನ್ನು ಎಲ್ಲಾ ರೊಟ್ಟಿಯ ಮೇಲಿಟ್ಟು ಕರ ಮುಗಿದು ಗೋಪಾಲನನ್ನು ಸ್ಮರಿಸಿಕೊಂಡ ತಕ್ಷಣವೇ ರಾಧಾ-ರುಕ್ಮಿಣಿ-

ಸತ್ಯಭಾಮಾ ಸಂಗಡ ಆಗಮಿಸಿದ ಗೋಪಾಲನು. ನಾಲ್ವರು ನಾಲ್ಕು ರೊಟ್ಟಿಯನ್ನು ತಿಂದು ಕುಣಿದಾಡಿದರು. ತನಗಾಗಿ ಉಳಿದೆರೆಡು ರೊಟ್ಟಿಯನ್ನು ನೋಡಿ ಹತಾಶನಾಗಿ ತನ್ನ ಮನದಲ್ಲೇ ಈ ಗೋಪಾಲನಿಗೆಷ್ಟು ಪತ್ನಿಯರಿದ್ದಾರೋ ಎಂದು ಚಿಂತಿಸುತ್ತಿರಲು, ಇತ್ತ ಗೋಪಾಲನು ಎಲ್ಲರೊಡನೆ ತಿಂದು ನಂತರ ನಗುತ್ತಾ, ಗರೀಬದಾಸ! ನಿನಗೆ ಈ ಹಿಂದೆಯೇ ಒಂದು ಸೇರು ಹಿಟ್ಟನ್ನು ತಗೊಂಡು ಬಾರೆಂದು ಹೇಳಿದ್ದೆ. ಹೋಗಲಿಬಿಡು, ಮುಂದಿನ ಸಲ 1 ½ ಸೇರು ಹಿಟ್ಟನ್ನು ತರುವುದನ್ನು ಮರೆಯಬೇಡ, ತಿಳಿಯಿತೇ!

**ಗರೀಬದಾಸ –** ತಿಳಿಯಿತು. ಏಕೆಂದು ಗೊತ್ತಾಗಲಿಲ್ಲ

**ಗೋಪಾಲ** - ಈ ಸಲ ನನ್ನಿಬ್ಬರು ಗೆಳೆಯರಾದ ಮನಸುಖ-ಶ್ರೀಧಾಮರೂ ಸಹ ನಿನ್ನ ಸಮರ್ಪಣಾವಿಧಿಯನ್ನು ನೋಡಲು ಉತ್ಸುಕರಾಗಿದ್ದಾರೆ. ಹಾಗಾಗಿ, ಅವರು ಕೂಡ ಬರುವವರಿರುತ್ತಾರೆ.

**ಗರೀಬದಾಸ –** ಅವರನ್ನೆಲ್ಲಾ ಕರೆದುಕೊಂಡು ಬರುವ ಅಗತ್ಯವಿಲ್ಲ. ನಾನು ನಿನಗೆ ಮಾತ್ರ ಕೊಡುವವನೇ ವಿನಹಾ ನಿನ್ನ ಪರಿವಾರದವರೆಲ್ಲರಿಗೂ ಅಲ್ಲ.

**ಗೋಪಾಲ** – ನೀನು ತಿಳಿದುಕೋ, ಇಲ್ಲ ಬಿಡು. ಈ ಸಲ ಹೆಚ್ಚು ಹಿಟ್ಟನ್ನು ತೆಗೆದುಕೊಂಡು ಬರುವುದನ್ನು ಮಾತ್ರ ಮರೆಯಬೇಡ.

ಈ ಲೀಲೆಯ ಮೂಲಕವಾಗಿ ಪರಮಾತ್ಮನು ಧರ್ಮದರ್ಶಿ ಸ್ಥಾನದಲ್ಲಿರುವ ಧರಮದಾಸನ ಕಣ್ ತೆರೆಸುವ ಕೆಲಸವನ್ನು ಮಾಡಲಿದ್ದ.

ಆದರೆ, ಈ ಮರ್ಮವನ್ನು ಗರೀಬದಾಸ ಹೇಗೆ ತಾನೇ ಅರಿಯಬಲ್ಲ. ಅವ ಮೌನವಾಗಿ ತನ್ನ ರೊಟ್ಟಿಗಳನ್ನು ತಿನ್ನತೊಡಗಿದ. ಇತ್ತ ಗೋಪಾಲ ಸಪರಿವಾರ ಗೋಲೋಕಕ್ಕೆ ತೆರಳಿದ.

**ಧರಮದಾಸ** – ಮಗೂ ಗರೀಬ! ಇವತ್ತು ಮತ್ತೆ ಏಕಾದಶೀ. ತಿಳಿಯಿತೇ

**ಗರೀಬ –** ತಿಳಿಯಿತು. ದಿನ-ದಿನವೂ ಈ ಏಕಾದಶೀ ಯಾಕೆ ಬರುತ್ತದೋ

**ಧರಮ –** ನಿನಗೇನು ತೊಂದರೆ ಇದರಿಂದ? ತಿಳಿಯಲಿಲ್ಲ.

**ಗರೀಬ** – ಯಾರು ಇದನ್ನು ಅನುಭವಿಸುತ್ತಾರೋ ಅವರಿಗೆ ಮಾತ್ರ ತಿಳಿಯುತ್ತದೆ, ಅಲ್ಲವೇ

**ಧರಮ** – ನೀನೇನು ಹಸಿದುಕೊಂಡಿರುತ್ತೀ ಏನು? ಮೂರು ಪಾವಷ್ಟು ತಿನ್ನುತ್ತೀಯಾ.

ಪ್ರತಿದಿನ ಇಲ್ಲಾದರೆ 2 ಪಾವು ಸಾಕಾಗುತ್ತಿತ್ತು. ಕಾಡಿನಲ್ಲಿ ಮೂರು ಪಾವು ಕೂಡ ಕಡಿಮೆ ಎನ್ನಿಸುತ್ತಿದೆಯಾ ನಿನಗೆ? ಏನು ನೀನು ಹಿಟ್ಟನ್ನು ಮಾರುತ್ತಿಲ್ಲ ತಾನೇ.

**ಗರೀಬ** – ಏನು ನಾನೊಬ್ಬನೇ ತಿನ್ನುತ್ತೇನೆಯೇ. ಗೋಪಾಲನಿಗೂ ನಿವೇದನ ಮಾಡಬೇಕಲ್ಲವೇ? ಒಮ್ಮೊಮ್ಮೆ ಇಬ್ಬರು ಬಂದರೆ, ಮತ್ತೊಮ್ಮೆ 04 ಜನ. ಈ ಸಲ 06 ಜನ ಬರುತ್ತಾರಂತೆ. ಹಾಗಾಗಿ, ಈ ಸಲ 1 ½ ಸೇರು ಹಿಟ್ಟು ಕೊಡಿ. ಇಲ್ಲವಾದರೆ ಇನ್ನು ಮೇಲೆ ನಿಮ್ಮ ಹಸುವನ್ನು ನೀವೇ ನೋಡಿಕೊಳ್ಳಿ., ನಿಮ್ಮ ಮಾತುಗಳಿಗಿಂತ ಚಿಕ್ಕಪ್ಪನ ಬೈಗುಳವೇ ವಾಸಿ ಎಂದು ತೋರುತ್ತಿದೆ.

ಈ ಮಾತುಗಳನ್ನು ಕೇಳಿ ಧರಮದಾಸ ಮನದಲ್ಲೇ ಚಿಂತಿಸುತ್ತಾ ಈ ಸಲ ನಾನೇ ಪ್ರತ್ಯಕ್ಷವಾಗಿ ನೋಡುತ್ತೇನೆ. ಇವನು ಇಷ್ಟೊಂದು ಹಿಟ್ಟನ್ನು ಎಸೆಯುತ್ತಾನೋ ಇಲ್ಲ ವ್ಯಾಪಾರ ಮಾಡುತ್ತಾನೋ ಎಂದು ನಿರ್ಣಯಿಸಿ ಗರೀಬನಿಗೆ 1 ½ ಸೇರು ಹಿಟ್ಟು ಮತ್ತು ಆಲೂಗೆಡ್ಡೆಗಳನ್ನು ಕೊಟ್ಟ.

ಕೋಪದಿಂದ ಕುದಿಯುತ್ತಿದ್ದ ಈ ಗರೀಬ ಹಸುಗಳ ಸಂಗಡ ಕಾಡಿನ ರಸ್ತೆಯನ್ನು ಹಿಡಿದ. ಮಧ್ಯಾನ್ಹವಾಯಿತು. ಧರ್ಮಾಧಿಕಾರಿಯಾದ ಧರಮದಾಸನು ವೇಷವನ್ನು ಬದಲಿಸಿಕೊಂಡು ಆ ಸ್ಥಾನಕ್ಕೆ ತಲುಪಿದ. ಎಲ್ಲಿ ಗರೀಬದಾಸನು ರೊಟ್ಟಿಗಳನ್ನು ತಯಾರಿಸುತ್ತಿದ್ದನೋ ಅಲ್ಲಿಗೆ. ಗರೀಬದಾಸ ರೊಟ್ಟಿಗಳನ್ನು ಮಾಡುತ್ತಿದ್ದ. ಹಿಟ್ಟೇನೋ ಉಳಿದಿರಲಿಲ್ಲ. ಧರಮದಾಸನು ಅಲ್ಲೇ ಇದ್ದ ಪೊದೆಯ ಹಿಂಭಾಗದಲ್ಲಿ ಅವಿತಿಟ್ಟುಕೊಂಡು ಶಿಷ್ಯನ ಕಾರ್ಯವನ್ನು ಗಮನಿಸುತ್ತಿದ್ದ. ರೊಟ್ಟಿಯೆಲ್ಲಾ ತಯಾರಾದ ಮೇಲೆ ಆಲೂಗೆಡ್ಡೆಗಳನ್ನು ಕೆಂಡದಲ್ಲಿ ಸುಟ್ಟು ಸಿಪ್ಪೆ ತೆಗೆದು ಎಲ್ಲಾ ರೊಟ್ಟಿಗಳ ಮೇಲೂ ಇಟ್ಟ. ನಂತರ, ತನ್ನ ಭುಜದಲ್ಲಿ ಕಟ್ಟಿದ್ದ ಶಾಲಿಗ್ರಾಮವನ್ನು ತೆಗೆದು ಮಧ್ಯದಲ್ಲಿ ಇಟ್ಟ. ನಂತರ ಕಣ್ಣುಗಳನ್ನು ಮುಚ್ಚಿ ಕೈಗಳನ್ನು ಮುಗಿದುಕೊಂಡು ಗೋಪಾಲನನ್ನು ಆಹ್ವಾನಿಸಿದ.

ಇದೇನು! ಧರಮದಾಸನು ತನ್ನ ಕಣ್ಣನ್ನು ತಾನೇ ನಂಬಲಾರ! ಶರೀರ ಪೂರ್ತಿ ಬೆವರಿನಿಂದ ನೆನೆದು ಹೋಗಿತ್ತು. ಅವನ ಕಣ್ಣೆದುರಿನಲ್ಲೇ ತನ್ನ ಸಂಪೂರ್ಣ ಪರಿವಾರ ಮತ್ತು ಮಿತ್ರರೊಡನೆ ಅಲ್ಲಿ ಪ್ರಕಟವಾದ ಗೋಪಾಲನು ಎಲ್ಲರ ಜೊತೆಯಲ್ಲಿ ಅಲ್ಲಿದ್ದ ಎಲ್ಲಾ ರೊಟ್ಟಿಗಳನ್ನು ತಿಂದು ಮುಗಿಸಿದ ಗರೀಬದಾಸನಿಗೆ ಅಂದು ಸೇವಿಸಲು ಸ್ವಲ್ಪವೂ ಉಳಿದಿರಲಿಲ್ಲ. ಪರಿಶುದ್ಧ ಏಕಾದಶಿಯನ್ನು ಕಣ್ಣಾರೆ ಕಂಡ ಧರ್ಮದಾಸನು ಅತ್ಯಂತ ವಿಮೂಢನಾದ.

ಗೋಪಾಲನು ಸರ್ವಸ್ವಭೋಗವನ್ನು ಸಮಾಪ್ತಿ ಮಾಡಿ ರಾಸಲೀಲೆಯನ್ನ ಆಚರಿಸುತ್ತಾ, ಎಲ್ಲರೂ ಕುಣಿಯುತ್ತ ಹಾಡು ಹಾಡುತ್ತಿದ್ದರೆ ಪಾಪ ಗರೀಬದಾಸನು ತನ್ನಲ್ಲೇ "ಕಳ್ಳರಿಂದ ಎಷ್ಟು ದೂರವಿದ್ದರೆ ಅಷ್ಟು ಒಳ್ಳೆಯದಾಗಿತ್ತು. ಇಂದು ರಾತ್ರಿಯವರೆಗೆ ಉಪವಾಸವೇ ಸರಿ" ಎಂದು ಚಿಂತಿಸುತ್ತಿದ್ದ. ಸ್ವಲ್ಪ ಸಮಯದ ನಂತರ ಎಲ್ಲರೂ ಅಲ್ಲಿಂದ ನಿರ್ಗಮಿಸಿದ ತರುವ ಧರ್ಮದಾಸನು ಗರೀಬದಾಸನ ಬಳಿ ಬಂದು ಅವರ ಕಾಲುಗಳನ್ನು ನೋಡಿಕೊಂಡು ಅಳಲಾರಂಭಿಸಿದ.

ಈ ಹೊಸ ವಿಪತ್ತಿಯನ್ನು ಕಂಡ ಗರಿಬದಾಸನು ಮತ್ತಷ್ಟು ಹೆದರಿ ಹಿಂದೆ ಸರಿದನು.

**ಧರಮದಾಸ -** ನೀವು ಧನ್ಯರು, ಮಹಾತ್ಮರು. ನಿಮಗಾದರೂ ಪ್ರತಿ ಬಾರಿಯೂ ದರ್ಶನ ಭಾಗ್ಯ ಲಭಿಸುತ್ತಿತ್ತು ಮತ್ತು ನಿಮ್ಮ ನೈವೇದ್ಯವು ಸಾಕ್ಷಾತ್ ಅವರಿಗೆ ಸಮರ್ಪಿತವಾಗುತ್ತಿತ್ತು. ಹಾಯ್, ನನ್ನ ಜೀವನವೇ, ಜೀವನಪರ್ಯಂತವೇ ಆತನನ್ನು ಪೂಜಿಸುತ್ತಿದ್ದೆ. ನನಗೆ ಸ್ವಪ್ನದಲ್ಲೂ ಗೋಪಾಲನ ದರ್ಶನದ ಭಾಗ್ಯ ಲಭಿಸಲಿಲ್ಲ. ಇಂದಿನಿಂದ ನೀವು ಗುರುಗಳು, ನಾನು ನಿಮ್ಮ ಶಿಷ್ಯನು, ತಿಳಿಯಿತೇ!

**ಗರೀಬ -** ನೀವೇನು ಹೇಳುತ್ತಿದ್ದೀರಾ ನಾನು ಹಿಟ್ಟನ್ನು ಮಾರಾಟ ಮಾಡುವೆನೆಂದು..?

**ಧರಮ** - ನಾನು ಪಾಪಿಯಾಗಿದ್ದೆ. ಪ್ರಭುವಿನಿಂದ ಪರಿತ್ಯಕ್ತನಾದ ಪುರುಷನು, ತಿಳಿಯಿತೇ! ನನಗಿಂತಲೂ ನಿಮ್ಮ ಪ್ರಭು ದರ್ಶನ ಅತ್ಯಂತ ನಿಕಟವಾದದ್ದು ಈಗ ಮಂದಿರಕ್ಕೆ ಹೋಗೋಣ. ನೀವು ಧರ್ಮಧಿಕಾರಿಯಾಗಿ ಮಠದ ರಕ್ಷೆ ಮಾಡಿ. ನಾನು ನಾಳೆಯಿಂದ ಹಸು ಕಾಯಲು ಹೋಗುತ್ತೇನೆ. ಧರ್ಮದಾಸನು ಹಸುಗಳ ಸಂಗಡ ಶಿಷ್ಯ ಗರೀಬ ದಾಸನನ್ನು ಮಂದಿರಕ್ಕೆ ಕರೆದೊಯ್ದು ಅವನೇಷ್ಟೇ ಹೇಳಿದರೂ ಕೇಳದೆ, ಧರ್ಮಾಧಿಕಾರಿ ಸ್ಥಾನದಲ್ಲಿ ನಿಯೋಜಿಸಿದ. ಮತ್ತು ಹಸುಗಳನ್ನು ಮೇಯಿಸುವ ಕೆಲಸವನ್ನು ತನ್ನದಾಗಿಸಿಕೊಂಡ.

## ಪುಷ್ಪ - 02

# ಮುಗ್ಧಭಕ್ತಿಯ ಮತ್ತೊಂದು ನಮೂನೆ

ಗೌಹಾಟಿ ಕ್ಷೇತ್ರದ ಖಗೀಪುರ ಎಂಬ ಗ್ರಾಮದಲ್ಲಿ ಒಬ್ಬ ಗೊಲ್ಲರ ಹುಡುಗನಿದ್ದ. ಹೆಸರು ಮನಮೌಜೀ. ಅವ ಇದ್ದದ್ದು ಹಾಗೆಯೇ. ಅವನು ದನಕಾಯುವ ಕೆಲಸವನ್ನು ಮಾಡುತ್ತಿದ್ದ.

ಅಲ್ಲಿನ ಜಮೀನುದಾರರ ಐದು ಹಸುಗಳನ್ನು ಕಾಯವುದು ಈತನ ಕೆಲಸ. ಜಮೀನ್ದಾರ ಪ್ರತಿ ತಿಂಗಳೂ ಈ ಕೆಲಸಕ್ಕಾಗಿ ಊಟ-ಬಟ್ಟೆಯ ಸಂಗಡ ಎರಡು ರೂಪಾಯಿ ವೇತನವನ್ನು ಕೊಡುತ್ತಿದ್ದ. ತಂದೆ-ತಾಯಿಯರಿಲ್ಲದ ಅನಾಥ ಮತ್ತು ಸ್ವತಂತ್ರ – ಓದಿ ಬರೆಯುವ ರಗಳೆ ಇಲ್ಲ. ಪರಮ ಮೌಜೀ ಹುಡುಗನೀತ. ಯಾವ ಮಾತನ್ನು ನಿಜವೆಂದು ತಿಳಿಯುತ್ತಾನೋ ಅದು ಹುಸಿಯೇ ಆಗಿದ್ದರೂ ಸಹ ನಿಜವೆಂದು ದೃಢ ನಿರ್ಧಾರ ಮಾಡುವವನಿದ್ದ. ನಿಜದ ಸಂಗಡ ಅದರ ನೈಜತೆಯನ್ನರಿಯುವ ದೃಢತೆಯೂ ಅವನಲ್ಲಿತ್ತು. ಆದರೆ, ಅವನಲ್ಲಿ ಸತ್ಯ, ಅಸತ್ಯವನ್ನು ವಿವೇಚಿಸುವ ಕ್ಷಮತೆ ಇರಲಿಲ್ಲ. ಯಾಕೆಂದರೆ, ಅವನು ಸತ್ಸಂಗ ವಿಹೀನನಿದ್ದ. ಸತ್ಸಂಗವಿಹೀನನು ಎಂದೂ ಮೂರ್ಖನಾಗಿಯೇ ಇರುತ್ತಾನೆ,

ವಿಚಾರವೇನೆಂದರೆ, ಜಗತ್ತಿನಲ್ಲಿ ಸತ್ಯ ಮತ್ತು ಅಸತ್ಯ ಇವೆರಡೂ ಹಾಲು-ನೀರಿನಂತೆ ಪರಸ್ಪರ ಮಿಶ್ರಿತವಾಗಿರುತ್ತದೆ. ನಿಜ ಮತ್ತು ತಪ್ಪನ್ನು ಅರಿಯುವ ಕ್ಷಮತೆ ಸತ್ಸಂಗದಿಂದ ಮಾತ್ರ ಲಭಿಸುವಂತಹದಿರುತ್ತದೆ.

ಒಂದು ದಿನ ಮಧ್ಯಾನ್ಹ ಈತ ಒಂದು ಮಾವಿನಮರದ ಕೆಳಗೆ ಕುಳಿತುಕೊಂಡು ಒಂದು ಗೀತೆಯನ್ನು ಹಾಡುತ್ತಿದ್ದ. ಆ ವೇಳೆಗೆ ಓರ್ವ ಪಂಡಿತರು ಅಲ್ಲಿಗೆ ಬಂದರು. ಭುಜದ ಮೇಲೊಂದು ಬ್ಯಾಗು, ಹಣೆಯಲ್ಲಿ ದೊಡ್ಡ ತಿಲಕವಿತ್ತು. ಮಧ್ಯಾನ್ಹದ ಸಮಯವಾಗಿತ್ತು. ಪಂಡಿತರು ತಮ್ಮ ಚೀಲದಿಂದ ಬಟ್ಟೆಯೊಂದನ್ನು ತೆಗೆದುಕೊಂಡು ಸ್ನಾನ ಮಾಡಿ ಮತ್ತು ಬೇರೆ ಬಟ್ಟೆಯನ್ನುಟ್ಟುಕೊಂಡು ಚಪ್ಪಳಗಾಲನ್ನು ಹಾಕಿಕೊಂಡು ಕುಳಿತುಕೊಂಡು, ತನ್ನ ಕಣ್ಣುಗಳನ್ನು ಮುಚ್ಚಿಕೊಂಡ. ನಂತರ, ಬಲಗೈಯಿಂದ ಮೂಗನ್ನು ಮುಚ್ಚಿಕೊಂಡು ಕೆಲ ಸಮಯ ಕುಳಿತಿದ್ದು ತದನಂತರ ತನ್ನ ಬ್ಯಾಗಿನಿಂದ 2-3 ಹೆಸರುಕಾಳಿನ ಉಂಡೆಗಳನ್ನು ತೆಗೆದು ತಿಂದು ಮತ್ತು ನೀರು ಕುಡಿದು ಅಲ್ಲಿಂದ ಹೊರಡಲು ತಯಾರಾದರು. ಇದೆಲ್ಲವನ್ನೂ ನೋಡುತ್ತಿದ್ದ ಮೌಜೀ ಅವರ ಸಮೀಪಕ್ಕೆ ತೆರಳಿ, “ಪಂಡಿತರೇ ಕಾಲಿಗೆ ಬಿದ್ದೆ” ಎಂದ.

**ಪಂಡಿತ** – ಆಶೀರ್ವಚನ

**ಮೌಜೀ** – ನೀವೆಲ್ಲಿ ಇರುತ್ತೀರಿ?

**ಪಂಡಿತ –** ಕೇಸಮಪುರದಲ್ಲಿ

**ಮೌಜೀ –** ನೀವು ಎಲ್ಲಿಗೆ ಹೋಗುತ್ತಿದ್ದೀರಿ?

**ಪಂಡಿತ** – ದೌಲತಾಬಾದ್ ಗೆ. ಅಲ್ಲಿ ನನ್ನ ಶಿಷ್ಯರಿದ್ದಾರೆ

**ಮೌಜೀ –** ತಪ್ಪು ತಿಳಿಯದಿದ್ದರೆ ಒಂದು ಮಾತನ್ನು ಕೇಳಬಹುದೇ?

**ಪಂಡಿತ** – ಕೇಳು, ಪರವಾಗಿಲ್ಲ

**ಮೌಜೀ** – ನೀವು ಈ ಮೊದಲು ಮೂಗು ಮುಚ್ಚಿಕೊಂಡು ಏನು ಮಾಡುತ್ತಿದ್ದಿರಿ?

**ಪಂಡಿತ –** ಪರಮಾತ್ಮನ ದಿವ್ಯ ದರ್ಶನ!

**ಮೌಜೀ** – ಸಾಕು ಸಾಕು. ಧನ್ಯವಾದ! ನೀವಿನ್ನು ತೆರಳಬಹುದು.

ಪಂಡಿತರು ಮುಂದುವರೆದರು. ಮೌಜಿಯ ಬಳಿಯಲ್ಲಿ ಎರಡನೇ ಪಂಚೆ ಇರಲಿಲ್ಲ. ಹಾಗಾಗಿ, ನಗ್ನನಾಗಿ ಸ್ನಾನ ಮಾಡಿದ ನಂತರ ತನ್ನ ಧೋತಿಯನ್ನುಟ್ಟು ಚಪ್ಪಳಗಾಲಿನಲ್ಲಿ ಕುಳಿತುಕೊಂಡ. ನಂತರ, ಕಣ್ಣುಗಳನ್ನು ಮುಚ್ಚಿ ಬಲಗೈಯಿಂದ ಮೂಗನ್ನು ಮುಚ್ಚಿಕೊಂಡ. ಆದರೆ, ಈತನಿಗೇನೂ ಕಾಣಿಸಲಿಲ್ಲ. ಮನದಲ್ಲೇ ಯೋಚಿಸಿಲಾರಂಭಿಸಿದ. ಅಲ್ಲಾ, ಪಂಡಿತರಿಗೆ ಕಾಣಿಸುವ ದೇವರು ನನಗೇಕೆ ಕಾಣಿಸುತ್ತಿಲ್ಲ. ಪ್ರಾಯಃ ನಾನು ಮೂಗನ್ನು ಗಟ್ಟಿಯಾಗಿ ಹಿಡಿದಿಲ್ಲವೆಂದು ಕಾಣುತ್ತದೆ ಎಂದು ಯೋಚಿಸಿ ಇನ್ನಷ್ಟು ಬಿಗಿಯಾಗಿ ಮೂಗನ್ನು ಅಮುಕಿ ಹಿಡಿದುಕೊಂಡ. ಆದರೆ, ಏನೂ ಆಗಲಿಲ್ಲ. ಉಸಿರಾಟವಾಡದ ಕಾರಣ ಈತನಿಗೆ ಭಯಾನಕ ಸಂಕಟ ಉಂಟಾಗಲು

ಶುರುವಾಯಿತು. ಆಗ ಮೌಜಿಯು – ಪ್ರಾಣವು ಎಲ್ಲರಿಗೂ ಪ್ರಿಯಕರವು. ಆದರೆ, ದೇವದರ್ಶನಕ್ಕಿಂತಲೂ ಅಲ್ಲ. ಎಲ್ಲಿಯವರೆಗೆ ಪರಮಾತ್ಮನ ಸ್ವರೂಪವನ್ನು ನೋಡಲಾರೆನೋ ಅಲ್ಲಿಯವರೆಗೆ ಮೂಗನ್ನು ಬಿಡುವ ಪ್ರಶ್ನೆಯೇ ಇಲ್ಲ ಎಂದು ಮತ್ತಷ್ಟು ಬಿಗಿಯಾಗಿ ಮೂಗನ್ನು ಹಿಡಿದುಕೊಂಡ.

ಪ್ರಾಣದ ಧಾರ ಪರಮಾತ್ಮನ ಸಿಂಹಾಸನಕ್ಕೆ ಕಟ್ಟಿರುತ್ತದೆ. ಪ್ರಾಣರೂಪದ ಹಾವಿನ ಹಾಸಿಗೆಯಲ್ಲೇ ಭಗವಾನ್ ಶ್ರೀ ವಿಷ್ಣುವು ಸದಾ ಶಯನಿಸುತ್ತಾನೆ. ಮೌಜಿಯ ಪ್ರಾಣದ ಸ್ಪಂದನ ಸ್ಪರ್ಶಿಸಿತು. ಕಣ್ ತೆರೆದು ನೋಡಲು ಓರ್ವ ಗೊಲ್ಲರ ಹುಡುಗ ಮೂಗು ಮುಚ್ಚಿಕೊಂಡು ಕಾಡಿನಲ್ಲಿ ಕುಳಿತಿದ್ದಾನೆ. ಕಾರಣ ಕೇಳಲು ಬಳಿಯಲ್ಲೇ ಇದ್ದ ಯೋಗ ಮಾಯೆಯು ಪಂಡಿತನ ಪ್ರಸಂಗವನ್ನು ಹೇಳುತ್ತಾಳೆ. ಈ ಯೋಗ ಮಾಯೆಯೇ ಲಕ್ಷ್ಮೀದೇವಿ ರೂಪದಲ್ಲಿ ವಿಷ್ಣುವಿನ ಸನ್ನಿಧಿಯಲ್ಲಿರುತ್ತಾಳೆ.

ಪರಮಾತ್ಮನಿಗೆ ಎಲ್ಲಾ ಘಟನೆ ಅರಿತು, ಯೋಚಿಸಿದ. ಮೌಜಿಗೆ ಸಾವು ಇನ್ನೂ ಬಂದಿಲ್ಲ. ನಾನೀಗ ಅಲ್ಲಿಗೆ ಹೋಗದಿದ್ದರೆ ಸತ್ತು ಹೋಗುತ್ತಾನೆ. ಹಾಗಾಗಿ, ದರ್ಶನ ನೀಡುವುದು ಉಚಿತವು ಎಂದು ನಿರ್ಣಯಿಸಿ ಮೌಜಿಯ ಸಮ್ಮುಖ ಉಪಸ್ಥಿತನಾಗಿ – ಕಣ್ಣು ತೆರೆ! ನಾನು ಬಂದಿದ್ದೇನೆ.

ಶಬ್ದವನ್ನು ಕೇಳಿ ಕಣ್ಣನ್ನು ತೆರೆದು ಮೂಗನ್ನು ಬಿಟ್ಟು ಸ್ವಲ್ಪ ಸಮಯ ದೀರ್ಘಶ್ವಾಸವನ್ನು ಎಳೆದುಕೊಂಡು ನಂತರ ಕೇಳಿದ, ನೀವು ಯಾರು?

**ಭಗವಾನ್ –** ನಾನು, ಭಗವಾನ್

**ಮೌಜೀ** – ನೀನೇ ಭಗವಂತ ಎನ್ನುವುದಕ್ಕೆ ಸಾಕ್ಷ್ಯವೇನಿದೆ?

**ಭಗವಾನ್** – ನಿನಗೆ ಯಾವ ಬಗೆಯ ಸಾಕ್ಷ್ಯ ಬೇಕು?

**ಮೌಜೀ** – ನಾನು ಆ ಪಂಡಿತರನ್ನು ಕರೆ ತರುತ್ತೇನೆ. ಅವರು ಹೆಚ್ಚು ದೂರವಂತೂ ಹೋಗಿರಲಾರರು. ಒಂದು ವೇಳೆ ಅವರು

ನೀವೇ ಭಗವಾನರೆಂದರೆ ಮಾತ್ರ ನಂಬುತ್ತೇನೆ. ನಾನೆಂದೂ ನೋಡಿಲ್ಲವಲ್ಲ.

**ಭಗವಾನ್ –** ಒಳ್ಳೆ ಮಾತು! ಹಾಗೇ ಆಗಲಿ

**ಮೌಜೀ** – ಅರೆ ನಾನು ಪಂಡಿತರನ್ನು ಹಿಂದಕ್ಕೆ ಕರೆತರುವುದರೊಳಗೆ ನೀನೆಲ್ಲಾದರೂ ಓಡಿ ಹೋದರೆ? ಅಪರಿಚಿತರೊಡನೆ ಅಷ್ಟು ವಿಶ್ವಾಸವಿರಿಸಬಾರದು. ನಾನು ನಿಮ್ಮನ್ನು ಇದೇ ಮರದಲ್ಲಿ ಹಗ್ಗದಿಂದ ಕಟ್ಟಿಹಾಕಿರುತ್ತೇನೆ.

**ಭಗವಾನ್** – ಉಚಿತವೇ ಸರಿ, ನೀನು ಕಟ್ಟಬಹುದು.

**ಮೌಜೀ** - ತನ್ನ ಐದು ದನಗಳ ಹಗ್ಗಬಿಚ್ಚಿ ಪರಸ್ಪರ ಗಂಟು ಹಾಕಿ ಒಂದು ಉದ್ದ ಹಗ್ಗ ತಯಾರಿಸಿಕೊಂಡ. ಭಗವಾನ್ ಸ್ವತಃ ಮರಕ್ಕಂಟಿಕೊಂಡು ನಿಂತ.

ಮೌಜಿಯು ಆ ಮರಕ್ಕೆ ಪರಮಾತ್ಮನನ್ನು ಕಟ್ಟಿ ಹಾಕಿದ ತರುವಾಯ ಆ ಪಂಡಿತರನ್ನು ವಾಪಸ್ಸು ಕರೆತರಲು ಓಡಿದ. ಎರಡು ಫರ್ಲಾಂಗುಗಳ ದೂರದಲ್ಲಿ ಹೋಗುತ್ತಿದ್ದ ಪಂಡಿತರನ್ನು ಕಂಡ, ಕೂಗಿಕೊಂಡ. ಹೇ ಪಂಡಿತರೇ, ಹಿಂತಿರುಗಿ ಬಂದು ನೋಡಿ, ಈ ಭಗವಂತನು ನಿಮ್ಮವನೇನು? ಅಲ್ಲವೇ? ನಾನವನನ್ನು ಮಾವಿನ ಮರದಲ್ಲಿ ಕಟ್ಟಿ ಹಾಕಿದ್ದೇನೆ.

ಈ ಶಬ್ದವನ್ನು ಕೇಳಿದ ಪಂಡಿತ ಹಿಂತಿರುಗಿ ನೋಡಲು ಅದೇ ಹುಡುಗ ಓಡಿ ಬರುತ್ತಿದ್ದಾನೆ. ನನ್ನ ಚೀಲವನ್ನು ಅಪಹರಿಸಲು ಹಿಂಬಾಲಿಸುತ್ತಿರುವನೋ. ಅವನಂತೂ ಪ್ರಾಯದವ. ನಾನಾದರೋ ಮುದುಕ. ಈಗೇನು ಮಾಡಲಿ ಎಂದು ಚಿಂತಿಸುವಲ್ಲಿ ಆ ಮೌಜಿಯು ಈತನ ಕೈ ಹಿಡಿದು ಆ ಮಾವಿನ ಮರದ ಹತ್ತಿರ ಕರೆತಂದ.

**ಮೌಜೀ** – ನೋಡಿ ಪಂಡಿತರೇ, ಇವನೇ ತಾನೇ ನಿಮ್ಮ ಭಗವಾನ್?

ಪಂಡಿತನು ಬಹಳ ಹೊತ್ತು ಅಲ್ಲಿ-ಇಲ್ಲಿ ನೋಡಿದ. ಮಾವಿನ ಮರದಲ್ಲಿ ಹಗ್ಗ ಕಟ್ಟಿರುವುದು ಕಾಣುತ್ತಿತ್ತೇ ವಿನಹ, ಮತ್ತೇನೂ ಗೋಚರಿಸಲಿಲ್ಲ.

**ಪಂಡಿತ** – ಎಲ್ಲಿದ್ದಾನೆ?

**ಮೌಜೀ** – ದಿನದ ಬೆಳಕಿನಲ್ಲಿಯೂ ನಿಮಗೇನೂ ಕಾಣುವುದಿಲ್ಲವೇ! ಮರದಲ್ಲಿ ಎಷ್ಟು ಬಿಗಿಯಾಗಿ ಕಟ್ಟಿ ಹಾಕಿದ್ದೇನೆ.

ಪಂಡಿತನು ಈತನಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಸುಳ್ಳಿನ ಆಶ್ರಯ ಪಡೆದ. ಹಾ, ಹಾಂ, ಇವನೇ. ಇದರ ನಂತರ ಮತ್ತೆ ಮೌಜೀ ಪುನಃ ಪ್ರಶ್ನಿಸಿದ. ಹತ್ತಿರಕ್ಕೆ ಹೋಗಿ ನೋಡಿ. ಮತ್ತೆ ಇವ ಅವನಲ್ಲ ಎಂದು ಮಾತ್ರ ಹೇಳಬಾರದು. ಪಂಡಿತನು ಪರಮಾತ್ಮನನ್ನು ಕಂಡಿದ್ದರೆ ತಾನೇ! ಆದರೂ ಮತ್ತೆ ಹೇಳಿದ- ಸಾಕು! ಸಾಕು! ಇವನೇ ಅವನು. ಮೌಜೀ ಪಂಡಿತರನ್ನು ವಾಪಸ್ಸು ಕಳುಹಿಸಿದ ಮತ್ತು ಹಗ್ಗ ಬಿಚ್ಚಿ ಪರಮಾತ್ಮನನ್ನು ಮುಕ್ತನನ್ನಾಗಿ ಮಾಡಿ ಕಾಲಿಗೆರಗಿದ.

**ಭಗವಾನ–** ಆ ಪಂಡಿತ ನನ್ನ ಭಕ್ತನಲ್ಲ, ಪರಮ ನಾಸ್ತಿಕನು

**ಮೌಜೀ** – ಅಂತಹ ನಾಸ್ತಿಕರಿಗೆ ದರ್ಶನವನ್ನೇಕೆ ಕೊಡುವೆ?

**ಭಗವಾನ** – ನಾನೆಂದೂ ಅವನಿಗೆ ದರ್ಶನ ಕೊಟ್ಟಿ ಲ್ಲ.

**ಮೌಜೀ** - ಅವರು ಹೇಳುತ್ತಿದ್ದರು, ಪ್ರತಿದಿನ ನಿನ್ನ ದರ್ಶನ ಮಾಡುತ್ತೇನೆ ಎಂದು ಮತ್ತು ಇಂದೂ ಸಹ ನಿನ್ನನ್ನು ನೋಡಿದರು ಎಂದು.

**ಭಗವಾನ್** - ಅವನು ಇಂದಿನ ಮಾತಿರಲಿ, ಎಂದೂ ಸಹ ನನ್ನನ್ನು ಕಂಡಿಲ್ಲ. ಸುಳ್ಳು ಹೇಳಿದನಷ್ಟೇ.

**ಮೌಜೀ** – ಆದರೆ, ಅವನ ಸುಳ್ಳೇ ನನಗೆ ನಿಮ್ಮ ದರ್ಶನ ಭಾಗ್ಯವನ್ನು ಕೊಟ್ಟಿತು. ಅವ ನಾಸ್ತಿಕನೇ ಆದರೂ ನನ್ನ ಗುರುವು.

**ಭಗವಾನ್** - ನೀನೇನು ಬಯಸುವೆ ಕೇಳು, ನನ್ನ ದರ್ಶನ ನಿರರ್ಥಕವಾಗುವುದಿಲ್ಲ.

**ಮೌಜೀ** - ನನ್ನ ಆಸೆ ಏನೆಂದರೆ, ಯಾವಾಗ ನಾನು ಸ್ನಾನ ಮಾಡಿ ಮೂಗು ಮುಚ್ಚಿಕೊಳ್ಳುತ್ತೇನೋ, ಆಗ ನಿನ್ನ ದರ್ಶನವಾಗಬೇಕು.

**ಭಗವಾನ್** - ಹಾಗೆ ಆಗುತ್ತದೆ.

**ಮೌಜೀ** - ನೀವು ನಿಮ್ಮ ಸಂತೋಷದಿಂದ ಈ ವರವನ್ನು ಕೊಟ್ಟಿರಿ. ನನ್ನ ಸಂತೋಷಕ್ಕಾಗಿ ಮತ್ತೊಂದು ವರವನ್ನು ಕೊಡಲಾರೆಯಾ?

**ಭಗವಾನ್** - ಕೇಳು.

**ಮೌಜೀ** - ಯಾವಾಗ ಪಂಡಿತರು ಮೂಗು ಹಿಡಿಯುತ್ತಾರೋ ಆಗ ಅವರಿಗೂ ನಿನ್ನ ದರ್ಶನ ಭಾಗ್ಯ ಲಭಿಸುವಂತೆ ಮಾಡು.

**ಭಗವಾನ್**- ಆಗಂತೂ ಅವ ಸುಧಾರಿಸಿ ಆಸ್ತಿಕನಾಗಿಬಿಡುತ್ತಾನೆ. ನನ್ನ ದರ್ಶನ ಮಾಡುವವ ಎಂದೂ ಅಸತ್ಯವಾದಿ ನಾಸ್ತಿಕನಾಗಲಾರ. ಧನ್ಯನು ನೀನು! ನಿನ್ನ ಗುರುವನ್ನು ಉದ್ಧಾರ ಮಾಡಿದೆ. ಗುರು ತನ್ನ ಸದುಪದೇಶದಿಂದ ಶಿಷ್ಯನ ಉದ್ಧಾರ ಮಾಡಿದರೆ ಇಂದು ಶಿಷ್ಯನು ತನ್ನ ಸದಾಚಾರದ ಮೂಲಕ ಗುರುವನ್ನು ಉದ್ಧಾರ ಮಾಡಿದ ಎಂದು ಹೇಳಿ ತನ್ನ ಲೋಕಕ್ಕೆ ತೆರಳಿದನು.

ಇದಾಗಿ ಒಂದು ವರ್ಷವೇ ಸಂದಿತು. ಒಂದು ದಿನ ಪಂಡಿತರು ಅದೇ ಮಾರ್ಗದಲ್ಲಿ ಬಂದು ಹಸುಗಳನ್ನು ಕಾಯುತ್ತಿದ್ದ ಮೋಜಿಯನ್ನು ಭೇಟಿ ಮಾಡಿದ ನಂತರ ಹೇಳಿದರು - ನಮಸ್ಕಾರ ಗುರುಗಳಿಗೆ

**ಮೌಜೀ** - ನೀವು ನನ್ನ ಗುರುಗಳು ನಿಮ್ಮ ಮೂಲಕವಾಗಿಯೇ ನನಗೆ ಪರಮಾತ್ಮನ ಸಾಕ್ಷಾತ್ಕಾರ ಉಂಟಾಯಿತು.

**ಪಂಡಿತ** - ಇಲ್ಲ, ನೀವು ನನ್ನ ಗುರುಗಳು ನಿಮ್ಮ ಮೂಲಕವಾಗಿ ನನಗೆ ಪರಮಾತ್ಮನ ಪ್ರಾಪ್ತಿ ಭಾಗ್ಯ ಲಭಿಸಿತು.

**ಮೌಜೀ -** ನಾನು ಗೊಲ್ಲ. ನೀವು ಬ್ರಾಹ್ಮಣರು,

**ಪಂಡಿತ** - ನೀವೇ ಬ್ರಾಹ್ಮಣರು, ನಾನು ಓರ್ವ ಶೂದ್ರ

**ಮೌಜೀ** - ನಾನು ಮೂಢನಿದ್ದೆ. ನೀವು ನನ್ನನ್ನು ಪಂಡಿತನನ್ನಾಗಿ ಮಾಡಿದಿರಿ

**ಪಂಡಿತ** - ನಾನು ನಾಸ್ತಿಕನಿದ್ದೆ. ನನ್ನನ್ನು ಭಕ್ತನನ್ನಾಗಿ ಪರಿವರ್ತಿಸಿದಿರಿ.

**ಮೌಜೀ** - ಹೋಗಲಿ ಬಿಡಿ, ಏನಾಗಬೇಕಿತ್ತೋ ಅದೇ ನಡೆಯಿತು.

**ಪಂಡಿತ-** ನಾನು ಪುರೋಹಿತ್ಯವನ್ನು ಬಿಟ್ಟೆ, ನೀನು ಸಹ ಹಸು ಕಾಯುವ ಕೆಲಸ ಬಿಟ್ಟುಬಿಡು.

**ಮೌಜೀ** – ಮುಂದೆ?

**ಪಂಡಿತ -** ಪ್ರತಿಯೊಂದು ಗ್ರಾಮದಲ್ಲೂ ರಾಮನಾಮದ ಭಕ್ತಿಸುಧೆಯನ್ನು ಹರಿಸೋಣ.

**ಮೌಜೀ** - ಇಬ್ಬರು ಒಟ್ಟಾಗಿ ಭಕ್ತಿಗೀತೆಗಳನ್ನು ಹಾಡೋಣ

**ಪಂಡಿತ** – ಹೌದು! ರಾಮನಾಮದ ಪವಿತ್ರ ಜಲದಲ್ಲಿ ನಾವು ಸ್ನಾನ ಮಾಡುವುದಷ್ಟೇ ಅಲ್ಲದೆ ಜನತೆಯು ಸ್ನಾನ ಮಾಡುವಂತೆ ಮಾಡೋಣ.

ಹೀಗೆ ಇಬ್ಬರು ಗೌಹಾಟಿ ಜಿಲ್ಲೆಯ ಗ್ರಾಮ-ಗ್ರಾಮಗಳಲ್ಲಿ ಸಂಚರಿಸುತ್ತ ರಾಮನಾಮ ಸಂಕೀರ್ತನೆ ಮಾಡುತ್ತಾ. ತಾವು ಮುಗ್ಧರಾಗಿ, ಜನತೆಯನ್ನು ಮುಗ್ಧರನ್ನಾಗಿಸುತ್ತಿದ್ದರು.

# ತ್ರಿಕೂಟ ನಿರೂಪಣೆ - ಗುರುವಿನಲ್ಲಿ ಬ್ರಹ್ಮ-ವಿಷ್ಣು-ಮಹೇಶ್ವರ ಅಂಶ ಕೂಡಿರುತ್ತದೆ

ಒಮ್ಮೆ ವಿಂಧ್ಯಾಚಲದ ಶಿಖರದ ಮೇಲೆ ನಿಂತ ಮಹಾತ್ಮಾ ಕಪಿಲ ಮಹರ್ಷಿಯು ತನ್ನ ಶಿಷ್ಯನಾದ ನಂದನನಿಗೆ ಈ ರೀತಿ ಬೋಧಿಸುತ್ತಿದ್ದರು.

**ಕಪಿಲ-** ನಿನ್ನ ಬಯಕೆ ಏನು ವತ್ಸ ನಂದನ?!

**ನಂದನ** – ನಿರಂತರ ಪರಮಾತ್ಮನ ದಿವ್ಯದರ್ಶನ.

**ಕಪಿಲ** – ಹಾಗಾದರೆ, ನೀನು ತ್ರಿಕೂಟದಿಂದ ನಿನ್ನನ್ನು ರಕ್ಷಿಸಿಕೊಳ್ಳುವುದು ಅವಶ್ಯಕ.

**ನಂದನ –** ತ್ರಿಕೂಟವೆಂದರೇನು ಗುರುಗಳೇ?

**ಕಪಿಲ** – ಸತ್ವ-ರಜಸ್ಸು-ತಮಸ್ಸು ಈ ಮೂರು ಗುಣಗಳ ಸಮಾವೇಶವೇ ತ್ರಿಕೂಟ

**ನಂದನ** – ಈ ಗುಣಗಳು ತ್ಯಾಜ್ಯವೇಕೆ?

**ಕಪಿಲ** – ಸತ್ವಗುಣವು ಕೀರ್ತಿಯ ಮೂಲಕ ಭಗವದ್ದರ್ಶನಕ್ಕೆ ಬಾಧಕವಾಗಬಹುದು. ರಜೋ ಗುಣವು ಕಂಚನದ ಮೂಲಕ ಮತ್ತು ತಮೋಗುಣ ಕಾಮಿನೀ ಮೂಲಕವಾಗಿ - ಈ ಕೀರ್ತಿ-ಕಂಚನ-ಕಾಮಿನಿಯೇ ತ್ರಿಕೂಟವು.

ಈ ಮೂರು ಭಗವದ್ದರ್ಶನ-ಭಕ್ತಿಮಾರ್ಗದಲ್ಲಿ ಬಾಧೆಯನ್ನುಂಟು ಮಾಡುತ್ತದೆ. ಅಧೋಗತಿಗೆ ಕಾರಣವಾಗಬಹುದು.

**ನಂದನ –** ಈ ಮೂರು ಗುಣಗಳ ನಿರ್ಮಾಣ ಹೇಗಾಯಿತು? ಯಾರಿಂದ?

**ಕಪಿಲ** – ಮಾಯೆಯಿಂದ. ಈ ಮಹಾಮಾಯೆಯಿಂದ ರಕ್ಷಿಸಿಕೊಂಡು ಜೀವಾತ್ಮನನ್ನು ಪರಮಾತ್ಮನಲ್ಲಿ ಸ್ಥಿರಗೊಳಿಸುವುದೇ ಪುರುಷಾರ್ಥ. ಈ ಮಾಯಯೇ ಪರೀಕ್ಷಾಭೂಮಿಯು. ಈ ಮೂರು ಶಿಖರಗಳಲ್ಲಿ ಒಂದನ್ನು ಸ್ಪರ್ಶಿಸಿದರೂ ಅಧೋಗತಿಯು ನಿಶ್ಚಿತವು. ಗುರುವಿನ ಕರ್ತವ್ಯವು ಶಿಷ್ಯನಿಗೆ ಉತ್ತಮ ಮಾರ್ಗದರ್ಶನ ನೀಡುವುದೇ ಆಗಿರುತ್ತದೆ. ಆದ ಕಾರಣ ನಿನಗೆ ವಿವರಿಸಿ ಹೇಳಿದ್ದೇನೆ. ನೀನು ಜೀವನದ ಲಕ್ಷ್ಯವನ್ನು ಸಾಧಿಸಲು ಗುಣಾತೀತನಾಗು. ನಾನಿನ್ನು ಹೊರಡುತ್ತೇನೆ.

**ನಂದನ** – ಹೊರಡುತ್ತೇನೆ ಎಂದರೆ? ಎಲ್ಲಿಗೆ ಗುರುದೇವ! ನಿಮಗಾಗಿ ನಾನು ನನ್ನ ತಂದೆ-ತಾಯಿ-ಬಂಧುವರ್ಗವನ್ನು ಬಿಟ್ಟೆ. ಈಗ ನಿಮ್ಮನ್ನೂ ಸಹ ಕಳೆದುಕೊಳ್ಳುವನೇನು!

**ಕಪಿಲ** – ನಾನು ಸದಾ ನಿನ್ನೊಡನೇ ಇರುತ್ತೇನೆ. ಸದ್ಗುರು-ಪರಮಾತ್ಮ-ಮಾಯೆ ಈ ಮೂವರು ಸದಾ ಸರ್ವತ್ರ ಇರುತ್ತಾರೆ. ನೀನು ನಿಜವಾಗಿ ನನ್ನನ್ನು ಯಾವಾಗ ನೋಡಬೇಕೆಂದು ಬಯಸಿದಲ್ಲಿ ನಾನು ಆ ಕ್ಷಣದಲ್ಲಿ ನಿನ್ನೆದುರು ಪ್ರಕಟನಾಗಿ ನಿನ್ನನ್ನು ಸಮಸ್ಯೆಯಿಂದ ಪಾರು ಮಾಡುತ್ತೇನೆ. ಆದರೆ, ಜೊತೆಯಲ್ಲಿ ಮಾತ್ರ ಇರಲಾರೆ.

**ನಂದನ –** ಯಾಕೆ ಸ್ವಾಮಿ?!

**ಕಪಿಲ** – ಯೋಗ-ಭೋಗ ಮತ್ತು ಭೋಜನ ಈ ಮೂರು ಕೆಲಸವನ್ನು ಏಕಾಂತದಲ್ಲಿ ಮಾಡಬೇಕು. ನಾನು ಗಂಗಾಸಾಗರದಲ್ಲಿ ತಪಸ್ಸು ಮಾಡಲು ತೆರಳುವವನಿದ್ದೇನೆ . ನೀನು ಈ ವಿಂಧ್ಯಾಚಲದ ಶಿಖರದಲ್ಲಿದ್ದುಕೊಂಡು ತಪಸ್ಸನ್ನು ಮಾಡು.

ಆದರೂ ನಾನು ನಿನ್ನಿಂದ ದೂರವಿರುವನೆಂದು ಭಾವಿಸಬೇಡ. ಮಾಯಾ-ಸಂತ-ಪರಮಾತ್ಮರಲ್ಲಿ ದೂರ ಇರುವುದಿಲ್ಲ.

**ನಂದನ** – ಮಾಯೆಯ ವ್ಯಾಪಕತೆ ಯಾವ ಕೆಲಸವನ್ನು ಮಾಡುತ್ತದೆ?

**ಕಪಿಲ** – ತ್ರಿಗುಣದ ಮೂಲಕ ಜೀವಾತ್ಮನನ್ನು ಸತಾಯಿಸುವುದು. ಯಾತ್ರಿಗೆ ತನ್ನ ಲಕ್ಷ್ಯವು ಈಡೇರದಿರುವಂತೆ ಮಾಡುವುದು.

**ನಂದನ –** ಸಂತನ ವ್ಯಾಪಕತೆ ಯಾವ ಕೆಲಸವನ್ನು ಮಾಡುತ್ತದೆ?

**ಕಪಿಲ -** ಪ್ರತ್ಯೇಕ ಜೀವಾತ್ಮಕ್ಕೆ ಉತ್ತಮ ಗುಣ ಮತ್ತು ಕೆಟ್ಟ ಗುಣಗಳ ಬಗ್ಗೆ ಪಾಠ ಹೇಳುತ್ತದೆ

**ನಂದನ** – ಮತ್ತೆ! ಪರಮಾತ್ಮನ ವ್ಯಾಪಕತೆ?

**ಕಪಿಲ** – ಮಾಯಾ ಮತ್ತು ಸಂತರ ಕಾರ್ಯಕ್ಷಮತೆಯನ್ನು ನೋಡುತ್ತಾ ಇಬ್ಬರನ್ನೂ ಜೀವಂತವಾಗಿಡುವುದು

**ನಂದನ** – ಸಂತನ ಕೆಲಸವನ್ನು ಪರಮಾತ್ಮ ಮಾಡಲಾರನೇ?

**ಕಪಿಲ** – ಇಲ್ಲ, ಪರಮಾತ್ಮ ಓರ್ವ ದರ್ಶಕನಷ್ಟೇ, ವಾಚಕನಲ್ಲ. ಮಾತಾಡುವ ಕೆಲಸವನ್ನು ಸಂತನಿಗೆ ಕೊಟ್ಟಿರುತ್ತಾನೆ.

**ನಂದನ -** ಅಂದರೆ, ಪರಮಾತ್ಮನಲ್ಲಿ ಮಾತಾಡುವ ಶಕ್ತಿ ಇಲ್ಲವೆಂದಾಯಿತು.

**ಕಪಿಲ** – ಹಾಗಲ್ಲ, ಅವನಲ್ಲಿ ಎಲ್ಲಾ ಶಕ್ತಿಯೂ ಇದೆ. ಆದರೂ ತನ್ನನ್ನು ಮೌನೀಯನ್ನಾಗಿಸಿಕೊಂಡಿದ್ದಾನೆ. ಕಾರಣ ಅವನಿಗೇ

ಗೊತ್ತು. ಅವನ ಅವತಾರಗಳು ಮಾತಾಡುತ್ತವೆ. ಆದರೆ, ಅವನು ಯಾರೊಂದಿಗೂ ಮಾತನಾಡಲಾರ.

**ನಂದನ** – ಮಾತನಾಡದಿರುವುದು ಪರಮಾತ್ಮನ ಒಂದು ಕಲೆಯಾಗಿರಬೇಕು.

**ಕಪಿಲ –** ಏನು ಬೇಕಾದರೂ ನೀನು ಅರ್ಥೈಸಿಕೊಳ್ಳಬಹುದು.

ಕಪಿಲ ಗುರುಗಳು ತೆರಳಿದ ಒಂದು ತಿಂಗಳ ನಂತರ ಒಂದು ದಿನ ನಂದನ ಸಂಚರಿಸುತ್ತಿದ್ದ ಸಮಯದಲ್ಲಿ ಆತನಿಗೆ ಒಂದು ಚಿನ್ನದ ಖಜಾನೆ ಲಭಿಸಿತು. ಚಿನ್ನದ ಖಜಾನೆ ನೋಡುತ್ತಿರುವಂತೆಯೇ ನಂದನನ ಮಾನಸಿಕತೆಯಲ್ಲಿ ಒಂದು ವಿಭಿನ್ನ ಪ್ರಕಾರದ ಆಸಕ್ತಿಯುಂಟಾಯಿತು. ಮನದಲ್ಲೇ ಚಿಂತಿಸಲಾರಂಭಿಸಿದ. ಗುರುಗಳು ತ್ರಿಗುಣದಿಂದ ದೂರ ಇರಬೇಕೆಂದು ಹೇಳಿದ್ದೇನೊ ನಿಜವೇ. ಆದರೆ, ಗುರುವಚನವೂ ಕೂಡ ಇದನ್ನು ಪ್ರಮಾಣಗೊಳಿಸಲಾಗುತ್ತೆಂಬುದನ್ನು ಹೇಳಲಾರದು. ಒಂದು ವೇಳೆ ನಾನು ಈ ಸಿಕ್ಕ ಧನವನ್ನು ಕೆಟ್ಟ ಕೆಲಸಕ್ಕೆ ಉಪಯೋಗಿಸಿದರೆ ಕೆಟ್ಟದಾಗಬಹುದು. ಆದರೆ, ಒಳ್ಳೆಯ ಕೆಲಸಕ್ಕೆ ಉಪಯೋಗಿಸಿಕೊಂಡರೆ ಅದ್ಹೇಗೆ ಕೆಟ್ಟದಾಗುತ್ತದೆ? ಗುರುಗಳ ವಿಚಾರದಲ್ಲಿ ಹಣದ ವಿನಿಯೋಗದ ಬಗ್ಗೆ ಭಿನ್ನತೆ ಕಂಡು ಬರುತ್ತದೆ. ಧನ ಕೆಟ್ಟದಲ್ಲ, ಆದರೆ ಅದರ ಉಪಯೋಗ ಕೆಟ್ಟದಾಗಬಹುದು. ನಾನು ಉತ್ತಮ ಕಾರ್ಯ ಸಾಧನೆಗಾಗಿ ಈ ಹಣವನ್ನು ಉಪಯೋಗಿಸಿಕೊಂಡರೆ ಅದರಿಂದ ಹಾನಿ ಉಂಟಾಗುವ ಸಾಧ್ಯತೆಯೇ ಇರುವುದಿಲ್ಲ, ಎಂದು ಚಿಂತಿಸಿ ತದನಂತರ ಅಲ್ಲಿಯ ಕೆಲಸದವರನ್ನು ಕರೆಸಿದ. ಕೆಲಸಗಾರರು ತಮ್ಮ ಔಜಾರದೊಡನೆ ಅಲ್ಲಿಗೆ ತಲುಪಿದರು. ನಂದನನು ಅವರಿಗೆ ತಿಳಿಹೇಳಿದ.

**ನಂದನ** - ನೋಡಿ, ಈ ಸ್ಥಾನದಲ್ಲಿ ಒಂದು ಮಂದಿರದ ನಿರ್ಮಾಣವಾಗಬೇಕಿದೆ. ಆ ಮಂದಿರಲ್ಲಿ ಮಹರ್ಷಿ ಕಪಿಲರೂ ಮತ್ತು ಪರಮೇಶ್ವರನ ಸ್ಥಾಪನೆಯಾಗಬೇಕು. ನೀವು ಕಪಿಲ ಗುರುವಿನ ಬಗ್ಗೆ ಏನೂ ತಿಳಿದಿಲ್ಲ. ಪುರುಷ, ಪ್ರಕೃತಿ ಮತ್ತು ಸಮಸ್ತ

ಜೀವರಾಶಿಗೆ ಕರ್ತವ್ಯದ ಬೋಧನೆ ಮಾಡುವವರಿವರು. ಈ ಮೂವರ ಸ್ಥಿತಿ-ಗತಿಗಳನ್ನು ಹಲವಾರು ಜನರು ತಿಳಿದಿರಬಹುದು ಅಥವಾ ತಿಳಿಯದೆಯೂ ಇರಬಹುದು. ಆದರೆ, ಈ ಮೂವರ ಉದ್ದೇಶಗಳ ಬಗ್ಗೆ ಯಾರೂ ಉಪದೇಶಿಸಿಲ್ಲ, ಕಪಿಲ ಗುರುಗಳನ್ನು ಬಿಟ್ಟು. ಇಂತಹ ಜಗದ್ಗುರು ಕಪಿಲಾಚಾರ್ಯರಿಗೆ ಜಯವಾಗಲಿ.

ಕಾರ್ಮಿಕ ವರ್ಗ ಹಾಗೂ ಅವರ ಉಸ್ತುವಾರಿ ನೋಡಿಕೊಳ್ಳಲು ಬಂದಿರುವವರಿಗೆ ಇಲ್ಲೇನೋ ಗಹನವಾದ ರಹಸ್ಯವಿದೆ ಎಂದೆನಿಸಿ ಅವರೂ ಕೂಡ ಜಯಘೋಷ ಮಾಡಿದರು.

ನಂದನನು ತನ್ನ ಮನದಲ್ಲೇ - ಈಗ ಗುರುಗಳ ಅಸಮಾಧಾನ ನಷ್ಟವಾಗಲಿದೆ. ತನ್ನ ಗುಣಗಾನವನ್ನು ಕೇಳಿದ ತರುವಾಯ ಯಾರೂ ದ್ರವಿಸದೇ ಇರುವರೇ?

**ನಂದನ** – ಕೇವಲ ಮಂದಿರ ನಿರ್ಮಾಣದ ನಂತರ ನಿಮ್ಮ ಕಾರ್ಯಸಂಪನ್ನವಾಗಲಾರದು. ಮಂದಿರದ ಮುಂದೆ ಒಂದು ಬಾವಿಯನ್ನು ತೋಡಬೇಕು.

**ಮುಖಂಡ** – ಹೌದು, ಹೌದು. ಬಾವಿಯ ನಿರ್ಮಾಣ ಅವಶ್ಯ ಆಗಲೇಬೇಕು. ಬಾವಿ ಇಲ್ಲದೆ ಮಂದಿರವೇ?

**ನಂದನ** – ಒಂದು ಧರ್ಮಶಾಲೆಯನ್ನು ನಿರ್ಮಿಸಬೇಕಾಗುತ್ತದೆ

**ಮುಖಂಡ –** ಗುರುಗಳ ದರ್ಶನಕ್ಕಾಗಿ ಸಮಸ್ತ ಜನತೆ ಬಂದಾಗ ಅವರು ಉಳಿದುಕೊಳ್ಳಲೋಸುಗ ಧರ್ಮಶಾಲೆಯನ್ನು ಅವಶ್ಯ ನಿರ್ಮಿಸಲೇಬೇಕು.

**ನಂದನ –** ಗುರುದರ್ಶನಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಬರಲು ಪ್ರಾರಂಭಿಸಿದರೆ ಉಳಿದುಕೊಳ್ಳಲು ವಿಶಾಲವಾದ ಧರ್ಮಶಾಲೆಯೇ ಆಗಬೇಕು. ಕನಿಷ್ಟವೆಂದರೂ ಒಂದು ಮೈಲಿಯ ವರ್ತುಲದಲ್ಲಾಗಬೇಕು. ಮೂರು ಅಂತಸ್ತಿನದಾಗಿರಬೇಕು.

ಎಲ್ಲವೂ ಕಲ್ಲಿನಿಂದಲೇ ಆಗಬೇಕು. ಇಲ್ಲಿ ಕಲ್ಲಿನ ಕೊರತೆ ಇರುವುದಿಲ್ಲ.

**ಮುಖಂಡ –** ಧನದ ಕೊರತೆ, ಕಲ್ಲಿನ ಕೊರತೆ. ಎಲ್ಲಿ ಜಗದ್ಗುರು ಕಪಿಲರಿರುತ್ತಾರೋ. ನಂದನರಂತಹ ಭಕ್ತರಿರುತ್ತಾರೋ ಅಲ್ಲಿ ಧನದ ಕೊರತೆ ಎಂದರೇನು? ಎಲ್ಲಿ ಧನದ ಕೊರತೆ ಇಲ್ಲವೋ ಅಲ್ಲಿ ಕಲ್ಲಿಗೇನು ಕೊರತೆ!

ದಿನಪೂರ್ತಿ ಯಾವ ಕೆಲಸವೂ ಆಗಲಿಲ್ಲ. ನೆಲದ ಮೇಲೆ ನಕ್ಷೆ ಬಿಡಿಸುವುದು ಮತ್ತು ಅಳಿಸುವುದೇ ಆಗಿತ್ತು. ಈ ಮಧ್ಯೆ ಚತುರ ಮುಖಂಡನು ನಂದನನ ಮುಖದಿಂದ ಚಿನ್ನ ಇರುವ ಜಾಗವನ್ನು ತಿಳಿದುಕೊಂಡಿದ್ದ. ಸಂತೋಷವನ್ನು ತಡೆಯಲಾಗದೇ ಈ ಮಾತನ್ನು ನಂದನ ಮುಖಂಡನಿಗೆ ತಿಳಿಸಿದ್ದ. ಮುಂದಾದರೂ ಇವರಿಗೇ ತಾನೇ ಈ ಚಿನ್ನ ಲಭಿಸಬೇಕಾದದ್ದು, ಮುಚ್ಚಿ ಇಡುವುದರಿಂದ ಪ್ರಯೋಜನವೇನೆಂದು ತಿಳಿದು.

ರಾತ್ರಿ ಆಯಿತು. ಚಂದ್ರನ ಬೆಳದಿಂಗಲು ಎಲ್ಲೆಡೆ ಹರಡಿತ್ತು. ಮುಖಂಡನು ತನ್ನ ಅನುಯಾಯಿಗಳ ಸಹಿತ ಅಲ್ಲಿಗೆ ಬಂದು ನಂದನನನ್ನು ಹಿಡಿದು ಮರಕ್ಕೆ ಕಟ್ಟಿ ಹಾಕಿ ಅವನ ಕಣ್ಣೆದುರಲ್ಲೇ ಎಲ್ಲಾ ಚಿನ್ನವನ್ನು ಲೂಟಿ ಮಾಡಿ ತೆಗೆದುಕೊಂಡು ಹೊರಟುಹೋದ. ಕನಿಷ್ಟ ಪಕ್ಷ, ಮರದಲ್ಲಿ ಕಟ್ಟಿದ್ದ ನಂದನನನ್ನು ಬಂಧಮುಕ್ತನನ್ನಾಗಿಸುವ ಬಗ್ಗೆ ಯಾರು ಚಿಂತಿಸಲಿಲ್ಲ.

ಬೆಳಿಗ್ಗೆ ದನಕಾಯುವ ಕೆಲವರು ಅಲ್ಲಿಗೆ ಬಂದು ಈತನನ್ನು ಬಿಡಿಸಿದರು. ಇಲ್ಲವಾದಲ್ಲಿ ಸಂಜೆಯ ವೇಳೆಗೆ ಹಸಿವಿನಿಂದ ನಂದನನ ಮೃತ್ಯುವೂ ಆಗಬಹುದಿತ್ತು.

**ನಂದನ ನೆಲದ ಮೇಲೆ ಕುಳಿತುಕೊಂಡು ತನ್ನಲ್ಲೇ** – ಗುರುವಚನದಲ್ಲಿ ಯಾರು ಪರಿವರ್ತನೆಯ ಬಗ್ಗೆ ಯೋಚಿಸುತ್ತಾರೋ ಅವರಿಗೆ ಇದೇ ಶಾಸ್ತಿಯಾಗುವುದು ನಿಶ್ಚಿತವು. ಚಿನ್ನದ ಉತ್ತಮತೆ ಅಥವಾ ಅಧಮತೆಯ ಚಿಂತಿಯಿರಲಿ. ಅದರ

ದರ್ಶನವೇ ಅಧೋಗತಿಗೆ ಕಾರಣವಾಗುತ್ತದೆ. ರಾಮ! ರಾಮ! ನಾನೆಲ್ಲಿ ಕಳೆದು ಹೋಗಿದ್ದೆ. ತ್ರಿಗುಣಗಳ ತ್ರಿಕೂಟದಿಂದ ಎಷ್ಟು ದೂರವಿರುವೆವೋ ಅಷ್ಟೇ ಒಳ್ಳೆಯದು.

ಯಾರು ಗುರುವಚನದಲ್ಲಿ ವಿಶ್ವಾಸವನ್ನಿಡುವುದಿಲ್ಲವೋ ಅವನ ಉದ್ಧಾರವೆಂದೂ ಆಗದು. ಬೆಳಿಗ್ಗೆ ಮಂದಿರವಿಲ್ಲ, ಭಾವಿ ಇಲ್ಲ – ಧರ್ಮಶಾಲೆಯಂತೂ ಇಲ್ಲವೇ ಇಲ್ಲ. ಅಖಿಲ ಬ್ರಹ್ಮಾಂಡದ ಜಯಜಯಕಾರವೂ ಇಲ್ಲ. ಒಂದು ವೇಳೆ ಈ ಗೋಪಾಲಕರು ಬರದಿದ್ದರೆ ರಾತ್ರಿಯೊಳಗಾಗಿ ನಾನು ಸತ್ತೇ ಹೋಗುತ್ತಿದೆ.

ಧಿಕ್ಕಾರವಿರಲಿ ಈ ಕಾಂಚನಕ್ಕೆ., ಇಂದಿನಿಂದ ನಾನು ಯಾವತ್ತೂ, ಯಾವಾಗಲೂ ಈ ಮೋಹದಿಂದ ದೂರವಿರುತ್ತೇನೆ – ಎಂಬುದಾಗಿ ಹೇಳಿಕೊಂಡ.

ಈ ಘಟನೆಯಿಂದ 03 ತಿಂಗಳ ನಂತರ ನಡೆದ ಘಟನೆ ಇನ್ನೂ ರೋಚಕವಾಗಿತ್ತು. ಒಂದು ದಿನ ನಂದನ ವ್ಯಾಯಾಮವನ್ನು ಮಾಡುತ್ತಿರುವಲ್ಲಿ ಚಾತಕಿ ಎಂಬ ಯಕ್ಷ ಕನ್ಯೆ ಅವನೆದುರು ಪ್ರಕಟವಾದಳು. ರಮಣೀಯ ರೂಪದ ಷೋಡಶಿಯಾದ ಅವಳ ಶರೀರದಿಂದ ಕಮಲದ ಸುಗಂಧ ಹೊರ ಹೊಮ್ಮುತ್ತಿತ್ತು.

ಅವಳನ್ನು ಕಂಡಾಕ್ಷಣ ನಂದನನ ಗುಣದಲ್ಲಿ ಪರಿವರ್ತನೆಯಾಗಿತ್ತು

**ನಂದನ** – ನೀನು ಯಾರು?

**ಚಾತಕಿ** – ನಾನು ಚಾತಕಿಯು. ಕುಬೇರನ ಲೋಕದವಳು. ನನ್ನ ಪೂಜ್ಯ ತಂದೆಯವರ ವಚನದಂತೆ ನನಗೆ ಅನುರೂಪನಾದ ಪತಿಯನ್ನು ಹುಡುಕುತ್ತಾ ಇಲ್ಲಿಗೆ ಬಂದೆ. ನನ್ನ ಶ್ರಮ ಸಫಲವಾಯಿತು. ನನ್ನ ಪತಿಯ ದರ್ಶನಭಾಗ್ಯವೂ ಇಂದು ನನಗೆ ಲಭಿಸಿತು.

**ನಂದನ** – ಯಾರು ನಿನ್ನ ಪತಿ?

**ಚಾತಕಿ** – ನೀವಲ್ಲದೆ ಮತ್ತ್ಯಾರು?

**ನಂದನ** – ನಾನು ಮದುವೆಯಾಗಲು ಬಯಸಿದ್ದಲ್ಲಿ ಮನೆಯಲ್ಲೇ ಇದ್ದು ಇದನ್ನು ಸಾಧಿಸುತ್ತಿದ್ದೆ. ಓದಿ ಬರೆಯಬಲ್ಲ ನಾನು ಜಮೀನುದಾರನ ಮಗನು, ಮೂರ್ಖನಲ್ಲ, ಅವಿವೇಕಿಯಲ್ಲ.

**ಚಾತಕಿ** – ನೀವು ನನ್ನೊಡನೆ ಮದುವೆ ಆಗಿ ಅಥವಾ ಬಿಡಿ. ಅದು ನಿಮಗೆ ಸಂಬಂಧಿಸಿದ್ದು, ನಾನಂತೂ ನಿಮ್ಮ ಸಂಗಡ ವಿವಾಹಿತಳು

**ನಂದನ** - ಹೇಗೆ?

**ಚಾತಕಿ** – ಇಚ್ಛೆಯಿಂದ. ಇಚ್ಛಾಪೂರ್ತಿ ವಿವಾಹವೇ ಸ್ವಯಂವರವು. ನಾವಾದರೋ ಯಕ್ಷ ಕನ್ಯೆಯರು. ಇಚ್ಛೆಗೆ ಮಹತ್ವವನ್ನು ಕೊಡುವವರು.

**ನಂದನ –** ನಾನು ನಿನ್ನನ್ನು ಮುಟ್ಟುವುದೂ ಇಲ್ಲ.

**ಚಾತಕಿ** – ಮುಟ್ಟಬೇಕೆಂದು ಯಾರು ನಿಮಗೆ ಹೇಳಿದವರು. ಮುಟ್ಟುವ ಅಗತ್ಯವಿಲ್ಲ. ನೀವು ಭಗವನ್ನಾಮ ಸ್ಮರಣೆ ಮಾಡಿ. ನಾನು ನಿಮಗಾಗಿ ಕಂದ-ಮೂಲ, ಹೂವು-ಹಣ್ಣುಗಳನ್ನು ತೆಗೆದುಕೊಂಡು ಬಂದು ನಿಮ್ಮ ಸೇವೆಯನ್ನು ಮಾಡುತ್ತೇನೆ. ಮುಟ್ಟುವ ಮಾತೇ ಇಲ್ಲ. ಮುಟ್ಟಲೇಬೇಕೆನಿಸಿದರೆ ನನ್ನ ಅಭ್ಯಂತರವೇನೂ ಇಲ್ಲ.

**ನಂದನ -** ನಿನ್ನನ್ನು ನನ್ನ ಸಂಗಡ ಇರಿಸಿಕೊಳ್ಳಲಾರೆ

**ಚಾತಕಿ –** ಯಾಕೆ ಸ್ವಾಮಿ?!

**ನಂದನ** – ನನ್ನನ್ನು ಸ್ವಾಮಿ ಎಂದು ಕರೆಯಬೇಡ

**ಚಾತಕಿ** – ಯಾಕೆ ಪ್ರಿಯತಮ?

**ನಂದನ** – ಪ್ರಿಯತಮನೆಂದೂ ಕರೆಯಬೇಡ

**ಚಾತಕಿ** – ಯಾಕೆ ಇಷ್ಟದೇವರೇ?

**ನಂದನ** – ಹುಷ್, ಹುಚ್ಚಿ. ನಾನು ಯಾವ ಶಬ್ದಗಳನ್ನು ಕೇಳಬಯಸುವುದಿಲ್ಲವೋ, ನೀನು ಅದೇ ಶಬ್ದಗಳನ್ನು ಪುನಃ ಪುನಃ ಉಪಯೋಗಿಸುತ್ತಿರುವೆ. ನಾನು ನಿನಗೆ ಹೇಳಿದನಲ್ಲಾ, ನಿನ್ನನ್ನು ನನ್ನ ಸಂಗಡ ಇರಿಸಿಕೊಳ್ಳಲಾರೆ ಎಂದು ಸಾಕು ಮಾಡು. ನೀನೀಗ ತೆರಳಬಹುದು

**ಚಾತಕಿ –** ಕಡೆಗೆ ಇದರ ಕಾರಣವನ್ನಾದರೂ ಹೇಳಿ!

**ನಂದನ –** ನಾನು ಬ್ರಹ್ಮಚಾರಿ

**ಚಾತಕಿ** – ಮತ್ತದೇ ಮಾತು. ಯಾವ ಮನುಷ್ಯ ಗೃಹಸ್ಥಾಶ್ರಮದಲ್ಲಿ ಬ್ರಹ್ಮಚರ್ಯದ ಪಾಲನೆ ಮಾಡಲಾರ ಅವನು ದುರ್ಬಲನೇನೋ ಸರಿ. ಅವಿವಾಹಿತನಾಗಿ ಬ್ರಹ್ಮಚರ್ಯೆಯನ್ನು ಮಾಡುವುದು ಎಂದರೆ ಏನನ್ನು ಸಾಧಿಸಿದಂತೆ. ಭಗವಾನ್ ಭೂತನಾಥನಾದ ಶಂಕರನು ಪಾರ್ವತಿಯ ಜೊತೆಯಿದ್ದೂ ಬ್ರಹ್ಮಚರ್ಯದ ಆಚರಣೆ ಮಾಡಲಿಲ್ಲವೇ? ಶೇಷಶಯನನಾದ ವಿಷ್ಣು ಮಹಾಲಕ್ಷ್ಮಿಯೇ ಜೊತೆಯಲ್ಲಿದ್ದರೂ ಬ್ರಹ್ಮಚಾರೀ ತಾನೇ. ಶ್ರೀ ರಾಮ ಸೀತೆಯ ಜೊತೆಯಲ್ಲಿದ್ದರೂ ಬ್ರಹ್ಮಚಾರಿ ತಾನೇ. ರಾಸಪ್ರಿಯ ಶ್ರೀ ಕೃಷ್ಣ ರಾಧೆಯ ಜೊತೆಯಲ್ಲಿದ್ದೂ ಬ್ರಹ್ಮಚರ್ಯೆಯನ್ನು ಪಾಲಿಸಲಿಲ್ಲವೇ. ಹೀಗೆ ಬಹಳಷ್ಟು ಉದಾಹರಣೆಗಳುಂಟು.

**ನಂದನ –** ಇಲ್ಲ, ಇಲ್ಲ. ನನ್ನ ಗುರುಗಳು ತಿರಸ್ಕರಿಸಿದ್ದಾರೆ

**ಚಾತಕಿ** – ಏನೆಂದು?

**ನಂದನ** – ಕಾಮಿನಿಯಿಂದ ದೂರ ಇರು ಎಂದು ಉಪದೇಶಿಸಿದ್ದಾರೆ.

**ಚಾತಕಿ** – ನಿಮಗೆ ಹೇಗೆ ಗುರುವೋ, ನನಗೂ ಅಷ್ಟೇ. ಗುರು ವಚನವನ್ನು ಶ್ರದ್ಧಾಪೂರ್ವಕವಾಗಿ ಆಚರಿಸಬೇಕು. ನಾನು ಇದೇ ಮಾತನ್ನು ಹೇಳುತ್ತಿರುವೆ. ನೀವು ಸಂಗದಲ್ಲಿರೆಂದು

**ನಂದನ** – ನಾನು ಯಾವ ಸ್ತ್ರೀಯನ್ನು ಪ್ರೇಮಿಸಲಾರೆ

**ಚಾತಕಿ** – ನಾನು ಯಾವಾಗ ಹೇಳಿದೆ ನೀವು ನನ್ನನ್ನು ಪ್ರೀತಿಸೆಂದು. ಪ್ರೇಮ ಎನ್ನುವುದು ಕೇವಲ ಪರಮಾತ್ಮನಲ್ಲಿರಬೇಕು.

ನಂದನ ತನ್ನಲ್ಲೇ ಯೋಚಿಸಲಾರಂಭಿಸಿದ. ಗುರುಗಳ ಉಪದೇಶ ಕಾಮಿನಿಯಿಂದ ದೂರವಿರು ಎಂದು, ಇಲ್ಲೂ ಸ್ವಲ್ಪ ಪರಿವರ್ತನೆಗೆ ಅವಕಾಶವಿದೆ. ಹೆಂಗಸು ದುಷ್ಟಳಲ್ಲ. ಅವಳ ಉಪಯೋಗವು ಹಾನಿದಾಯಕವಲ್ಲ. ನಾನು ಇವಳ ಸಂಗಡ ಗೃಹಸ್ಥೀ ಸಂಬಂಧವನ್ನೇ ಇಟ್ಟುಕೊಳ್ಳುವುದಿಲ್ಲ. ಈಕೆಯನ್ನೂ ಭಕ್ತಿಮಾರ್ಗದಲ್ಲಿ ಕರೆಯೊಯ್ಯುತ್ತೇನೆ ಎಂದು.

ನಂತರ, ಇಬ್ಬರೂ ಜೊತೆಯಲ್ಲೇ ಇರಲಾರಂಭಿಸಿದರು. ತರಗು ಮತ್ತು ಬೆಂಕಿ ಹತ್ತಿರವಾಗಿರುವಾಗ ಬೆಂಕಿ ಹಚ್ಚಿಕೊಳ್ಳುವಲ್ಲಿ ಎಷ್ಟು ವೇಳೆ ಹಿಡಿಯುತ್ತದೆ?

ಕೆಲವು ದಿನ ಇಬ್ಬರೂ ಬೇರೆ ಬೇರೆಯಾಗೇ ಇದ್ದರು. ನಂತರ ಚಾತಕಿಯು ಒಂದು ದಿನ ನಂದನನ ಸನಿಹ ಬಂದು ಶಾಸ್ತ್ರದ ಉಲ್ಲೇಖ ಮಾಡುತ್ತಾ, ತನ್ನ ಸ್ವಾಮಿಯ ಚರಣಸೇವೆಯ ಬಗ್ಗೆ ಪ್ರತಿಪಾದಿಸಿದಳು. ತನ್ನ ಪತಿಯ ಪಾದಸೇವೆ ಪತ್ನಿಗೆ ಅವಶ್ಯ ಮಾಡಬೇಕೆಂದು ಉದಾಹರಣೆಯೊಂದಿಗೆ ನಿರೂಪಿಸಿದಳು.

ಮಹಾಲಕ್ಷ್ಮಿಯು ದಿನ ರಾತ್ರಿ ತನ್ನ ಬ್ರಹ್ಮಚಾರಿ ವಿಷ್ಣುವಿನ ಪಾದಸೇವೆ ಮಾಡುತ್ತಿರುತ್ತಾಳೆ. ನಾನಾದರೋ ರಾತ್ರಿ ಒಂದು ಘಂಟೆಯವರೆಗೆ ಮಾತ್ರ ಪಾದ ಸೇವೆ ಮಾಡಬೇಕೆಂದು ಕೊಂಡಿರುವೆ. ಇದು ನನ್ನ ಜನ್ಮಸಿದ್ಧ ಅಧಿಕಾರವೂ ಸಹ ಹೀಗೆ ನಂದನನನ್ನು ಒಪ್ಪುವಂತೆ ಮಾಡಿದಳು.

ನಿಧಾನವಾಗಿ ಈ ಚಾತಕಿಯು ನಂದನನ ಮನಸ್ಸು ಶರೀರ ಇವೆರಡನ್ನೂ ತನ್ನ ಅಧಿಕಾರವನ್ನಾಗಿ ಮಾಡಿಕೊಂಡಳು. ಅವರಿಬ್ಬರ ಮಧ್ಯೆ ಯಾವ ಬಂಧನವೂ ಉಳಿದಿರಲಿಲ್ಲ. ಪೂರ್ಣ ಗೃಹಸ್ಥಾಶ್ರಮಿಗಳಾದರು. ಈ ಪ್ರಕಾರ ನಂದನನ 24 ವರ್ಷಗಳ ತಪಸ್ಸು ನಿರರ್ಥಕವಾಗಿ ಹೋಯಿತು. ಬ್ರಹ್ಮಚರ್ಯವೂ ಖಂಡಿತವಾಗಿ ಹೋಯಿತು. ಹೀಗೆ ವ್ರತವನ್ನು ಭಂಗಗೊಳಿಸಿದ ಚಾತಕಿ ತನ್ನ ಲೋಕಕ್ಕೆ ವಾಪಸ್ಸು ಹೊರಟು ಹೋದಳು.

ನಂದನ ತಲೆ-ತಲೆ ಚಚ್ಚಿಕೊಂಡು ಅಳಲಾರಂಭಿಸಿದ. ಸಾಧನೆಯೂ ನೀರು ಪಾಲಾಯಿತು. ಅವಳೂ ದಕ್ಕಲಿಲ್ಲ. ರಾಮನೂ ಸಿಗಲಿಲ್ಲ. ರಮೆಯೂ ಉಳಿಯಲಿಲ್ಲ. ಯೋಗ-ಭೋಗಗಳೆರಡೂ ನಿರರ್ಥಕವಾದವು. ಯಾರು ಗುರು ವಚನದಲ್ಲಿ ವಿಶ್ವಾಸ ಇರುವುದಿಲ್ಲವೋ ಆತ ತನ್ನಂತೆಯೇ ಅಳುತ್ತಾನೆ.

ಕಾಂಚನದ ವಿಷಯದಲ್ಲಿ ಗುರುವಚನ ಮೀರಿದ್ದಕ್ಕೆ ಆ ಶಿಕ್ಷೆ ಉಂಟಾಯಿತು. ಕಾಮಿನಿ ಸಂಬಂಧದಲ್ಲಿ ಇದೇ ಗತಿ ಉಂಟಾಯಿತು. ಇನ್ನು ಕೀರ್ತಿಯ ವಿಷಯವನ್ನು ಪರಿಶೀಲಿಸಬೇಕಿದೆ ಅಷ್ಟೇ. ಈ ಮೂರನ್ನು ಪರೀಕ್ಷಿಸಿಯೇ ಬಿಡೋಣ. ನಂತರವಾದರೋ ಶುದ್ಧ ಜ್ಞಾನದ ಮಾರ್ಗವನ್ನು ತಿಳಿಯಬಹುದೇನೋ.

ಮೊದಲೇ ನಾನು ಗುರುವಚನದಲ್ಲಿ ವಿಶ್ವಾಸವಿಡಬೇಕಿತ್ತು. ಈಗಂತೂ ಎರಡರ ಅನುಭವವನ್ನು ಪಡೆದೆ. ನಾನು ಮೂರನೆಯದನ್ನೂ ಪರೀಕ್ಷೆ ಮಾಡಲೇಬೇಕು. ಗುರುಗಳ ಎರಡು ವಚನವೂ ಸತ್ಯವಾದ ನಂತರ ಮೂರನೆಯದು ಸತ್ಯವಾಗಲೇಬೇಕು. ಅದನ್ನು ಸಹ ಒಮ್ಮೆ ಕಣ್ಣಾರೇ ಏಕೆ ನೋಡಬಾರದು?

ಈ ಘಟನೆಯಾದ ನಂತರ 12 ವರ್ಷಗಳವರೆಗೆ ಘೋರವಾದ ತಪಸ್ಸನ್ನು ಮಾಡಿದರು. ಶೀತಕಾಲದಲ್ಲಿ ನೀರಲ್ಲಿ ನಿಂತುಕೊಂಡು, ಗ್ರೀಷ್ಮ ಋತುವಿನಲ್ಲಿ ಅಗ್ನಿಯ ಮಧ್ಯೆ ನಿಂತು ಓಂ ನಮಃ ಶಿವಾಯ ಮಂತ್ರವನ್ನು ಜಪಿಸುತ್ತಾ ಹಸಿವು-ಬಾಯಾರಿಕೆ-ನಿದ್ರೆ

ಮೊದಲಾದವನ್ನು ಜಯಿಸಿದನು. ನಂದನ ಓರ್ವ ಸಿದ್ದ ಪುರುಷನಾದ ಮತ್ತು ಜಗತ್ತನ್ನು ಸುಖ ಪೂರ್ಣವನ್ನಾಗಿಡಲು ಯೋಚಿಸಿದ.

ಯಾರಾದರೂ ತಮ್ಮ ಸಂಕಟದ ನಿವಾರಣೆಗಾಗಿ ಇವರ ಬಳಿ ಬಂದಲ್ಲಿ ಆತನಿಗೆ ಈತ ತನ್ನ ತಲೆಯಲ್ಲಿನ ಒಂದು ಕೂದಲನ್ನು ಕಿತ್ತು ಕೊಡುತ್ತಿದ್ದ. ಆ ಕೂದಲಿನ ಪ್ರಭಾವದಿಂದ ಅವನ ಕಷ್ಟ ನಿವಾರಣೆಯಾಗುತ್ತಿತ್ತು.

ಜನರು ಹೇಳತೊಡಗಿದರೆಂದರೆ - ನಮ್ಮ ಊರಿನಲ್ಲಿ ಓರ್ವ ಮಹಾತ್ಮರು ಬಂದಿದ್ದಾರೆ. ಅವರ ಒಂದೊಂದು ಕೂದಲೂ ಸಂಕಷ್ಟ ನಿವಾರಣೆ ಕ್ಷಮತೆಯುಳ್ಳದ್ದಾಗಿದೆ. ಹಾಗಾಗಿ, ನಾವೆಲ್ಲಾ ಹೋಗಿ ಕೂದಲನ್ನು ಪಡೆಯೋಣ.

ಇಷ್ಟೆಲ್ಲಾ ತಿಳಿದ ಮೇಲೂ ಯಾರಾದರೂ ಕಷ್ಟದಲ್ಲಿದ್ದರೆ ಅವರ ಪ್ರಾರಬ್ಧವಷ್ಟೇ!

ಈ ಮಾತಿನಿಂದ ಅಲ್ಲಿ ನೆರೆದಿದ್ದ 5-6 ಸಾವಿರ ಜನರೂ ನಂದನನ ಬಳಿ ಸಾರಿ. ಮಹಾತ್ಮರಿಗೆ ಕೂದಲನ್ನು ಕೀಳುವ ಕಷ್ಟವೇಕೆ ಕೊಡಬೇಕೆಂದು ನಿರ್ಣಯಿಸಿ ಕೈ ನೀಡಿದರು. ನಂದನರು ಮೂರ್ಚಿತರಾದರು. ಯಾಕೆಂದರೆ, ಅವರ ಕೂದಲನ್ನೆಲ್ಲಾ ಜನರೇ ಕಿತ್ತು ಹಾಕಿದ್ದರು.

ಮೂರ್ಛೆಯಿಂದೆದ್ದ ನಂದನನು ಅಲ್ಲಿಂದ ಓಡಿ ಹೋಗಿ ಪರ್ವತದ ಶಿಖರವನ್ನು ತಲುಪಿ ತ್ರಿಗುಣ ಸರ್ವದಾ ತ್ಯಾಜ್ಯವು, ತಪ್ಪಿಯೂ ಕೂಡ ಈ ತ್ರಿಕೂಟದಿಂದ ದೂರವಿರಬೇಕು. ಗುರುವಚನವೂ ಸರ್ವದಾ ಶಿರೋಧಾರ್ಯವು.

# ಶತ್ರುವನ್ನಲ್ಲ, ಶತ್ರುತ್ವವನ್ನು ನಿವಾರಿಸಿ

## ಪುಷ್ಪ -01

ಶ್ಯಾಮಗಢದ ರಾಜನಾದ ಶ್ಯಾಮಸಿಂಹನಲ್ಲಿ ಕೀರ್ತಿ ಮತ್ತು ಹೆಸರು ಗಳಿಸುವ ಉತ್ಕಟೇಚ್ಛೆ ಇತ್ತು. ಆದರೆ, ಕೀರ್ತಿಕಾರಿ ಗುಣಗಳು ಅವನಲ್ಲಿರಲಿಲ್ಲ. ಆದರೆ, ರಾಮಗಢದ ರಾಜನಾದ ರಾಮಸಿಂಹ ತದ್ವಿರುದ್ಧವಾಗಿದ್ದ. ಸುದ್ಗುಣಿಯಾಗಿ ಜನರನ್ನು ಮಕ್ಕಳಂತೆ ಪ್ರೀತಿಸುವವನೂ ಆಗಿದ್ದ. ಅವನ ಕೀರ್ತಿ ರಾಜ್ಯ ಮತ್ತು ಪರರಾಜ್ಯದಲ್ಲೂ ಹರಿದಿತ್ತು.

ಇದರಿಂದ ಶ್ಯಾಮಸಿಂಹನಿಗೆ ರಾಮಸಿಂಹನ ಬಗ್ಗೆ ಅಸೂಯೆ ಉಂಟಾಗಿತ್ತು. ಕಡೆಗೊಂದು ದಿನ ರಾಮಗಢದ ಮೇಲೆ ಯುದ್ಧ ಮಾಡಲು ತಯಾರಾಗಿ ಬಂದ. ಈ ವಿಷಯನ್ನರಿತ ರಾಮಸಿಂಹ ತನ್ನ ಮನದಲ್ಲೇ ಚಿಂತಿಸಿದ. ಒಂದು ವೇಳೆ ನಾನು ಯುದ್ಧದಲ್ಲಿ ಪಾಲ್ಗೊಂಡರೆ ಸಾವಿರಾರು ಜನರು ಪ್ರಾಣ ತೆರುತ್ತಾರೆ. ಅವರ ಮಕ್ಕಳು ಅನಾಥರಾಗುತ್ತಾರೆ. ಅವರ ಪತ್ನಿಯರು ಶಾಪವನ್ನೂ ಕೂಡ ಕೊಡಬಹುದು. ಅಷ್ಟೇ ಅಲ್ಲದೇ ಯುದ್ಧ ಅನೇಕ ರೋಗಗಳಿಗೆ ಕಾರಣವಾಗಬಹುದೆಂದು ಯೋಚಿಸಿ ಯುದ್ಧಕ್ಕಾಗಿ ಕಾತೊರೆಯದೇ ತನ್ನ ಮಹಲನ್ನು ತೊರೆದು ಗುಡ್ಡದಲ್ಲಿರುವ ಒಂದು ಗುಹೆಯಲ್ಲಿ ಅಡಗಿದನು.

ಬೆಳಿಗ್ಗೆ ರಾಮಗಢದ ರಾಜಸಿಂಹಾಸನದಲ್ಲಿ ಕುಳಿತ ಶ್ಯಾಮಸಿಂಗನು ದರಬಾರು ಮಾಡಿ ಕಡೆಯಲ್ಲಿ "ಯಾರು ರಾಮಸಿಂಹನನ್ನು ಹುಡುಕಿ ದರಬಾರಿನಲ್ಲಿ ಪ್ರಸ್ತುತಗೊಳಿಸುತ್ತಾರೋ ಅವರಿಗೆ ಒಂದು ಲಕ್ಷ ಮುದ್ರೆಯನ್ನು ಬಹುಮಾನವನ್ನಾಗಿ ಕೊಡುವೆ" ಎಂದು ಘೋಷಿಸಿದ.

ಯಾವ ಕಾನನದ ಗುಹೆಯಲ್ಲಿ ರಾಜ ರಾಮಸಿಂಹನು ಅವಿತಿಟ್ಟುಕೊಂಡಿದ್ದನೋ ಅಲ್ಲಿಗೆ ಇಬ್ಬರು ಮರ ಕಡಿಯುವವರು ತಲುಪಿದರು. ಅವರು ಸೌದೆ ವ್ಯಾಪಾರ ಮಾಡುವ ಮೂಲಕ ತಮ್ಮ ಜೀವನಯಾಪನೆ ಮಾಡುತ್ತಿದ್ದರು.

ಅಣ್ಣ-ತಮ್ಮಂದಿರಾದ ಅವರಲ್ಲಿ ಹಿರಿಯನ ಹೆಸರು ಜಂಗಲೀ ಎಂದು, ಚಿಕ್ಕವನ ಹೆಸರು ಮಂಗಲೀ ಎಂದಿತ್ತು. ಇಬ್ಬರಿಗೂ ಮದುವೆಯಾಗಿ ಒಂದೊಂದು ಮಗುವೂ ಇತ್ತು. ತುಂಬಾ ಕಷ್ಟದಿಂದ ಜೀವನ ನಡೆಯುತ್ತಿತ್ತು. ಯಾವ ಗುಹೆಯಲ್ಲಿ ರಾಜನು ಅಡಗಿದ್ದನೋ ಆ ಗುಹೆಯ ಸಮೀಪದಲ್ಲಿ ಇದ್ದ ಮರವನ್ನು ಕಡಿಯಲಾರಂಭಿಸಿದರು.

**ಮಂಗಲೀ -** ಹಾಯ್ ದುರಾದೃಷ್ಟವೇ! ಆ ನತಭಾಗ್ಯರಾಜ ಎಲ್ಲಿ ತಪ್ಪಿಸಿಕೊಂಡನೋ, ಅವನೆಲ್ಲಿಯಾದರೂ ಸಿಕ್ಕಿದ್ದರೆ ಹಿಡಿದುಕೊಂಡು ದರಬಾರಿನಲ್ಲಿ ಒಪ್ಪಿಸುತ್ತಿದ್ದೆ ಒಂದು ಲಕ್ಷ ಮುದ್ರೆಯನ್ನು ಸಂಪಾದಿಸುತ್ತಿದ್ದೆ.

**ಜಂಗಲಿ** - ಏನು? ಏನು ಬೊಗಳುತ್ತಿರುವೆ ನೀನು? ಇಂಥ ದಯವಾನ್ ಧರ್ಮವಾನ್ ಕೀರ್ತಿವಂತನಾದ ರಾಜನ ಬಗ್ಗೆ ನಿನ್ನ ಮನದಲ್ಲಿ ಯೋಚನೆ ಬಂದುದಾದರೂ ಹೇಗೆ? ನಿನ್ನನ್ನು ಕಂಡು ನರಕವು ಸಹ ಲಜ್ಜೆಯಿಂದ ಮುಖವನ್ನು ತಿರುಗಿಸುತ್ತಿತ್ತು.

**ಮಂಗಲೀ** - ನಿಶ್ಚಿತವಾಗಿ ನಾನವನನ್ನು ಕೊಂಡೊಯ್ಯುತ್ತಿದ್ದೆ. ಕೊನೆಗೆ ಯಾವನಾದರೂ ಹಿಡಿದುಕೊಂಡು ಹೋಗುತ್ತಿದ್ದ. ಆ ಕೆಲಸ ನನ್ನಿಂದಲೇ ಆಗಿ ಈ ಒಂದು ಲಕ್ಷ ನನಗೆ ಲಭಿಸುವಂತಿದ್ದರೆ?!

**ಜಂಗಲೀ -** ಒಂದು ವೇಳೆ ನಮ್ಮ ರಾಜ ನಮಗೆ ದೊರಕಿದ್ದರೂ ಸಹ ನಾನೆಂದು ಅವನನ್ನು ಕರೆದೊಯ್ಯುತ್ತಿರಲಿಲ್ಲ. ಧನ ಎಷ್ಟು ದಿನಗಳವರೆಗೆ? ಆದರೆ, ನಮಗೆ ಬರುವ ಕೆಟ್ಟ ಹೆಸರು ಅಮರ ಕಥೆಯಾಗುತ್ತದೆ.

ರಾಮ! ರಾಮ!

ಇಂತಹ ವಿಚಾರ ಯೋಚಿಸುವುದೂ ಪಾಪವು. ಈತನನ್ನು ಕೊಂಡೊಯ್ದ ತರುವಾಯ ಆ ಕ್ರೂರೀ ಶ್ಯಾಮಸಿಂಹ ಈತನ ಸಂಗಡ ಹೇಗೆ ವರ್ತಿಸಬಹುದು. ಮರಣದಂಡನೆಯನ್ನೂ ಸಹ ನೀಡಬಹುದು.

**ಮಂಗಲೀ** - ನಾಳೆ ಸಾಯುವವ ಇಂದು ಸತ್ತರೇನು? ನನಗೇನು ಮಾಡಿದ? ಶ್ಯಾಮಸಿಂಹ ಇವನು ಪಾತಾಳದಲ್ಲೇ ಇದ್ದರೂ ಹುಡುಕಿಸುವುದಂತೂ ನಿಶ್ಚಿತವೇ. ನೀನು ಬಿಡುವುದರಿಂದ ಅವನೇನೂ ಬದುಕಿರಲಾರ. ನನಗೆ ಸಿಕ್ಕಿದ್ದರೇ! ಎಂತಹಾ ದುರಾದೃಷ್ಟದವನು ನಾನು. ಆ ಒಂದು ಲಕ್ಷ ಸಿಕ್ಕಿದ್ದರೆ ಈ ಸಂಕಟದಿಂದ ವಿಮುಕ್ತಿ ಲಭಿಸುತ್ತಿತ್ತು.

**ಜಂಗಲೀ –** ಬೇಡ, ಬೇಡ. ರಾಮ, ರಾಮ, ಶಿವ ಶಿವಾ ಆ ರಾಜನನ್ನು ರಕ್ಷಿಸು, ಮುಂದೆ ಅವರೇ ನಮ್ಮ ರಾಜನಾಗಿರಲಿ.

ಈ ಇಬ್ಬರ ಮಾತುಕತೆಯನ್ನು ಕೇಳಿಸಿಕೊಂಡ ರಾಜ ರಾಮಸಿಂಹನು ಆ ಗುಹೆಯಿಂದ ಹೊರಬಂದು ಮರ ಕಡಿಯುತ್ತಿದ್ದ ಇಬ್ಬರ ಬಳಿ ಸಾರಿ ಅವರಿಗೆ “ನನ್ನನ್ನು ಕರೆದೊಯ್ಯಿರಿ” ಎಂದ.

ತಮ್ಮೆದುರಿನಲ್ಲಿ ನಿಂತ ರಾಜನನ್ನು ಕಂಡು ಆಶ್ಚರ್ಯಚಕಿತರಾದರು

**ಜಂಗಲೀ** - ಇಲ್ಲ ಪ್ರಭು. ಈತ ಹುಚ್ಚ. ಇವನ ಮಾತಿಗೆ ಕಿವಿ ಕೊಡಬೇಡಿ.

**ರಾಜ** – ಒಂದು ವೇಳೆ ನನ್ನ ಪ್ರಾಣದಿಂದ ಪರರಿಗೆ ಒಳ್ಳೆಯದಾಗುವುದಾದರೆ ಏನು ಹಾನಿ? ಪರರ ಉಪಕಾರಕ್ಕಿಂತ ಉತ್ತಮವಾದುದೇನಿದೇ? ಹಾಗಾಗಿ ನನ್ನನ್ನು ಕರೆದೊಯ್ಯಿರಿ.

ಮಂಗಲೀ ದುರುಗುಟ್ಟಿಕೊಂಡು ರಾಜನನ್ನು ನೋಡತೊಡಗಿದ.

**ಜಂಗಲಿ** – ನಾವು ನಮ್ಮ ಪ್ರಾಣವನ್ನು ಕೊಟ್ಟಾದರೂ ಸಹ ನಿಮ್ಮನ್ನು ರಕ್ಷಿಸುತ್ತೇವೆ.

**ರಾಜ** – ಒಳ್ಳೆಯದು, ನಾನೇ ಶ್ಯಾಮಸಿಂಹನ ಬಳಿಗೆ ತೆರಳಿ ನೀವಿಬ್ಬರೂ ನನ್ನನ್ನು ಕೂಡಿ ಹಾಕಿದ್ದರೆಂದು ಹೇಳುವೆ.

ಜಂಗಲಿ (ನಗುತ್ತಾ) ಈ ಕೆಲಸವನ್ನು ನೀವು ಮಾಡಲು ಸಾಧ್ಯವೇ ಇಲ್ಲ. ಯಾರು, ಬೇರೆಯವರ ಹಿತರಕ್ಷಣೆಗಾಗಿ ನಿರಂತರ ಶ್ರಮಿಸುತ್ತಾರೋ ಅವರು ಅಹಿತಕಾರಿ ಹೇಗಾಗುತ್ತಾರೆ?

ಹೀಗಿರುವಾಗ ಅಲ್ಲಿಗೆ ನಾಲ್ಕು ಜನ ಬಂದು ರಾಜನನ್ನು ಪತ್ತೆ ಹಿಡಿದು ತಮ್ಮ ಸಂಗಡ ಶ್ಯಾಮಸಿಂಹನಲ್ಲಿಗೆ ಕರೆದೊಯ್ದರು.

ಜಂಗಲೀ ಅಳುತ್ತಾ ರಾಜನನ್ನು ಹಿಂಬಾಲಿಸಿದ. ಮಂಗಲೀ ತನ್ನ ದೌರ್ಭಾಗ್ಯವನ್ನು ಬಯ್ಯುತ್ತಾ ಒಡೆದ ಕಟ್ಟಿಗೆಯೊಂದಿಗೆ ಮನೆಗೆ ತೆರಳಿದ. ಶ್ಯಾಮಸಿಂಹ - ಭೇಷ್! ಒಳ್ಳೆ ಕೆಲಸವನ್ನು ಮಾಡಿದವರಾರು !

ನಾಲ್ವರು ನಾವೇ ಹಿಡಿದೆವೆಂದು ಹೇಳಿದರು.

**ಶ್ಯಾಮಸಿಂಹ -** ನಿಜವಾಗಿ ಹೇಳಿ. ನಿಮ್ಮ ನಾಲ್ವರಲ್ಲಿ ಈತನನ್ನು ಹಿಡಿದವರಾರು?

ನಾಲ್ವರೂ - ನಾವೇ ಸ್ವಾಮಿ

**ರಾಮಸಿಂಹ** - ವಾಸ್ತವವಾಗಿ ನಿಮಗೆ ನನ್ನನ್ನು ಹಿಡಿದವರಾರೆಂದು ಅರಿಯುವ ಕುತೂಹಲವಿದೆಯೇ?

**ಶ್ಯಾಮಸಿಂಹ** - ಅಹುದು

**ರಾಮಸಿಂಹ** - ಹಾಗಾದರೆ ಕೇಳಿ ಈ ನಾಲ್ವರಲ್ಲಿ ಯಾರೂ ನನ್ನನ್ನು ಹಿಡಿಯಲಿಲ್ಲ.

**ಶ್ಯಾಮಸಿಂಹ** - ಮತ್ತೆ ನಿಮ್ಮನ್ನು ಹಿಡಿದವರಾರು?

**ರಾಮಸಿಂಹ** - ದರಬಾರದ ಮೂಲೆಯಲ್ಲಿ ಕೊಡಲೀ ಹಿಡಿದು ನಿಂತಿದ್ದವನನ್ನು ತೋರಿಸುತ್ತಾ - ಅವನೇ ಹಿಡಿದವ. ನಿಮ್ಮ ಒಂದು ಲಕ್ಷದ ಪುರಸ್ಕಾರಕ್ಕೆ ಅರ್ಹನು. ಅವನಿಗೆ ಕೊಡಿ.

ಶ್ಯಾಮಸಿಂಹ ಆ ಮರಕಟುಕನನ್ನು ಬಳಿಗೆ ಕರೆದು

ವಿಸ್ತಾರವಾಗಿ ವಿಷಯವನ್ನು ಹೇಳೆಂದು ಕೇಳಿಕೊಳ್ಳಲು ಅವನು ತನ್ನ ಮತ್ತು ತಮ್ಮ ನಡುವೆಯಾದ ಸಮಾಚಾರ - ರಾಜ ದರ್ಶನ ಕೊಟ್ಟಿದ್ದು ಈ ಎಲ್ಲಾ ವಿಚಾರವನ್ನು ವಿಸ್ತೃತವಾಗಿ ನಿರೂಪಿಸಿದ.

ಇದನ್ನು ಕೇಳಿದ ಶ್ಯಾಮಸಿಂಹನು ತನ್ನ ಸೇವಕರ ಕಡೆ ನೋಡಿ ಈ ನಾಲ್ವರಿಗೂ ೫೦ - ೬೦ ಸಲ ಚಪ್ಪಲಿ ಸೇವೆ ಮಾಡಿ, ಆಸ್ಥಾನದಿಂದ ಹೊರಗಟ್ಟಿ ಎಂದು ಆಜ್ಞಾಪಿಸಿದ.

ತಕ್ಷಣವೇ ಸೈನಿಕರು ರಾಜಾಜ್ಞೆಯನ್ನು ಪಾಲಿಸಿದರು. ರಾಜನು ಆ ಮರ ಕಡಿಯುವವನಿಗೆ ಒಂದು ಲಕ್ಷ ಮುದ್ರೆಯನ್ನಿಟ್ಟು ಬೀಳ್ಕೊಟ್ಟನು. ನಂತರ ಸಿಂಹಾಸನದಿಂದ ಕೆಳಗಿಳಿದು ರಾಮಸಿಂಹನನ್ನು ಆಲಂಗಿಸುತ್ತಾ "ನಾನು ಹೇಗೆ ಕೇಳಿದ್ದೇನೋ ಅದೇ ರೀತಿಯಲ್ಲಿದ್ದೀರಿ. ಪರೋಪಕಾರಕ್ಕಾಗಿ ನಿಮ್ಮ ಜೀವವನ್ನೇ ಪಣವಾಗಿಟ್ಟಿರಿ. ನಾನು ಏಳು ಜನ್ಮವೆತ್ತಿದರೂ ನಿಮ್ಮ ಚರಣಧೂಳಿಗಳಿಗೂ ಸಮನಾಗುವುದಿಲ್ಲ. ನಿಮ್ಮ ರಾಜ್ಯ ಸಿಂಹಾಸನ ಸುರಕ್ಷಾಭಾರವು ನಿಮ್ಮದೇ - ನಿಮ್ಮನ್ನು ಪರೀಕ್ಷಿಸಿದ್ದಕ್ಕೆ ನನ್ನನ್ನು ಮನ್ನಿಸಿರಿ ಎಂದು ಕೇಳಿಕೊಂಡನು. ನಂತರ ಮೂರು ದಿನಗಳು ಅಲ್ಲಿದ್ದು ರಾಜನ ಆತಿಥ್ಯವನ್ನು ಸ್ವೀಕರಿಸಿ ಸೈನ್ಯದೊಡನೆ ತನ್ನ ರಾಜ್ಯಕ್ಕೆ ತೆರಳಿದನು.

## ಪುಷ್ಪ - 2

ಒಮ್ಮೆ ಕಾಶೀನರೇಶನಾದ ನಾರಾಯಣಸಿಂಹನು ಅಯೋಧ್ಯಾ ರಾಜನಾದ ಚಂದ್ರಸೇನನ ಮೇಲೆ ವಿನಾಕಾರಣ ಆಕ್ರಮಣವನ್ನು ಮಾಡಿದ. ರಾಜ್ಯವಿಸ್ತಾರ ಒಂದೇ ಅವನ ಮನದಲ್ಲಿದ್ದುದು. ರಾಜಾ ಚಂದ್ರಸೇನ

ಅಹಿಂಸಾಪೂಜಾರಿಯಾಗಿದ್ದ. ಅವನು ತನ್ನ ಮನದಲ್ಲೇ ಯುದ್ಧದ ಬಗ್ಗೆ ಚಿಂತಿಸುತ್ತಾ, ಯುದ್ಧವೆಂದರೆ ಸಾವಿರಾರು ಮಂದಿ ತಮ್ಮ ಪ್ರಾಣ ತೊರೆಯುವುದರಲ್ಲಿ ಸಂದೇಹವಿಲ್ಲ. ಹಾಗಾಗಿ ಈ ಯುದ್ಧದ ವಿಚಾರವನ್ನು ತ್ಯಜಿಸಿದ, ತನ್ನ ರಾಜ್ಯವನ್ನು ತ್ಯಜಿಸುವುದಲ್ಲದೇ ಸನ್ಯಾಸಿ ರೂಪವನ್ನು ಧರಿಸಿ, ತನ್ನ ಪತ್ನಿಯ ಸಂಗಡ ಕಾಶಿಗೆ ಹೋಗಿ ಒಬ್ಬ ಕುಂಬಾರನ ಮನೆಯಲ್ಲಿರತೊಡಗಿದನು. ರಾಜ ಪತ್ನಿಯೂ ಸಹ ಸಂಕಟದ ಸಮಯ ತನ್ನ ಪತಿಯನ್ನು ತ್ಯಜಿಸಿ ತಂದೆಯ ಮನೆಗೆ ಹೋಗದೆ ಪತಿಮಾರ್ಗವನ್ನು ಅನುಸರಿಸಿದಳು. ಆಗವಳು ಗರ್ಭಿಣಿಯಾಗಿದ್ದಳು. ಪೂರ್ಣ ಸಮಯದ ನಂತರ ಸುಂದರ ಪುತ್ರಕ್ಕೆ ಜನ್ಮವನ್ನು ನೀಡಿದಳು. ರಾಜನು ಆ ಶಿಶುವಿಗೆ "ಸೂರ್ಯಸೇನ" ಎಂದು ನಾಮಕರಣ ಮಾಡಿದ.

ಸೂರ್ಯಸೇನನು ಹತ್ತು ವಯಸ್ಸಿದವನಾದಾಗ ಅವನ ಉಚ್ಚ ಶಿಕ್ಷೆಗಾಗಿ ಹರಿದ್ವಾರದ ಗುರುಕುಲಕ್ಕೆ ಕಳುಹಿಸಿದನು.

ಒಂದು ಸಲ ಕಾಶೀರಾಜನಿಗೆ ಅಯೋಧ್ಯಾ ರಾಜನಾದ ಚಂದ್ರಸೇನನು ತನ್ನ ಪತ್ನಿಯ ಸಂಗಡ ಕಾಶಿಯಲ್ಲೇ ಒಬ್ಬ ಕುಂಬಾರನ ಸಂಗಡ ಉಳಿದುಕೊಂಡಿರುವ ವಿಚಾರ ತಿಳಿದು ಅತ್ಯಂತ ಕೋಪಗೊಂಡು ಅವರಿಬ್ಬರನ್ನೂ ಬಂಧಿಸಿ ಗಲ್ಲು ಶಿಕ್ಷೆಯನ್ನು ವಿಧಿಸಿದನು.

ಈ ಸಮಾಚಾರವನ್ನರಿತ ಸೂರ್ಯಸೇನನು ಹರಿದ್ವಾರದಿಂದ ಬಂದು ತಂದೆ-ತಾಯಿಯವರನ್ನು ಭೇಟಿ ಮಾಡಲು ಕಾರಾಗೃಹಕ್ಕೆ ತೆರಳಿದನು. ಬಂದಿಯಾಗಿದ್ದ ರಾಜನು ತನ್ನ ಮಗನನ್ನು ಕಂಡು ಅವನಿಗೆ ಕೆಲವು ಉಪದೇಶವನ್ನು ನೀಡಿದನು.

1. ಯಾವುದನ್ನೂ ಅಧಿಕವಾಗಿ ನೋಡಬೇಡ ಮತ್ತು ಕಡಿಮೆ ಎಂದೂ ನೋಡಬೇಡ.

2. ಹಿಂಸೆ ಎಂದಿಗೂ ಪ್ರತಿಹಿಂಸೆಯಿಂದ ಶಮನವಾಗುವುದಿಲ್ಲ.

3. ಯುದ್ಧವನ್ನು ಯುದ್ಧದ ಮೂಲಕ ನಿಲ್ಲಿಸಲಾಗದು.

4. ಶತ್ರುತೆಯನ್ನು ಶತ್ರುತೆ ನಿವಾರಣೆ ಮಾಡಲಾಗದು.

5. ಹಿಂಸೆ ಶತ್ರುತೆ - ಯುದ್ಧವು ಪ್ರೀತಿ ಮಾತ್ರದಿಂದ ನಿವಾರಿಸಲ್ಪಡುತ್ತದೆ.

ಈ ಉಪದೇಶ ಕೇಳಿದ ನಂತರ ಸೂರ್ಯಸೇನ ವಾಪಸ್ಸು ಹಿಂತಿರುಗಿದ ಕೆಲ ಸಮಯದ ನಂತರ ಪತ್ನಿ ಸಹಿತ ಅಯೋಧ್ಯಾ ನರೇಶನಿಗೆ ಮೃತ್ಯುದಂಡ ವಿಧಿಸಲಾಯಿತು. ಆಗ ರಾಜಕುಮಾರ ಸೂರ್ಯಸೇನನು ಯೋಚಿಸಿ ಕಾಶಿ ನರೇಶನ ಗಜಲಾಯದಲ್ಲಿ ನೌಕರಿಯನ್ನು ಪಡೆದುಕೊಂಡ.

ಕಾಶಿನರೇಶನಿಗೆ ಈವರೆವಿಗೂ ಅರಿವಿರಲಿಲ್ಲ ಅಯೋಧ್ಯರಾಜನಿಗೆ ಒಂದು ಮಗುವೂ ಇತ್ತೆಂದು. ಸೂರ್ಯಸೇನನಿಗೆ ಕೊಳಲನ್ನೂದುವ ಬಗ್ಗೆ ಹೆಚ್ಚು ಅಭಿರುಚಿ ಇತ್ತು. ಪ್ರತಿದಿನ ಬೆಳಿಗ್ಗೆ 04 ರ ಹೊತ್ತಿಗೆ ಈತ ಮಧುರವಾಗಿ ಕೊಳಲನ್ನು ನುಡಿಸುತ್ತಿದ್ದ. ಒಂದು ದಿನ ಈ ಮಧುರ ಮುರುಳೀ ಗಾನವು ಕಾಶೀನರೇಶನ ಕಿವಿಗೂ ಬಿತ್ತು.

ಬೆಳಿಗ್ಗೆ ಗಜಪಾಲಕನನ್ನು ಕರೆದು ನಿನ್ನ ಮನೆಯಲ್ಲಿ ವೇಣು ನುಡಿಸುವವರಾರೆಂದು ಕೇಳಿದನು. ಅದಕ್ಕುತ್ತರವಾಗಿ ಆತ - ಓರ್ವ ಅನಾಥ ಬಾಲಕನನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದೇನೆ. ಆನೆಗಳಿಗೆ ನೀರು ಕುಡಿಸುವ ಕೆಲಸ. ಅವನೇ ಬೆಳಿಗ್ಗೆ ಕೊಳಲನ್ನು ನುಡಿಸುತ್ತಾನೆಂದು ಉತ್ತರಿಸಿದನು.

ಕಾಶೀ ನರೇಶನು ಆ ಬಾಲಕನನ್ನು ತನ್ನ ಅಂಗರಕ್ಷಕನನ್ನಾಗಿ ನಿಯಮಿಸಿಕೊಂಡ. ಒಂದು ದಿನ ಭೇಟೆಯಾಡಲು ಕಾಡಿಗೆ ಹೋಗಿ ಭೇಟೆಯನ್ನಾಡಿದ. ದಟ್ಟವಾದ ಗಹನವನದಲ್ಲಿ ರಾಜ ಏಕಾಕಿಯಾದ. ಅನುಚರರಾರು ಕಂಡುಬರಲಿಲ್ಲ. ಕುದುರೆ ಮೇಲೆ ರಾಜ ಮತ್ತು ಅವನ ಜೊತೆಗಿದ್ದ ಅಂಗರಕ್ಷಕ ಸೂರ್ಯಸೇನ ಇಬ್ಬರೇ. ಆಯಾಸಗೊಂಡಿದ್ದ ರಾಜನು ತನ್ನ ಅಂಗರಕ್ಷಕನ ಸಂಗಡ ಒಂದು ನಿಬಿಡವಾದ ಮರದ ನೆರಳಲ್ಲಿ ಕುಳಿತನು.

ಬಿಸಿಲಯಾಳದ ಕಾರಣ ರಾಜನಿಗೆ ಮಲಗುವ ಇಚ್ಛೆಯಾಗಿ ಸೂರ್ಯಸೇನನ ತೊಡೆಗಳ ಮೇಲೆ ಸ್ವಲ್ಪ ಕಾಲ ನಿದ್ರಿಸಿದ.

ಆಗ ಸೂರ್ಯಸೇನ ತನ್ನ ತಂದೆ-ತಾಯಿಯರನ್ನು ಸಾಯಿಸಿದ ಈ ಪಾಪಿಗೆ ತಕ್ಕ ಶಿಕ್ಷೆ ವಿಧಿಸಲು ಇದೆ ಸಕಾಲವು. ಅವನ ಮನದಲ್ಲಿ ಪ್ರತಿಶೋಧದ ಜ್ವಾಲಾಮುಖೀ ಪ್ರಕಟವಾಗಿ ಆ ರಾಜನನ್ನು ಸಂಹರಿಸಲು ತನ್ನ ಕತ್ತಿಯನ್ನೆತ್ತಿದ. ಆಗ ತಂದೆಯ ಉಪದೇಶ ನೆನಪಾಯಿತು. ಹಿಂಸೆಯನ್ನು ಯಾವಾಗಲೂ ಹಿಂಸೆಯಿಂದ ಜಯಿಸಲಾಗದು - ಎಂದು ತಂದೆಯ ಉಪದೇಶವನ್ನು ಮೀರಲಾರದೆ ಎತ್ತಿದ್ದ ಕತ್ತಿಯನ್ನು ಪುನಃ ಕೆಳಗಿಳಿಸಿದ.

ಅದೇ ಸಮಯದಲ್ಲಿ ರಾಜನು ನಿದ್ರೆಯಿಂದ ಎಚ್ಚೆತ್ತು ತನ್ನ ಪಕ್ಕದಲ್ಲಿದ್ದ ಸೂರ್ಯಸೇನನನ್ನು ಕುರಿತು ಮಗು ನಾನೊಂದು ದುಸ್ವಪ್ನವನ್ನು ಕಂಡೆ. ನೀನು ನನ್ನ ತಲೆಯನ್ನು ಕಡಿಯಲು ಕತ್ತಿ ಎತ್ತಿದ ಹಾಗೆ.

**ಸೂರ್ಯಸೇನ** - ಅದು ವಾಸ್ತವವೇ ಮಹಾರಾಜರೇ! ನಿಮ್ಮ ತಲೆಯನ್ನು ಕತ್ತರಿಸಲು ನಾನೇ ಕತ್ತಿಯನ್ನು ಎತ್ತಿದ್ದೆ. ನಿಮ್ಮ ಸ್ವಪ್ನ ಮಿಥ್ಯೆಯಲ್ಲ. ನಾನು ಅಯೋಧ್ಯಾ ನರೇಶನ ಪುತ್ರ ಸೂರ್ಯಸೇನ. ನೀವು ನಿರಪರಾಧಿಯಾಗಿದ್ದ ಸಂತರಂತಿದ್ದ ತಂದೆ-ತಾಯಿಯರನ್ನು ಗಲ್ಲಿಗೇರಿಸಿದಿರಿ. ಇಂದು ನಾನು ಅದಕ್ಕೆ ಪ್ರತ್ಯುತ್ತರದ ರೂಪದಲ್ಲಿ ನಿಮ್ಮನ್ನು ಬಲಿಕೊಡುವವನಿದ್ದೆ. ನೀವು ನಿಮ್ಮ ಕತ್ತಿಯನ್ನು ಹಿಡಿಯುವಷ್ಟರಲ್ಲಿ ನಿಮ್ಮ ಪ್ರಾಣ ಉಳಿಯದಂತೆ ಮಾಡುವೆ. ನಿಮ್ಮ ಅತ್ಯಾಚಾರಕ್ಕೆ ನಿಮ್ಮ ಬಲಿಯೇ ತಕ್ಕ ಶಾಸ್ತಿಯಾಗಲಿದೆ. ಕಾಶಿನರೇಶ ಎರಡೂ ಕೈಗಳನ್ನು ಜೋಡಿಸುತ್ತಾ ಮಗೂ ನನ್ನನ್ನು ಕ್ಷಮಿಸು. ನಿನ್ನಲ್ಲಿ ಪ್ರಾಣದ ಭಿಕ್ಷೆ ಬೇಡುತ್ತಿರುವೆ. ನಿನ್ನಲ್ಲಿ ಶರಣಾಗಿದ್ದೇನೆ.

**ಸೂರ್ಯಸೇನ** - ಈಗ ನಿಮ್ಮನ್ನು ಜೀವಂತ ಬಿಟ್ಟರೆ ನನ್ನನ್ನೇ ಸಾಯಿಸಲೂ ಹೇಸುವವರಲ್ಲ.

**ರಾಜ -** ಇಲ್ಲ ಮಗೂ ! ಕಾಶೀ ವಿಶ್ವನಾಥನ ಮೇಲೆ ಆಣೆ ಇಟ್ಟು ಹೇಳುತ್ತಿದ್ದೇನೆ ನಿನಗೆ ಯಾವ ಪ್ರಕಾರದ ಶಿಕ್ಷೆಯನ್ನು ನೀಡಲಾರೆ.

ತರುವಾಯ ಇಬ್ಬರೂ ಕೈಮೇಲೆ ಕೈ ಇಟ್ಟು ಶಪಥವನ್ನು ಮಾಡಿದರು.

**ಸೂರ್ಯಸೇನ** - ಸಾಯುವ ಸಮಯದಲ್ಲಿ ನನ್ನ ತಂದೆ ಕೊಟ್ಟ ಉಪದೇಶದಿಂದಲೇ ನೀವಿಂದು ಬದುಕುಳಿದಿರಿ.

**ರಾಜ** - ಯಾವ ಉಪದೇಶ?

**ಸೂರ್ಯ** - ಅಧಿಕವಾಗಿ ನೋಡುವುದಲ್ಲ.  ಕಡಿಮೆಯಾಗು ಅಲ್ಲ. ಹಿಂಸೆಯನ್ನು ಹಿಂಸೆಯಿಂದ ಜಯಿಸಲಸಾಧ್ಯ.

**ರಾಜ -** ಈ ಉಪದೇಶದ ಅರ್ಥವೇನು?

**ಸೂರ್ಯ -** ಅಧಿಕವಾಗಿ ನೋಡುವುದರ ಅರ್ಥ ಹಿಂಸೆಯನ್ನು ಅಧಿಕ ಸಮಯ ಮನದಲ್ಲಿಡಬಾರದೆಂದು ಕಡಿಮೆ ನೋಡಬಾರದೆಂದರೆ ತನ್ನ ಬಂಧು ಅಥವಾ ವಿಚಿತ್ರವರ್ಗದಿಂದ ಸ್ವಲ್ಪ ಅನ್ಯಾಯವಾಗಿದ್ದರು ಸಹ ಸಂಬಂಧವನ್ನು ನಿಭಾಯಿಸುತ್ತಿರುವುದು. ಹಿಂಸೆಯನ್ನು ಹಿಂಸೆಯಿಂದ ಸೋಲಿಸುವುದು ಅಸಂಭವ.  ಇದಕ್ಕೆ ನೀವೇ ಪ್ರತ್ಯಕ್ಷದರ್ಶಿಗಳು. ಒಂದು ವೇಳೆ ನಿಮ್ಮನ್ನು ನಾನು ಸಾಯಿಸಿದ್ದರೆ ನಿಮ್ಮ ಪಕ್ಷದವರು ನನ್ನನ್ನು ಬಿಡುತ್ತಿರಲಿಲ್ಲ.  ಇಂದು ನನ್ನ ತಂದೆಯವರ ಉಪದೇಶವೇ ನಮ್ಮಿಬ್ಬರ ಪ್ರಾಣವನ್ನು ರಕ್ಷಿಸಿದೆ.

ತಂದೆಯವರ ಈ ಸಿದ್ಧಾಂತವು ಎಷ್ಟು ಸತ್ಯನಿಷ್ಠವಾದುದು. ನಾವಿಬ್ಬರು ಪರಸ್ಪರ ಇಂದು ಜೀವಂತವಾಗಿದ್ದೇವೆಂದರೆ ಇದು ಅತ್ಯಂತ ಮಹತ್ತ್ವಪೂರ್ಣವೇ ರಾಜ - ಮಗೂ! ನೀನು ನನ್ನ ಪಾಪಗಳನ್ನು ತೊಳೆದಿದ್ದೀಯ ಪುಣ್ಯದ ರವಿಕಿರಣವು ನನ್ನಲ್ಲಿ ಪ್ರವೇಶಿಸುವಂತೆ ಮಾಡಿರುವೆ ಎಂದು ಸೂರ್ಯಸೇನನನ್ನು ತನ್ನ ಎದೆಗೆ ಅಪ್ಪಿಕೊಂಡ.  ರಾಜಧಾನಿ ಪ್ರವೇಶಿಸಿದ ಕಾಶೀ ನರೇಶನು

ಅಯೋಧ್ಯೆಯ ರಾಜಸಿಂಹಾಸನವನ್ನು ಸೂರ್ಯಸೇನನಿಗೆ ಹಿಂತಿರುಗಿಸಿದಷ್ಟೇ ಅಲ್ಲದೇ ತನ್ನ ಮಗಳ ಸಂಗಡ ವಿವಾಹವನ್ನು ಮಾಡಿಸಿದ.

## ಪುಷ್ಪ -03

ಭೂತನಾಥ ಮಹಾದೇವನಾದ ವಿಶ್ವನಾಥನ ನಗರಿಯಾದ ವಾರಾಣಸಿಯಲ್ಲಿ ಗಂಗಾಶರಣ ನಾಮಕ ಶ್ರೇಷ್ಠಿಯು ನಿವಾಸ ಮಾಡುತ್ತಿದ್ದ. ದೇವಾಧಿದೇವನಾದ ವಿಶ್ವನಾಥನ ಪರಮಭಕ್ತನಾದ ಈತ ಸದಾಚಾರಿಯೂ ಶುಭಚಿಂತನೆಯುಳ್ಳವನೂ ಆಗಿದ್ದ ಮತ್ತು ವಸ್ತ್ರಗಳ ವ್ಯಾಪಾರಿಯೂ ಆಗಿದ್ದ.

ಒಮ್ಮೆ ಸೋಮವತೀ ಅಮಾವಾಸ್ಯೆಯ ಪ್ರಾತಃ ಕಾಲವಾಗಿತ್ತು. ಮಣಿಕರ್ಣಿಕಾ ಘಾಟ್‌ನಲ್ಲಿ ಅನೇಕ ನರ-ನಾರಿಯರೂ ಸಾಧು ಸಜ್ಜನರೂ ಸ್ನಾನ ಮಾಡುತ್ತಿದ್ದರೆ "ಜಯ-ಜಯ ಗಂಗೆ" ಎಂಬ ಘೋಷವು ಅಲ್ಲೆಲ್ಲಾ ಗುಂಜಿಸುತ್ತಿತ್ತು. ಭಕ್ತ ಗಂಗಾಶರಣರು ಸ್ನಾನ ಮಾಡುತ್ತಿದ್ದರು. ಆಗ ಅಕಸ್ಮಾತ್ ಆಗಿ ಒಬ್ಬ ಮನುಷ್ಯ ಮೇಲಿಂದ ಹಾರಿ ಗಂಗೆಯಲ್ಲಿ ಬಿದ್ದರು. ಅಷ್ಟೆಲ್ಲಾ ಜನರಿದ್ದರೂ, ಯಾರೂ ಆ ಮನುಷ್ಯನನ್ನು ರಕ್ಷಿಸಲು ಮುಂದಾಗಲಿಲ್ಲ. ಯಾಕೆಂದರೆ ಸಾಯುವ ಮನುಷ್ಯನು ತನ್ನ ರಕ್ಷಣೆಗೆ ಯಾರೇ ಬಂದರೂ ಅವರನ್ನು ಇಷ್ಟು ಘಟ್ಟಿಯಾಗಿ ಹಿಡಿದುಕೊಳ್ಳುತ್ತಿದ್ದ ರಕ್ಷಕ ಹೊರಬಾರದಂತೆ, ಇದರಿಂದ ಇಬ್ಬರೂ ಸಾಯುವ ಸಂದರ್ಭವಿತ್ತು. ಇದೇ ಕಾರಣಕ್ಕೆ ಯಾರೂ ಮುಳುಗೇಳುತ್ತಿರುವ ಆ ಮನುಷ್ಯನನ್ನು ಬದುಕಿಸುವ ಯತ್ನವನ್ನು ಮಾಡಲಿಲ್ಲ.

ಆದರೆ ಗಂಗಾಶರಣರಿಗೆ ಈ ದೃಶ್ಯ ನೋಡಲಾಗಲಿಲ್ಲ. ಕರುಣೆಯಿಂದ ಕಾಡಿದ ಅವರೂ ಉತ್ತಮ ಈಜುಗಾರರು ಆಗಿದ್ದರು. ಅವಿಲಂಬವಾಗಿ ಗಂಗಾಶರಣರು ಆ ಮನುಷ್ಯನನ್ನು ಹಿಡಿದು ಎಳೆದುಕೊಂಡು ಮರಳ ಮೇಲೆ ಮಲಗಿಸಿದರು.

ಆ ಮರಳ ಮೇಲೆ ಮಲಗಿದ ಆ ಮನುಷ್ಯನ ಮುಖವನ್ನು ಕಂಡ ಶ್ರೇಷ್ಠಿ ಆಶ್ಚರ್ಯಚಕಿತನಾದನು. ಆ ಮನುಷ್ಯ ಬೇರಾರೂ ಆಗಿರದೆ ತಮ್ಮ ಸ್ವಂತ ಕಾರ್ಯದರ್ಶಿಯಾಗಿದ್ದ ನಂದಲಾಲನಾಗಿದ್ದ. ಹೊಟ್ಟೆಯಿಂದ ನೀರನ್ನು ತೆಗೆದ ನಂತರ ಮೂರ್ಛಿತನಾಗಿದ್ದ ನಂದಲಾಲ ಸ್ವಸ್ಥನಾದ ತರುವಾಯ.

**ಗಂಗಾ** - ಅರೆ! ನಂದಲಾಲ್! ನಿಮ್ಮನ್ನು ಗಂಗೆಯಲ್ಲಿ ತಳ್ಳಿದವರಾರು?

**ನಂದ** - ಯಾರು ಇಲ್ಲ

**ಗಂಗಾ** - ಏನು ಯಾರಾದರ ಒತ್ತಡಕ್ಕೆ ಸಿಲುಕಿ ಗಂಗೆಯಲ್ಲಿ ಬಿದ್ದಿರಾ?

**ನಂದ** - ಇಲ್ಲವಲ್ಲ

**ಗಂಗಾ** - ಮತ್ತೇನು ವಿಷಯವಿತ್ತು?

**ನಂದ** - ನಾನು ಸ್ವತಃ ಆತ್ಮಹತ್ಯೆ ಮಾಡಿಕೊಳ್ಳಲು ಬಯಸಿದ್ದೆ.

**ಗಂಗಾ -** ಯಾವ ಕಾರಣಕ್ಕಾಗಿ?

**ನಂದ** - ನಾನು ಜೂಜಾಟದಲ್ಲಿ ನಿಮ್ಮ ಐದು ಸಾವಿರ ರೂಪಾಯಿಯನ್ನು ಕಳೆದುಕೊಂಡೆ. ನಂತರ ಚಿಂತಿಸಿದೆ. ನಿಮಗೆ ಈ ವಿಚಾರ ಗೊತ್ತಾಗಿ ಅಪರಾಧಿಯಾದ ನನ್ನನ್ನು ದಂಡಿಸುವುದಷ್ಟೇ ಅಲ್ಲದೆ ಕಾರಾಗೃಹದಲ್ಲೂ ಇರಿಸಬಹುದು - ಈ ಅಪಖ್ಯಾತಿಯಿಂದ ಉಳಿಯಲು ಈ ಮಾರ್ಗವನ್ನು ಆಶ್ರಯಿಸಿದೆ.

**ಗಂಗಾ** - ನೀನೊಂದು ಶಪಥವನ್ನು ಮಾಡಿದರೆ ನಾನು ನಿನ್ನನ್ನು ಕ್ಷಮಿಸುತ್ತೇನೆ.

**ನಂದ** - ಶಪಥವೇನು ?

**ಗಂಗಾ** - ಇಂದಿನಿಂದ ನೀನು ಯಾವುದೇ ವಿಧವಾದ ಜೂಜಾಟವನ್ನು ಆಡುವುದಿಲ್ಲ ಎಂದು ಶಪಥವನ್ನು ಮಾಡು.

**ನಂದ** - ನಾನು ಮಹಾದೇವನಾದ ವಿಶ್ವನಾಥನ ಮೇಲಾಣೆ ಇಟ್ಟು ಹೇಳುವೆ, ಇನ್ನು ಮುಂದೆ ನಾನು ಯಾವುದೇ ಪ್ರಕಾರದ ಜೂಜಾಟವಾಡುವುದಿಲ್ಲ.

**ಗಂಗಾ** – ಹೋಗು, ನಿನ್ನನ್ನು ಕ್ಷಮಿಸಿದ್ದೇನೆ. ಆ ಐದು ಸಾವಿರವನ್ನು ನನ್ನ ಮನೆ ಖರ್ಚಿಗೆ ಹಾಕು.

**ನಂದ** - ಆದರೆ ಇನ್ನು ಮುಂದೆ ನನ್ನನ್ನು ಕಾರ್ಯದರ್ಶಿ ಸ್ಥಾನದಲ್ಲಿ ಇರಿಸಿಕೊಳ್ಳುವುದಿಲ್ಲ ಅಲ್ಲವೇ ?

**ಗಂಗಾ** - ಯಾಕೆ ತೆಗೆದು ಹಾಕುತ್ತೇನೆ? ತಪ್ಪು ಮಾಡುವುದು ಮನುಷ್ಯನ ಸ್ವಾಭಾವಿಕ ಗುಣವಷ್ಟೇ ! ಹೋಗು ! ನೀನಂತೂ ಯುವಕ. ದುರಾಸೆಗೊಳಪಟ್ಟು ಕೆಟ್ಟ ಕೆಲಸವನ್ನು ಮಾಡಿದೆಯಷ್ಟೆ ಹೋಗು ! ನೀನು ನನ್ನ ಚಿಕ್ಕ ತಮ್ಮನಿದ್ದಂತೆ ಚಿಂತಿಸಬೇಡ. ಯಥಾವತ್ ನಿನ್ನ ಕೆಲಸವನ್ನು ಮುಂದುವರೆಸು.

ಈ ಘಟನೆ ನಡೆದ ಕೆಲ ಸಮಯದ ನಂತರದ ಘಟನೆ ಇದು. ಆ ಶ್ರೇಷ್ಠಿಗೆ ಬಟ್ಟೆ ವ್ಯಾಪಾರದಲ್ಲಿ ಒಂದು ಲಕ್ಷ ರೂಗಳಷ್ಟು ಲಾಭ ಪ್ರಾಪ್ತವಾಯಿತು. ಕಾರ್ಯದರ್ಶಿ ನಂದಲಾಲನು ಮತ್ತೊಮ್ಮೆ ದುರಾಶಾಗ್ರಸ್ತನಾದನು. ಈ ಸಲ ಯಜಮಾನನ ಪ್ರಾಣ ತೆಗೆಯಲು ಯೋಚಿಸಲಾರಂಭಿಸಿದ. ಈತ ಒಬ್ಬ ಇಲ್ಲವಾದರೆ ಆತನ ವಿಧವೆ ಪತ್ನಿ ಮಕ್ಕಳಿಗೇನು ಗೊತ್ತು ವ್ಯಾಪಾರದ ಗುಟ್ಟು. ಬುದ್ಧಿವಂತಿಕೆಯಿಂದ ಈ ಒಂದು ಲಕ್ಷ ನನಗೆ ಸೇರುವಂತೆ ಮಾಡಬೇಕು. ಯಾರಿಗೂ ಏನೂ ತಿಳಿಯುವುದಿಲ್ಲ. ನಂತರ ವ್ಯಾಪಾರದಲ್ಲಿ ಹಾನಿ ತೋರಿಸಿದರಾಯಿತು. ವ್ಯಾಪಾರದಲ್ಲಿ ಲಾಭ ಮತ್ತು ಹಾನಿ ಸ್ವಾಭಾವಿಕವೇ - ಹೀಗೆಂದು ಯೋಚಿಸಿದ ನಂದಲಾಲ ಒಂದು ಸಂಜೆ ವಿಷಮಿಶ್ರಿತ ಹಾಲನ್ನು ತಂದು ಶ್ರೇಷ್ಠಿಗೆ ಕೊಡುತ್ತಾ - ನಮ್ಮ ಮನೆ ಹಸು ಕರು ಹಾಕಿ ೫ ದಿನ ಕಳೆಯಿತು. ಹಾಗಾಗಿ ನಮ್ಮ ಸೊಸೆ - ಮೊದಲ ಹಾಲನ್ನು ಯಜಮಾನರಿಗೆ

ಅರ್ಪಿಸಿ. ತದನಂತರ ನಾವು ಸೇವಿಸೋಣ ಎಂದು ಹೇಳಿದ್ದಾಳೆಂದು ಹೇಳಿ ಗ್ಲಾಸನ್ನು ಕೊಡಲು ಹೋದ.

ಶ್ರೇಷ್ಠಿ ಅದಕ್ಕುತ್ತರವಾಗಿ - ಒಳ್ಳೆಯದು ನಂದಲಾಲ. ಟೇಬಲ್ ಮೇಲೆ ಗ್ಲಾಸನ್ನು ಇರಿಸು. ಭೋಜನವಾದ ತರುವಾಯ ನಿನ್ನ ಹಾಲನ್ನು ಸೇವಿಸುವೆನೆಂದು ಹೇಳಿದ. ಕುಟಿಲ ನಗು ಬೀರುತ್ತಾ ಆ ಗ್ಲಾಸನ್ನು ಟೇಬಲ್ ಮೇಲಿಟ್ಟು ತೆರಳಿದ ನಂದಲಾಲ.

ರಾತ್ರಿ ಭೋಜನದ ತರುವಾಯ ಶ್ರೇಷ್ಠಿ ತನ್ನ ಶಯನ ಕಕ್ಷೆಯನ್ನು ಪ್ರವೇಶಿಸಿ ಹಾಲು ಸೇವಿಸಲು ನೋಡಿದರೆ ಗ್ಲಾಸ್ ಖಾಲಿಯಾಗಿತ್ತು. ಪಕ್ಕದ ಮನೆ ಬೆಕ್ಕು ಅಂದು ಹಾಲನ್ನೆಲ್ಲಾ ಕುಡಿದು ಹೋಗಿತ್ತು. ಬೆಳಿಗ್ಗೆ ಅಕ್ಕ-ಪಕ್ಕದಿಂದ ವಿಚಾರ ತಿಳಿದು ಬಂದಿದ್ದೇನೆಂದರೆ ಪಕ್ಕದ ಮನೆ ಬೆಕ್ಕು ಸತ್ತುಹೋಗಿದೆ ಎಂದು. ಮನುಷ್ಯನ ಸಾವಾದರೆ ಹೇಗೆ ಸತ್ತ? ಯಾಕೆ ಸತ್ತ? ಎಂದು ವಿಧವಿಧವಾಗಿ ಚಿಂತಿಸುವವರು. ಬೆಕ್ಕು ಹೇಗೆ ಸತ್ತಿತೆಂದು ಯಾರು ತಲೆಕೆಡಿಸಿಕೊಳ್ಳಲಿಲ್ಲ. ಬೆಳಿಗ್ಗೆ ಅಂಗಡಿಯಲ್ಲಿ ಕುಳಿತಿದ್ದ ಯಜಮಾನನನ್ನು ಕಂಡು ನಂದಲಾಲನಿಗೆ ಆಶ್ಚರ್ಯವಾಯಿತು. ಆದರೆ ಮೌನವಾಗಿ ತನ್ನ ಕೆಲಸ ಮುಂದುವರೆಸಿದ.

ಅಂದು ರಾತ್ರಿ ಸಾಕ್ಷಾತ್ ವಿಶ್ವನಾಥನು ಶ್ರೇಷ್ಠಿಯ ಸ್ವಪ್ನದಲ್ಲಿ ಬಂದು ನೀನು ಯಾವ ದುಷ್ಟ ನಂದಲಾಲನನ್ನು ಐದು ಸಾವಿರ ರೂಪಾಯಿಗಾಗಿ ಕ್ಷಮಿಸಿದ್ದೆಯೋ ಆ ಪಾಪಿಯೇ ನಿನ್ನನ್ನು ಸಾಯಿಸಲುದ್ದೇಶಿಸಿ ವಿಷಮಿಶ್ರಿತ ಹಾಲನ್ನು ತಂದಿದ್ದ. ನನ್ನ ಪ್ರೇರಣೆಯಿಂದಾಗಿ ಬೆಕ್ಕು ಆ ಹಾಲನ್ನು ಸೇವಿಸಿ ಸತ್ತು ಹೋಯಿತು ಎಂದ. ಅದೇ ಘಳಿಗೆಯೇ ಶ್ರೇಷ್ಠಿಯು ತನ್ನ ಪರಿವಾರಕ್ಕೆ ಸ್ವಪ್ನದ ವಿಚಾರ ತಿಳಿಸಿದ. ವಿಚಾರವನ್ನರಿತ ಆಕೆಯ ಧರ್ಮಪತ್ನಿ ನೋಡಿ - ನಿಮ್ಮ ಬಗ್ಗೆ ಇಷ್ಟು ಅಶುಭಚಿಂತನೆಯುಳ್ಳ ಆ ನೌಕರನನ್ನು ಕೆಲಸದಿಂದ ತೆಗೆದು ಹಾಕಿ ಬೇರೆ ಒಳ್ಳೆಯವರನ್ನು ನಿಯುಕ್ತಿ ಮಾಡಿ ಎಂದು ಹೇಳಿದಳು.

ಆಗ ಶ್ರೇಷ್ಠಿಯು - ನನ್ನ ಶುಭಚಿಂತನೆಯ ಮೂಲಕವಾಗಿ ಆತನಲ್ಲಿರುವ ಅಶುಭ ಚಿಂತನೆಯನ್ನು ನಷ್ಟಗೊಳಿಸುವೆ ನೋಡುತ್ತಿರು.

**ಪತ್ನಿ** - ಅದು ಹೇಗೆ ಸಾಧ್ಯ?

**ಶ್ರೇಷ್ಠಿ** - ಅವನ ಬಗ್ಗೆ ನನ್ನ ಮನದಲ್ಲಿ ಶತ್ರುತೆಯನ್ನು ಇರಿಸುವುದಿಲ್ಲ. ಅದಕ್ಕೆ ಬದಲು ಪ್ರೇಮಭಾವನೆಯನ್ನು ಹೆಚ್ಚಿಸುವೆ.

**ಪತ್ನಿ** - ಇದರಿಂದೇನಾಗುತ್ತದೆ ?

**ಶ್ರೇಷ್ಠಿ**- ಯಾವಾಗ ನಾವು ಬೇರೊಬ್ಬರ ಬಗ್ಗೆ ಶತ್ರುಭಾವನೆಯರಿಸುತ್ತೇವೆಯೋ ಆ ಭಾವನೆಯು ಎದುರಿನವರ ಶತ್ರುತೆಯನ್ನು ಮತ್ತಷ್ಟು ಬೆಳೆಸುತ್ತದೆ.

**ಪತ್ನಿ**- ನನಗರ್ಥವಾಗಲಿಲ್ಲ. ಸ್ವಲ್ಪ ವಿವರಿಸಿ ಹೇಳಿ

**ಶ್ರೇಷ್ಟಿ** - ನಾನೊಂದು ಉದಾಹರಣೆ ಕೊಡುತ್ತೇನೆ. ಅದು ನಿನ್ನ ಅರಿವಿಗೆ ಬರಬಹುದು. ಕೇಳು!

ಒಮ್ಮೆ ಅಕಬರ ಸಾಮ್ರಾಟನು ತನ್ನ ಮಿತ್ರ ಮತ್ತು ಪ್ರಧಾನಮಂತ್ರಿಯಾಗಿದ್ದ ಬೀರಬಲ್ಲನ ಸಂಗಡ ನಗರದಿಂದ ಹೊರಗೆ ಸಂಚರಿಸುತ್ತಿದ್ದರು. ಎದುರಿಗೆ ಒಬ್ಬ ಕಟ್ಟಿಗೆ ಸೀಳುವ ಮನುಷ್ಯನನ್ನು ಕಂಡ. ಬೀರಬಲ್ಲನನ್ನು ಕುರಿತು - ಈತ ನನ್ನ ಬಗ್ಗೆ ಯಾವ ವಿಚಾರವನ್ನಿಟ್ಟುಕೊಂಡಿದ್ದಾನೆ ಹೇಳು ಎನ್ನಲು ಬೀರಬಲ್ಲನು. ಅವನ ಬಗ್ಗೆ ನೀವೇನು ಚಿಂತಿಸುವಿರಿ ಅದಕ್ಕೆ ಅನುರೂಪವಾಗಿರುತ್ತದೆ ಎಂದ. ರಾಜ ಒಂದು ಮರವನ್ನೇರಿ ಈ ದುಷ್ಟ ಮನುಷ್ಯ ನನ್ನ ಆಜ್ಞೆಯನ್ನು ಸಹ ಪಡೆಯದೇ ನನ್ನ ಕಾಡಿನಲ್ಲಿ ಮರಗಳನ್ನು ಕಡಿದು ಮಾರಿ ತನ್ನ ಜೀವನವನ್ನು ಮಾಡುತ್ತಿದ್ದಾನೆ. ನಾಳೆ ಇವನನ್ನು ಗಲ್ಲಿಗೇರಿಸಬೇಕು - ಎಂದ.

ಅಷ್ಟು ವೇಳೆಗೆ ಆ ಸೌದೆ ಕಡಿಯುವವ ಬೀರಬಲ್ಲನ ಬಳಿಗೆ ಬಂದಿದ್ದ. ಬೀರಬಲ್ಲನು ಅವನನ್ನು ಕುರಿತು - ಕೇಳು - ಇಂದು ಬೆಳಿಗ್ಗೆ ಸಾಮ್ರಾಟನಾದ ಅಕಬರನು ತೀರಿಕೊಂಡ - ಎಂದ. ಇದನ್ನು ಕೇಳಿದ ಆತ ತಲೆ ಮೇಲೆ ಹೊತ್ತಿದ್ದ ಕಟ್ಟಿಗೆ ಹೊರೆಯನ್ನು ನೆಲದ ಮೇಲೆ ಎಸೆದು ಕುಣಿಯಲಾರಂಭಿಸಿದ. ಮತ್ತು - ತುಂಬಾ ಒಳ್ಳೆಯದಾಯಿತು. ಈ ರಾಜ ತುಂಬಾ ದುಷ್ಟನಾಗಿದ್ದ. ಮೀನಾ ಬಜಾರಿನಲ್ಲಿ ಓರ್ವ ರಾಜ ಪೂತನಿಯನ್ನು ಕೆಟ್ಟ ದೃಷ್ಟಿಯಿಂದ ನೋಡಿದ್ದಕ್ಕೆ ಆಕೆ ತನ್ನ ಚಾಕುವಿನಿಂದ ರಾಜನನ್ನು ತಿವಿದು ಹಾಕುತ್ತಿದ್ದಳು. ಆದರೆ ಮಾತಾ ಎಂದು ಹೇಳಿ ತನ್ನ ಪ್ರಾಣವನ್ನು ರಕ್ಷಿಸಿಕೊಂಡ. ನಾನಂತೂ ಇಂದು ಸಾಮ್ರಾಟ ಸತ್ತ ಸಂತೋಷದಲ್ಲಿ ಊರಿಗೆ ಸಿಹಿ ಹಂಚುವೆನೆಂದ.

ಅಕಬರನು ಬೀರಬಲ್ಲನ ಸಿದ್ಧಾಂತವನ್ನು ಒಪ್ಪಿಕೊಂಡ.

**ಶ್ರೇಷ್ಠಿ ಪತ್ನಿ** - (ಉತ್ಸುಕತೆಯಿಂದ) ಮತ್ತೇನಾಯಿತು.

ಅದೇ ಸಮಯದಲ್ಲಿ ಹುಲ್ಲು ಕತ್ತರಿಸುವವಳೊಬ್ಬ ಮುದುಕಿ ಬೀರಬಲ್ಲನ ಸಮೀಪಕ್ಕೆ ಬಂದಳು. ಬಾದಶಾಹ ಅದೇ ಮರದಲ್ಲಿ ಮುಚ್ಚಿಟ್ಟುಕೊಂಡಿದ್ದ ಯಾಕೆಂದರೆ ಶುಭಾಶುಭ ಚಿಂತನದ ಪ್ರಭಾವವನ್ನು ಅರಿಯಬೇಕಿತ್ತು. ಅಶುಭ ಚಿಂತನೆಯ ಪ್ರಭಾವವನ್ನು ಅರಿತಾಗಿದ್ದು ಈಗ ಶುಭ ಚಿಂತನೆಯ ಪ್ರಭಾವವನ್ನು ತಿಳಿಯಲು ಉತ್ಸುಕನಾಗಿದ್ದ ರಾಜನು.

ಬೀರಬಲ್ಲ! ಅಲ್ಲಿ ನೋಡು. ಒಬ್ಬಳು ಅಸಹಾಯಕಿಯಾದ ಮುದುಕಿಯು ಬರುತ್ತಿದ್ದಾಳೆ. ಸೊಂಟ ಬಗ್ಗಿ ಹೋಗಿದೆ. ಪ್ರಾಯಶ: ಹಲ್ಲುಗಳೆಲ್ಲಾ ಬಿದ್ದು ಹೋಗಿರಬಹುದು. ಕೋಲಿನ ಸಹಾಯದಿಂದ ನಡೆಯುತ್ತಿದ್ದಾಳೆ. ತನ್ನ ಹಸುವಿಗಾಗಿ ಸ್ವಲ್ಪ ಹುಲ್ಲನ್ನು ತಂದಿದ್ದಾಳೆ. ಇವತ್ತಿನಿಂದ ಇವಳಿಗೆ ತಿಂಗಳಿಗೆ ಹತ್ತು ರೂಪಾಯಿ ವೃದ್ಧಾಪ್ಯ ವೇತನವನ್ನು ನೀಡುವಂತೆ ನೋಡಿಕೋ - ಎಂದ.

ಆ ಸಮಯದಲ್ಲಿ ತನ್ನ ಬಳಿಗೆ ಬಂದ ಮುದುಕಿಗೆ ಬೀರಬಲ್ಲನು ಬಾದಶಾಹನು ಸತ್ತ ವಿಚಾರವನ್ನು ಹೇಳಲು ಆ ಮುದುಕಿಯು ಹುಲ್ಲನ್ನೆಸೆದು ಅಳಲಾರಂಭಿಸಿದಳು. ನಂತರ ಇದಂತೂ ವಿಚಿತ್ರವೇ ಸರಿ.  ರಾಮ- ರಾಮ ತುಂಬಾ ಕೆಟ್ಟದಾಯಿತು. ಇಷ್ಟು ದಯಾಳುವಾದ ಸಾಮ್ರಾಟ ಮತ್ತೆಲ್ಲಿ ಸಿಗುತ್ತಾನೆ?  ಹಿಂದೂ ಮುಸಲ್ಮಾನ ಇಬ್ಬರೂ ಈತನಿಗೆ ಎರಡು ಕಣ್ಣಿದ್ದಂತೆ.  ಬೀರಬಲ್ಲ ನಂತಹ ಪ್ರಧಾನಮಂತ್ರಿ - ಮಾನಸಿಂಹ ನಂತರ ಸೇನಾಧಿಪತಿ -  ಟೋಡರಮಲ್ಲ ನಂತಹ ಖಜಾಂಜಿ. ಇಂತಹ ರಾಜನಿಗೆ ಸಾವು ಬರಬೇಕೆ? ಗೋವಧೆಯಂತೂ ನಾಮೋನಿಶಾನೆ ಇಲ್ಲ. ಗೋವಧೆಯಂತಿರಲಿ. ಗೋಮಾತೆಯ ಬಾಲದ ಒಂದು ಕೂದಲನ್ನಾಗಲೀ ಕೀಳುವ ಕ್ಷಮತೆ ಯಾರಲ್ಲಿತ್ತು. ಹಾಯ್ ರಾಮ-ರಾಮ ನನ್ನ ಪ್ರಾಣ ತೆಗೆದುಕೊಂಡು ಸಾಮ್ರಾಟನನ್ನು ಬದುಕಿಸಬೇಕೆಂದು - ಅಳುತ್ತಿದ್ದಳು.

ಹೀಗೆ ಪತ್ನಿಗೆ ಸಮಾಧಾನ ಮಾಡಿದ **ಶ್ರೇಷ್ಠಿ** ಬೆಳಿಗ್ಗೆ ವಿಶ್ವನಾಥನ ದರ್ಶನಕ್ಕಾಗಿ ಮಂದಿರಕ್ಕೆ ತೆರಳಿದ.  ಪೂಜೆಯನ್ನು ಮಾಡಿ ಕೈ ಮುಗಿದು ಹೇ ಭೋಲೇನಾಥ, ನೀನು ಅಂತರ್ಯಾಮಿಯಾಗಿರುವೆ. ನನಗೆ ನನ್ನ ಸೇವಕನ ಅಧ:ಪತನಕ್ಕಾಗಿ ದುಃಖವಾಗುತ್ತಿದೆ. ನನ್ನ ಮನದಲ್ಲಿ ಆತನ ಬಗ್ಗೆ ಸ್ವಲ್ಪವಾದರೂ  ದ್ವೇಷ ಅಥವಾ ಅಸೂಯಾ ಭಾವನೆ ಇದ್ದಲ್ಲಿ ನನ್ನನ್ನು ಕ್ಷಮಿಸು. ಆದರೆ ಅವನ ಮನಸ್ಸನ್ನು ಶುದ್ಧೀಕರಿಸು ದೇವ! ಒಂದು ವೇಳೆ ಅವನ ಮನದಲ್ಲಿರುವ ಮಲಿನತೆಯನ್ನು ಶುಧ್ಧಮಾಡಲು ನಾನು ಸಕ್ಷಮನಾಗಿಲ್ಲದಿದ್ದರೆ ನನ್ನ ಈ ಭಕ್ತಿಯಿಂದೇನು ಪ್ರಯೋಜನ? ಕಾಮ-ಕ್ರೋಧ-ಲೋಭಗಳು ಮಾನವನ ಶತ್ರುಗಳು. ನನಗೆ ನನ್ನ ಜೀವನದ ಬಗ್ಗೆ ಚಿಂತೆ ಇಲ್ಲ. ಯಾಕೆಂದರೆ, ನೀನು ಯಾರ ಮನದಲ್ಲಿ ನೆಲೆಸಿರುವೆಯೋ ಅವನಿಗೆ ಹೆದರಿಕೆ ಎಂತಹದು. ನಾನಂತೂ ಆತ್ಮಸಮರ್ಪಣೆ ಮಾಡಿ ನಿಶ್ಚಿಂತನಿದ್ದೇನೆ.

ಅಂದು ಸಂಜೆ ಒಬ್ಬ ಹಾವಾಡಿಗ ನಂದಲಾಲನ ಮನೆ ಮುಂದೆ ನಡೆಯುತ್ತಿದ್ದ. ಅವನನ್ನು ತಡೆದ ನಂದಲಾಲ್ -

ನಿನ್ನಲ್ಲಿ ವಿಷ ತೆಗೆಯದಿರುವ ಈಗ ತಾನೇ ಹಿಡಿದಿರುವ ಹಾವೇನಾದರೂ ಇದೆಯಾ ಎಂದು ಕೇಳಿದ.

ಆಗ ಹಾವಾಡಿಗನು - ನೆನ್ನೆ ಇನ್ನು ಹಿಡಿದಿರುವ ಒಂದು ಹಾವಿದೆ ಎಂದ. ಅದನ್ನು ನನಗೆ ಕೊಡು. ಈ ಐದು ರೂಪಾಯಿ ತೆಗೆದುಕೋ - ಎಂದ ನಂದಲಾಲನ ಮಾತನ್ನು ಕೇಳಿ ಅದಕ್ಕೊಪ್ಪಿ ಒಂದು ಮಣ್ಣಿನ ಪಾತ್ರೆಯಲ್ಲಿ ಆ ಹಾವನ್ನು ಇಟ್ಟುಕೊಟ್ಟ.

ರಾತ್ರಿ ೧೦ ಘಂಟೆಯ ಸಮಯದಲ್ಲಿ ಆ ಮಣ್ಣಿನ ಪಾತ್ರೆ ಹಿಡಿದು ನಂದಲಾಲನು ತನ್ನ ಯಜಮಾನನ ಮನೆಯನ್ನು ತಲುಪಿದ. ಇವನಿಗೆ ಗೊತ್ತಿತ್ತು, ಯಜಮಾನರು ಎಲ್ಲಿ ಮಲಗುತ್ತಾರೆ ಎಂದು. ಪಲ್ಲಂಗದ ಮೇಲಿದ್ದ ಕಿಟಕಿಯ ಒಂದು ಗಾಜು ಒಡೆದುಹೋಗಿತ್ತು. ಅದರ ಕೆಳಗೇ ಶ್ರೇಷ್ಠಿಯ ಪಲ್ಲಂಗವಿತ್ತು. ನಂದಲಾಲನು ಆ ಒಡೆದ ಗಾಜುಳ್ಳ ಕಿಟಕಿಯ ಮೂಲಕ ಹಾವನ್ನು ಒಳಗೆ ಬಿಟ್ಟು ಸಂತೋಷದಿಂದ ಮನೆಗೆ ಹಿಂತಿರುಗಿದ.

ಬೆಳಿಗ್ಗೆ ತಮ್ಮ ಮಂಚದಿಂದ ಕೆಳಗಿಳಿಯಲು ನೋಡಿದಾಗ ಅವರು ಹೊದ್ದಿದ್ದ ದುಪಟ್ಟಿಯಿಂದ ಕಾಲನಾಗವೂ ಮಂಚದಿಂದ ಕೆಳಗಿಳಿಯಿತು. ಈ ದೃಶ್ಯವನ್ನು ಪಕ್ಕದಲ್ಲೇ ನಿಂತಿದ್ದ ಅವರ ಪತ್ನಿ ನೋಡಿ ಅತ್ಯಂತ ಗಾಬರಿಗೊಂಡು ಆ ಹಾವನ್ನು ಹೊಡೆಯಲು ತನ್ನ ನೌಕರರನ್ನು ಕರೆದಳು.

**ಶ್ರೇಷ್ಠಿ** - ನೌಕರರನ್ನೇಕೆ ಕರೆಯುತ್ತಿರುವೆ?

**ಪತ್ನಿ -** ಆ ಹಾವನ್ನು ಹೊಡೆಯಲು ನಿಮ್ಮನ್ನು ಕಚ್ಚಲಿಲ್ಲ ತಾನೇ ?

**ಶ್ರೇಷ್ಠಿ** - ಹುಚ್ಚಿ ! ಭಗವಾನ್ ವಿಶ್ವನಾಥನು ನನ್ನ ಪ್ರೇಮವನ್ನು ಪರೀಕ್ಷಿಸಲು ತನ್ನ ರುಂಡದ ಮಾಲೆಯನ್ನು ಕಳುಹಿಸಿದ್ದಾನಷ್ಟೇ! ಇದು ರಾತ್ರಿ ಇಡೀ ನನ್ನ ಸಂಗಡವೇ ಮಲಗಿತ್ತು. ಒಮ್ಮೊಮ್ಮೆ ನನ್ನ ಕೈ ಅಥವಾ ಕಾಲು ಇವನ ಮೇಲಿರುತ್ತಿತ್ತು. ಕಚ್ಚುವ ಮನಸಿದ್ದರೆ ಅನೇಕ ಸಲ ಕಚ್ಚಬಹುದಿತ್ತು. ಆದರೆ ಹಾಗೇನೂ ಮಾಡಲಿಲ್ಲ. ಎಂದ.

ಅಷ್ಟು ಸಮಯಕ್ಕೆ ದೊಣ್ಣೆಯೊಂದಿಗೆ ಅಲ್ಲಿಗೆ ಬಂದ ನೌಕರನಿಗೆ ಕೋಲನ್ನು ಅಲ್ಲಿಟ್ಟು ಒಂದು ಪಾತ್ರೆಯಲ್ಲಿ ಹಾಲು ತೆಗೆದುಕೊಂಡು ಬಾ ಹಾಲು ಕುಡಿದು ಸರ್ಪದೇವತೆಯು ಎಲ್ಲಿಗೆ ಬೇಕಾದರೂ ಹೋಗಲಿ. ಎಚ್ಚರಿಕೆ! ಹಾವನ್ನು ಹೊಡೆದುಬಿಟ್ಟೀಯಾ!

**ಪತ್ನಿ** - ಹಾ! ಇಲ್ಲೇ ಇರಲಿಬಿಡು ಎಂದು ವ್ಯಂಗ್ಯಮಾಡಿದಳು.

**ಶ್ರೇಷ್ಠಿ** - ಇರಲಿಬಿಡು ಚಿಂತಿಸುವ ಅಗತ್ಯವಿಲ್ಲ , ಹಾವಿಲ್ಲದಿರುವ ಜಾಗವೆಲ್ಲಿದೆ? ಇಡೀ ಭೂಮಿಯೇ ನಾಗರಾಜನ ತಲೆಮೇಲೆ ನಿಂತಿದೆ.

ಅಂದು ರಾತ್ರಿ ಶ್ರೇಷ್ಠಿಗೆ ಸ್ವಪ್ನದಲ್ಲಿ ವಿಶ್ವನಾಥನು ದರ್ಶನವಿತ್ತು ನಂದಲಾಲನ ಈ ಕೃತ್ಯವನ್ನು ವಿವರಿಸಿದ. ಆಗ ಶ್ರೇಷ್ಠಿಯು - ಏನೇ ಆಗಲಿ ಭಗವಾನ್! ನನ್ನ ಶುಭಚಿಂತನೆಯು ನನ್ನ ನೌಕರನ ಮನದಲ್ಲಿರುವ ಅಶುಭ ಚಿಂತನೆಯನ್ನು ನಷ್ಟಗೊಳಿಸಲಿ. ಇದೇ ನನ್ನ ಅರಿಕೆಯು ದೇವ! ನಿಮ್ಮ ಸಹಾಯಬೇಕು ಎಂದು ಕೈ ಮುಗಿದ.

ತನ್ನ ಎರಡೂ ಅಶುಭ ಚಿಂತನೆಗಳು ವಿಫಲವಾದುದನ್ನು ನೋಡಿದ ನಂದಲಾಲನು ಮೂರನೇ ಸಲ ಒಂದು ಯೋಜನೆಯನ್ನು ಮಾಡಿಕೊಂಡ. ಯೋಜನೆಗನುಸಾರವಾಗಿ ಅಲ್ಲಿಯ ಕುಖ್ಯಾತ ಕಳ್ಳರಿಬ್ಬರೊಡನೆ ಮಿತ್ರತೆಯನ್ನು ಮಾಡಿದ. ಒಂದು ದಿನ ಅರ್ಧರಾತ್ರಿಯ ಸಮಯದಲ್ಲಿ ಆ ಇಬ್ಬರು ಕಳ್ಳರೊಡನೆ ಯಜಮಾನನ ಮನೆ ಹಿಂಭಾಗ ತಲುಪಿ ಅಲ್ಲಿ ಕನ್ನವನ್ನು ಹಾಕಿ ಮೂವರು ಮನೆಯೊಳಗೆ ಪ್ರವೇಶಿಸಿದರು.

ಶ್ರೇಷ್ಠಿಯ ತಿಜೋರಿ ಯಾವ ರೂಮಿನಲ್ಲಿದೆ ಎಂದು ತಿಳಿದಿದ್ದ ನಂದಲಾಲನು ತಿಜೋರಿ ಇರುವ ಜಾಗವನ್ನು ತಲುಪಿದನಷ್ಟೇ? ಅಲ್ಲಿ ಸಾಕ್ಷಾತ್ ಕಾಲಭೈರವನು ಕಾವಲು ಕಾಯುತ್ತಿದ್ದ ದೃಶ್ಯವನ್ನು ಕಂಡು ಹೆದರಿ ಓಡಿಹೋಗಲು ಪ್ರಯತ್ನಿಸಿದ, ಆದರೆ

ಅದು ಸಾಧ್ಯವಾಗಲಿಲ್ಲ. ಉಳಿದಿಬ್ಬರೂ ಕಳ್ಳರೂ ಅಲ್ಲಿಂದ ತಪ್ಪಿಸಿಕೊಂಡು ಓಡಿಹೋಗಿಬಿಟ್ಟರು.

ಕಾಲಭೈರವನು ನಂದಲಾಲನನ್ನು ಹಿಡಿದು ೨-೩ ಸಲ ಕಪಾಳಮೋಕ್ಷ ಮಾಡಿ - ದುಷ್ಟ! ಯಾರು ನಿನ್ನನ್ನು ಆತ್ಮಹತ್ಯೆಯಿಂದ ರಕ್ಷಿಸಿದನೋ ಅವನ ವಿರುದ್ಧವೇ ಷಡ್ಯಂತ್ರ ನಡೆಸುತ್ತಿರುವ ನಿನ್ನನ್ನು ಇಂದು ಜೀವಂತ ಬಿಡಲಾರೆ! ಎಂದು ಅಬ್ಬರಿಸಿದ.

ಆಗ ನಂದಲಾಲನು ನಡುಗುತ್ತಾ ಕಾಲಭೈರವನ ಕಾಲು ಹಿಡಿದು ಇಂದು ನನ್ನಲ್ಲಿದ್ದ ಅಶುಭಚಿಂತನೆಯು ನಷ್ಟವಾಯಿತು. ನಾನು ಶ್ರೇಷ್ಠಿಯವರ ಕಾಲು ಹಿಡಿದು ಕ್ಷಮೆ ಬೇಡುವೆ. ಇದೊಂದು ಸಲ ನನಗೆ ಜೀವನದಾನ ಮಾಡಿ - ಎಂದು ಬೇಡಿಕೊಂಡ.

ನಂತರ ಶ್ರೇಷ್ಟಿಯನ್ನೆಬ್ಬಿಸಿ ಅವನ ಕಾಲಿಗೆರಗಿ ತನ್ನ ಮೂರೂ ಅಪರಾಧವನ್ನು ಮನ್ನಿಸೆಂದು ತನ್ನನ್ನು ಕ್ಷಮಿಸೆಂದು ಬೇಡಿಕೊಂಡನು.

ಶ್ರೇಷ್ಠಿಯು ನಂದಲಾಲನನ್ನು ತಬ್ಬಿಕೊಂಡು ಆನಂದಾಶ್ರುವನ್ನು ಹರಿಸುತ್ತಾ ನನ್ನ ಶುಭಚಿಂತನೆಗೆ ಗೆಲವು ಸಿಕ್ಕಿತೆಂದ. ಅಂದಿನಿಂದ ನಾಸ್ತಿಕನಾಗಿದ್ದ ನೌಕರ ನಂದಲಾಲ್ ಆಸ್ತಿಕನಾಗಿ ಧರ್ಮಪಥದಲ್ಲಿ ಸಂಚರಿಸುವವನಾದ.

# ರಾಜಾ ಭರ್ತೃಹರಿ

ಒಂದು ಘನಘೋರ ಕಾನನದ ಆಲದ ಮರದ ಕೆಳಗೆ ಯೋಗೀ ಗೋರಖನಾಥರು ಕುಳಿತಿದ್ದರು. ಆ ಸಮಯದಲ್ಲಿ ಅವರ ಮನಸ್ಸು ಅಂತರ್ಜಗತ್ತಿನಲ್ಲಿ ಸಂಚರಿಸುತ್ತಿತ್ತು. ತಮ್ಮ ತಮ್ಮಲ್ಲೇ ವಾರ್ತಾಲಾಪ ಮಾಡುತ್ತಿದ್ದರು. ಆ ಸಮಯದಲ್ಲಿ ಭಾರತದ ಸಾಮ್ರಾಟ್ ಭರ್ತೃಹರಿ ಒಂದು ಕೃಷ್ಣವರ್ಣದ ಜಿಂಕೆಯನ್ನು ಹಿಂಬಾಲಿಸುತ್ತಾ ಅಲ್ಲಿಗೆ ತಲುಪಿದ ಮತ್ತು ಹಿರಣದಿಂದ ಹೊರಬರುವ ಶಬ್ದಗಳನ್ನಾಲಿಸುತ್ತಾ ನಿಂತ.

**ಗೋರಖನಾಥ** - ಆಶೀರ್ವಾದ ಬೇಡು. ಇದರಿಂದ ಧರಿತ್ರಿಯಲ್ಲಿ ಬಿರುಕು ಉಂಟಾಗುತ್ತದೆ. ಆಕಾಶದವರೆಗೆ ಹಾರಿ ಹೋಗುತ್ತದೆ. ಯಾರು ಯಾವ ಕೆಲಸವನ್ನು ಮಾಡಲಾಗುವುದಿಲ್ಲವೋ ಅಂತಹ ಕಾರ್ಯವನ್ನು ಇದು ಮಾಡುತ್ತದೆ. ಪ್ರಾರ್ಥಿಸು.

**ಭರ್ತೃಹರಿ** - (ಮನದಲ್ಲಿ) ಇವನ್ಯಾರೋ ಮಹಾತ್ಮನೆಂದು ತಿಳಿದುಬರುತ್ತದೆ.

**ಗೋರಖ** - ಒಂದುವೇಳೆ ನೀನದನ್ನು ನೋಡುವಂತಿದ್ದರೆ ಪರದೆಯೇಕೆ ಬೇಕಾಗಿತ್ತು. ಇಂತಹ ವಿಚಿತ್ರ ಪರದೆ ಮಾಡಿರುವುದು ಯಾರು ನೋಡಬಾರದೆಂದು.

**ಭರ್ತೃಹರಿ** - ಯಾರೋ ತತ್ವಜ್ಞಾನಿ ಎಂದು ತಿಳಿಯಪಡುತ್ತದೆ.

**ಗೋರಖ** - ಸರ್ವ ಜಗತ್ತು ಪರಮಾತ್ಮನಲ್ಲಿದೆ - ಈ ಪರಮಾತ್ಮನನ್ನೊಳಗಿದ್ದಾನೆ. ಹಾಗಾಗಿ ಪರಮಾತ್ಮನಿಗಿಂತಲೂ ಮಹಾತ್ಮ ದೊಡ್ಡವನಲ್ಲವೇ?

**ಭರ್ತೃಹರಿ** - ದೇವಾತ್ಮಾ ಮತ್ತು ಮಹಾತ್ಮಾ ಇಬ್ಬರೂ ಪರಮಾತ್ಮನಲ್ಲಿರುತ್ತಾರೆ. ಚಂದ್ರನೂ, ನಕ್ಷತ್ರಗಳು ಹೇಗೆ ಆಕಾಶದಲ್ಲಿವೆಯೋ ಅದರಂತೆ.

**ಗೋರಖ** - ಶಕ್ತಿಯು ಉಪಾಸಕರು ರಾವಣನಂತಾದರೆ ಶಿವೋಪಾಸಕರು ರಾಮನಂತಾಗುತ್ತಾರೆ.

**ಭರ್ತೃಹರಿ** - ಈ ಲೆಕ್ಕಾಚಾರದ ಪ್ರಕಾರ ನಾನೂ ಸಹ ರಾವಣನಂತೆಯೇ ,ರಾಜ ಶಕ್ತಿಯ ಉಪಾಸಕನಿರುತ್ತಾನೆ.

**ಗೋರಖ** - ಈ ವಿಶಾಲ ಭೂಮಂಡಲದಲ್ಲಿ ಎಲ್ಲತರದಲ್ಲೂ ಸ್ತ್ರೀಯರೇ ಪೃಥ್ವಿಯಲ್ಲಿರುವ ಪ್ರತ್ಯೇಕ ಜೀವ ಸ್ತ್ರೀಯಾಗಿರುತ್ತದೆ.

**ಭರ್ತೃಹರಿ** - ಈ ಬಿಂದು ಅರ್ಥೈಸಿಕೊಳ್ಳುವುದು ಸ್ವಲ್ಪ ಕಠಿಣವಾಗುತ್ತೆ , ಈ ಮನುಷ್ಯನಿಗೆ ಸ್ವಲ್ಪ ಹುಚ್ಚಿರಬಹುದು.

**ಗೋರಖ** - ಸಮಗ್ರ ಭೂಮಂಡಲವು ಹುಚ್ಚರಿಂದಲೇ ಆವರಿಸಿದೆ. ಒಂದು ವೇಳೆ ಯಾರಾದರೂ ನಿಜರಸ್ತೆಯನ್ನವಲಂಬಿಸಲು ಪ್ರಾರಂಭಿಸಿದರೆ ಅವರನ್ನು ಹುಚ್ಚನೆಂದೇ ಕರೆಯುತ್ತಾರೆ. ತಾವೂ ಹುಚ್ಚರೇ ತಾನೇ !

**ಭರ್ತೃಹರಿ** - ಎಲ್ಲಾ ಹುಚ್ಚರು ! ಈ ವಿಚಾರವನ್ನೇ ನಿರಂತರ ಚಿಂತಿಸುವ ಈತನಿಗೂ ಹುಚ್ಚು ಹಿಡಿದಿದೆ.

**ಗೋರಖ** - ಧರಿತ್ರೀ ತಾಯಿಯ ಬಾಯಲ್ಲಿ ನಾನೇ ದೊಡ್ಡವಳೆಂಬ ಶಬ್ದ ಹೊರಹೊಮ್ಮಿದರೆ ಆಕಾಶದಿಂದಲೂ ಇದೇ ಅರ್ಥ ಪ್ರತಿಧ್ವನಿಸುತ್ತದೆ. ಹೆಂಗಸು ಸಂಸಾರದಲ್ಲಿ ನಾನೇ ಪ್ರಧಾನಳು ಅಂತ ಬೀಗಿದರೆ ಪುರುಷನೂ ಕಡಿಮೆಯೇನಿಲ್ಲ.

ವಾಸ್ತವವಾಗಿ ಪೃಥ್ವಿಯಾಗಲೀ - ಆಕಾಶವಾಗಲೀ , ಸ್ತ್ರೀ ಪುರುಷರಾಗಲೀ ಯಾರೂ ದೊಡ್ಡವರಲ್ಲ. ಪ್ರಧಾನವಾಗಿರುವುದು ಭ್ರಮೆಯಷ್ಟೆ!

ಈ ಭ್ರಮೆಯೇ ಇವರಿಗೆಲ್ಲಾ ಇಂತಹ ಬುದ್ಧಿ ಕೊಟ್ಟಿದೆ.

**ಭರ್ತೃಹರಿ** - ನೀವೇನಾದರೂ ಈ ಕಡೆ ಒಂದು ಕಪ್ಪು ಜಿಂಕೆಯನ್ನು ನೋಡಿದಿರಾ ಹೇಗೆ?

**ಗೋರಖನಾಥ** - ನಾನಿಲ್ಲಿರುವುದಿಲ್ಲ. ಇಲ್ಲಿರುವರೆಲ್ಲಾ ಹುಚ್ಚರೂ ಅಥವಾ ಕುರುಡರೇ ತುಂಬಿರುವ ಸ್ಥಾನದಲ್ಲಿ ನಾನು ಹೇಗೆ ತಾನೇ ಇರಲಿ! ಯಾವ ಊರಲ್ಲಿ ಎಲ್ಲರು ಮದದಿಂದ ಕೂಡಿದವರೋ ಆ ಗ್ರಾಮದಲ್ಲಿ ನನ್ನ ನಿವಾಸ ಹೇಗೆ? ಇಲ್ಲ ! ಇಲ್ಲ!! ಹೆಂಗಸರ ಈ ಊರಲ್ಲಿ ನಾನು ನಿವಾಸಿಸುವುದು ಅಸಂಭವವು.

**ಭರ್ತೃಹರಿ** - ಯಾಕೆ ಸ್ವಾಮಿ! ನೀವು ಯಾರು! ನನ್ನ ಮಾತನ್ನು ಕೇಳುವುದಿಲ್ಲವೇ ನೀವು.

**ಗೋರಖನಾಥ** - ಜೀವನದ ಕಥೆಯಲ್ಲಿ ಎರಡು ವಿಭಾಗಗಳಿವೆ. ಮೊದಲನೆಯದು ದುಃಖಾಂತ ಎರಡನೆಯದು ಸುಖಾಂತ. ಮೊದಲು ದುಃಖಾಂತ ನಾಟಕದ ಪ್ರಾರಂಭವಾಗಿ ತದನಂತರ ಸುಖಾಂತ ನಾಟಕದ ಪ್ರಯೋಗವಾಗಲಿದೆ. ಆದರೆ ಈ ದುಃಖಾಂತ ನಾಟಕದ ಪರದೆ ಎಂದು ಬೀಳುವುದೋ ಇದನ್ಯಾರೂ ಅರಿತವರಲ್ಲ. ಇದರ ಪರಿಜ್ಞಾನದಲ್ಲಿ ಸುಖಾಂತ್ಯವನ್ನೂ ಮರೆಯಬಹುದು. ನಿಮ್ಮಲ್ಲಿ ಯಾವುದೇ ಪ್ರಕಾರದ ಕೆಟ್ಟಗುಣಗಳಿಲ್ಲದಿದ್ದರೂ, ವಿಸ್ಮೃತಿಯಂತಹಾ ಕೆಟ್ಟಗುಣವಂತೂ ಇದೆಯಲ್ಲಾ.

**ಭರ್ತೃಹರಿ** - ಏನು ಸ್ವಾಮಿ ಇಲ್ಲೇ ಹತ್ತಿರದಲ್ಲಿ ಯಾವುದಾದರೂ ಹಳ್ಳಿ ಇದೆ ಏನು?

**ಗೋರಖ** - ಈ ಭೂಮಂಡಲ ಅತ್ಯಂತ ವಿಶಾಲವಾಗಿದೆ. ಈ ಭೂಖಂಡ ಸಮುದ್ರ ಖಂಡದ ಮಧ್ಯದಲ್ಲಿ ನಿದ್ರಿಸುತ್ತಿದೆ. ಸಮಸ್ತ ಜಲಪ್ರಪಂಚ ಬೆಂಕಿ ಪ್ರಪಂಚದಲ್ಲಿ ಮಂದರಾಡುತ್ತಿದೆ. ಈ ಧರಿತ್ರಿಯಲ್ಲಿರುವ ಸಮಸ್ತ ಕೀಟಾಣುಗಳು ಯಾವ ಅಪಕಾರ್ಯವು ಆಗದಂತೆ ಧೈರ್ಯವಾಗಿ ಯೋಚಿಸುತ್ತಿರುವವು. ಯಾವ ಸಂಕೋಚವೂ ಇಲ್ಲದ ಈ ಭೂಮಿ ನಿಶಾಚರರದಿಂದ ತುಂಬಿ ಹೋಗಿದೆ.

**ಭರ್ತೃಹರಿ** - ಈತ ಪೂರ್ಣತ: ಹುಚ್ಚನೇ ಸರಿ , ಆಗ್ರಾದ ವಿಚಾರ ಕೇಳುತ್ತಿದ್ದರೆ ಈತ ದೆಹಲಿ ಸಮಾಚಾರ ಹೇಳುತ್ತಿದ್ದಾನೆ.

ಸೂರ್ಯಾಸ್ತದ ಸಮಯವಾಗಿತ್ತು. ಇಲ್ಲೀವರೆವಿಗೂ ಆ ಕಪ್ಪು ಜಿಂಕೆಯ ಬಗ್ಗೆ ತಿಳಿದುಬರಲಿಲ್ಲ.

ಅಷ್ಟು ವೇಳೆಗೆ ಗೋರಖನಾಥರ ಪಾಲಿಕೆಯ ಆ ಕಪ್ಪು ಜಿಂಕೆ ಅಲ್ಲಿಗೆ ಬಂದಿತು. ಮಧ್ಯಾನ್ಹದಿಂದ ಯಾವ ಕಪ್ಪು ಜಿಂಕೆಯನ್ನು ಹಿಂಬಾಲಿಸುತ್ತಾ ಇಲ್ಲಿವರೆವಿಗೂ ಬಂದಿದ್ದನೋ ಅದೇ ಜಿಂಕೆ ತನ್ನ ಕಣ್ಣೆದರು ಬಂದಿದ್ದನ್ನು ಕಂಡು ಅದಕ್ಕೆ ಬಾಣದಿಂದ ಹೊಡೆದನು. ಇವನ ಬಾಣದ ಹೊಡೆತದಿಂದ ಮೃತಪಟ್ಟ ಆ ಜಿಂಕೆ ಯೋಗಿ **ಗೋರಖ** ನಾಥರ ಚರಣಗಳ ಮಧ್ಯೆ ಬಿದ್ದಿತು. ಅಲ್ಲಿಯವರೆವಿಗೆ ಅನ್ಯ ಜಗತ್ತಿನಲ್ಲಿ ಸಂಚರಿಸುತ್ತಿದ್ದ ಮನಸ್ಸು ವಾಸ್ತವಿಕತೆಗೆ ಬಂದು ಕೇಳಿದ - **ಗೋರಖ** - ನೀನು ಯಾರು?

**ಭರ್ತೃಹರಿ** - ಭಾರತದ ಉದಯಾಸ್ಥವನ್ನು ನಿಯಂತ್ರಿಸುವ ರಾಜ ನಾನು.

**ಗೋರಖ** - ಭಾರತದಲ್ಲಿ ಅಂದು ಉದಯವಾಗುತ್ತೆ ಎಂದು ನಿನ್ನ ಅಸ್ತವೋ. ಅದೂ ಇಂದೇ ನಿರಪರಾಧಿ ಮತ್ತು ಸಾಕಿದ ಪಶುವನ್ನು ಕೊಂದದ್ದಕ್ಕೆ

**ಭರ್ತೃಹರಿ** - ನಾನು ಇಲ್ಲಿನ ರಾಜ. ನನ್ನಿಚ್ಛೆಯಂತೆ ಯಾರನ್ನು ಬೇಕಾದರೂ ವಧಿಸಬಹುದು.

**ಗೋರಖ** - ನೀನು ರಾಜನೇ ಇರಬಹುದು. ಶೂರನಲ್ಲ, ಕ್ರೂರಿಯು

**ಭರ್ತೃಹರಿ** - ನನ್ನನ್ನು ಶೂರನೆಂದರಿಯುವುದಕ್ಕೂ, ಇಲ್ಲ ಬಿಡುವುದಕ್ಕೂ, ಇದಕ್ಕೂ ಯಾವ ಸಂಬಂಧವಿದೆ?

**ಗೋರಖ** - ನಾವು ಒಪ್ಪದಯೇ ನೀನು ರಾಜನಾಗುವುದು ಹೇಗೆ ಸಾಧ್ಯ?

**ಭರ್ತೃಹರಿ -** ನೀನೇನು ಮಾಡಬಲ್ಲೆ?

**ಗೋರಖನಾಥ** - ನೀನು ಈ ಜಿಂಕೆಯನ್ನೇನು ಮಾಡಿದೆಯೋ ಅದನ್ನೇ ನಿನ್ನ ಸಂಗಡವೂ ಮಾಡುತ್ತೇನೆ.

**ಭರ್ತೃಹರಿ** - ನಿನ್ನಲ್ಲಿ ಆಯುಧವಾದುದೂ ಇಲ್ಲ. ನನ್ನನ್ನು ಹೇಗೆ ಸಾಯಿಸುವೆ?

**ಗೋರಖ** - ನಪುಂಸಕರು ಶಸ್ತ್ರ-ಅಸ್ತ್ರಾದಿಗಳಿಂದ ಕೊಲ್ಲುತ್ತಾರೆ. ನಮ್ಮ ಕಾಮನೆಯೇ ಒಂದು ಕತ್ತಿ ಇದ್ದಂತೆ. ಕಾಮನೆಯಿಂದ ಜಮೀನೇ ಸೀಳಿ ಹೋಗುತ್ತದೆ. ನಿನ್ನ ನಾಶ ಯಾವ ಮೂಲೆಯದು!

**ಭರ್ತೃಹರಿ -** ನಾನೇನು ಅಪರಾಧ ಮಾಡಿದೆನೆಂದು ಶಿಕ್ಷೆ?

**ಗೋರಖ** - ಭಾರೀ ತಪ್ಪನ್ನೇ ಮಾಡಿರುವೆ

**ಭರ್ತೃಹರಿ** - ಏನು?

**ಗೋರಖ** - ಇಂತಹವನಿಗೆ ಸಾಯಿಸುವ ಅಧಿಕಾರವಿದೆ, ಯಾರು ಸತ್ತ ಶವಕ್ಕೆ ಪುನಃ ಜೀವದಾನ ಮಾಡುತ್ತಾರೋ; ಯಾರು ಜೀವವನ್ನು ಕೊಡಲಾರರೋ ಅವರಿಗೆ ಸಾಯಿಸುವ ಹಕ್ಕು ಇಲ್ಲ. ಕಾನೂನು ಇಲ್ಲ.

**ಭರ್ತೃಹರಿ** - ಸತ್ತ ಮೇಲೆ ಯಾರು ಜೀವವನ್ನು ಪಡೆಯಲಾರರು? ಇದೇನು, ಪ್ರಕೃತಿಗೆ ವಿರುದ್ಧವಾದ ಮಾತು!

**ಗೋರಖ** - ಪ್ರಕೃತಿ ನಿಯಮಗಳ ಬಗ್ಗೆ ಅರಿವೆಲ್ಲಿದೆ ನಿನಗೆ. ಪ್ರಕೃತಿ ಸ್ವರೂಪವನ್ನೊಂದಾದರೂ ಕಂಡಿರುವೆಯಾ? ಇಲ್ಲ. ಕೇಳಿರುವೆಯಾ? ವಿಷಸೇವನೆಯಿಂದ ಮನುಷ್ಯನಿಗೆ ಮರಣ ಬರುತ್ತದೆ. ಆದರೆ ಮಹಾದೇವನು ವಿಷಾಹಾರಿಯಾಗಿಯೇ ನೀಲಕಂಠನೆಂದು ಖ್ಯಾತಿಯನ್ನು ಪಡೆದವನಾಗಿರುತ್ತಾನೆ.

ಬೇರಿಲ್ಲದೇ ಗಿಡವಿಲ್ಲ. ಆದರೆ ಅಮೃತವಲ್ಲಿ ಬೇರಿಲ್ಲದೆಯೇ ಬೆಳೆಯುತ್ತದೆ. ಸಂಭವ-ಅಸಂಭವ ಇವೆರಡೂ ಪ್ರಕೃತಿ ಧರಿಸಿರುವ ಮಾಲೆಗಳು ಇವನ್ನು ಅರಿತಿರುವೆಯಾ ಅಥವಾ ಅದೂ ಇಲ್ಲವೇ?

**ಭರ್ತೃಹರಿ -** ನಿನ್ನೊಡನೆ ವ್ಯರ್ಥಾಲಾಪ ಮಾಡುವಷ್ಟು ಸಮಯವಿಲ್ಲ. ನಾನೀಗಲೇ ಈ ಕೃಷ್ಣಮೃಗದ ಸಂಗಡ ರಾಜಧಾನಿಗೆ ತೆರಳಬೇಕು.

**ಗೋರಖ** - ಜಿಂಕೆ ಜೊತೆಯಲ್ಲಿ? ಜಿಂಕೆ ಬಿಡು, ನೀನು ರಾಜಧಾನಿ ತಲಪುತ್ತಿ ಏನು? ಈ ಜಿಂಕೆಗೆ ಪ್ರಾಣ ನೀಡುವವರೆವಿಗೂ ನೀನಿಲ್ಲಿಂದ ಒಂದು ಹೆಜ್ಜೆಯನ್ನು ಇಡಲಾರೆ. ರಾಜಧಾನಿಯಲ್ಲ ಸ್ಮಶಾನಕ್ಕಂತೂ ಅವಶ್ಯ ಹೋಗುವೆ. ಸಾವಿರ ಮಾತಿನಿಂದೇನು ಪ್ರಯೋಜನ. ಒಂದು ಈ ಜಿಂಕೆಯನ್ನು ಜೀವಿತಗೊಳಿಸು ಇಲ್ಲ ಸಾಯಲು ಸಿದ್ದನಾಗು.

**ಭರ್ತೃಹರಿ** – ನೀನ್ಯಾರು?

**ಗೋರಖ** - ಜನರನ್ನು ಉಜ್ಜೀವಿಸುವುದು ಅಥವಾ ಹಾಳು ಮಾಡುವುದು ರಾಜನ ಆಟವಾದರೆ ನಮ್ಮಂತಹ ಯೋಗೀ ಜನರು ರಾಜರ ನಿರ್ಮಾಣ ಮತ್ತು ಅಧ: ಪತನಕ್ಕೆ ಕಾರಣರಾಗುತ್ತೇವೆ.

**ಭರ್ತೃ** - ಏನು, ನೀನು ಈ ಸತ್ತ ಜಿಂಕೆಗೆ ಪ್ರಾಣ ಕೊಡಬಲ್ಲಿಯಾ?

**ಗೋರಖ** - ಜೀವಿತವಾಗುವಂತೆ ಮಾಡಿದರೆ?

**ಭರ್ತೃ -** ಈ ಭಾರತದ ಸಾಮ್ರಾಟ ನಿನ್ನ ಚರಣದಾಸನಾಗುವನು.

**ಗೋರಖ** - ಕಾಂಚನ - ಕಾಮಿನೀ - ಕೀರ್ತಿಯುಕ್ತ ರಾಜ ಪದವನ್ನು ತ್ಯಜಿಸಿ ನಮ್ಮಂತೆ - ಬ್ರಹ್ಮಚರ್ಯ - ತ್ಯಾಗರೂಪಿ ಭಕ್ತಿಮಾರ್ಗಗಾಮಿಯಾಗುವಿಯೇನು?

**ಭರ್ತೃ -** ನಿಶ್ಚಿತವಾಗಿಯೂ

ಅಮರವಿದ್ಯಾ ಪಾರಂಗತನಾದ ಯೋಗೀ ಗೋರಖನಾಥರು ಕ್ಷಣಮಾತ್ರದಲ್ಲಿ ಸತ್ತ ಆ ಜಿಂಕೆಗೆ ಜೀವ ತುಂಬಿದರು.

**ಗೋರಖ** - ರಾಜಾ ಭರ್ತೃಹರೀ !

**ಭರ್ತೃ** - ಬಾಬಾ ಭರ್ತೃಹರೀ ಎನ್ನಿ!

**ಗೋರಖ -** ದೊಡ್ಡವರಾರು? ರಾಜನೋ? ಯೋಗಿಯೋ

**ಭರ್ತೃ -** ರಾಜ ಸಂಹಾರಕ ಮಾತ್ರ. ಆದರೆ ಯೋಗಿ ಜೀವನೀಡಲು ಮತ್ತು ಅಳಿಸಲೂ ಬಲ್ಲ

ಹೀಗೆ ಸಾಮ್ರಾಟನಾದ ಭರ್ತೃಹರಿಯು ಯೋಗಪಂಥವನ್ನಾಯ್ಕೆ ಮಾಡಿಕೊಳ್ಳಲಾಗಿ ಆ ಸಮಯ ಬಂಗಾಳವು ಮಹಾರಾಜ ಗೋಪೀಚಂದ್ರರ ಆಳ್ವಿಕೆಯಲ್ಲಿತ್ತು. ಗೋಪೀಚಂದ್ರನು ಭರ್ತೃಹರಿಯ ಸ್ವಂತ ಮಾವನವರೇ ಆಗಿದ್ದರು. ಅಂದರೇ ತಾಯಿಯ ಸೋದರರು. ಗೋಪೀಚಂದ್ರನಿಗೆ ಯಾವಾಗ ಭರ್ತೃಹರಿಯ ಯೋಗಸಾಧನೆ - ಅಮರವಿದ್ಯಾಭ್ಯಾಸದ ವಿಷಯ ತಿಳಿದುಬಂದಿತೊ ಆ ಕ್ಷಣವೇ ರಾಜ್ಯ - ಪದ ಎಲ್ಲವನ್ನು ತ್ಯಜಿಸಿ ತಾನೂ ಸಹ ಅಮರವಿದ್ಯೆಯ ಅಧಿಕಾರಿಯಾಗಬೇಕೆಂಬ ಉತ್ಕಟೇಚ್ಛೆಯಿಂದ ಗುರು ಗೋರಖನಾಥರ ಸನ್ನಿಧಿಗೆ ತೆರಳಿದನು.

ಗುರು ಗೋರಖನಾಥನು ದೀಕ್ಷೆ ನೀಡಿ ಸರ್ವಪ್ರಥಮವಾಗಿ ತನ್ನ ತಾಯಿ ಮತ್ತು ಪತ್ನಿಯರಿಂದ ಭಿಕ್ಷೆ ಪಡೆದು ಬಾರೆಂದು ಗೋಪೀಚಂದ್ರನಿಗೆ ಉಪದೇಶಿಸಿದರು.

ಗುರು ವಾಕ್ಯಕ್ಕನುಸಾರವಾಗಿ ತನ್ನ ರಾಣಿಯ ಬಳಿಗೆ ಹೋಗಿ ಭವತಿ ಭಿಕ್ಷಾಂದೇಹಿ ಎಂದನು.

**ರಾಣಿ** - ನಾನು ನಿಮಗೇನು ತಾನೇ ಭಿಕ್ಷೆಯನ್ನು ನೀಡಲಿ? ನನ್ನ ಕಣ್ಣೀರ ಮಾಲೆಯನ್ನೇ ಕೊಡುತ್ತೇನೆ ತೆಗೆದುಕೊಳ್ಳಿ. ರಾಜ ಜನಕನಂತೆ ಭೋಗದ ಮಧ್ಯೆ ಯೋಗದ ಅರಿವು ಉಂಟಾಗುವುದಿಲ್ಲ.

**ಗೋಪೀ** - ಮಹಾರಾಣಿಯವರೇ! ಯೋಗಕ್ಕಿಂತಲೂ ದುಸ್ತರವಾದುದು ಭೋಗ, ಯೋಗವನ್ನು ಬಿಟ್ಟು ಭೋಗವಿಲ್ಲ. ಯೋಗ ಮತ್ತು ಭೋಗ ಎರಡು ಸಮಾಧಿಯನ್ನು ಹೊಂದುತ್ತವೆ. ಆದರೆ ಭೋಗವನ್ನರಿತಿರುವವರು ಯೋಗಜ್ಞರಿಂದ ದುರ್ಲಭರೇ ಸರಿ.

**ರಾಣಿ** - ಅಮರವಿದ್ಯೆಗಾಗಿ ರಾಜ್ಯವನ್ನು ತ್ಯಜಿಸುವುದು ಎಷ್ಟು ಉಚಿತವು!

**ಗೋಪೀ** - ಆವಶ್ಯಕವಿದೆ. ಅಮರವಿದ್ಯೆಯ ನಿಯಮಗಳನ್ನು ಪಾಲಿಸಲು ರಾಜ್ಯ-ಕೋಶ ತ್ಯಜಿಸುವುದು ಅನಿವಾರ್ಯವು.

**ರಾಣಿ** - ನನ್ನನ್ನು ತ್ಯಜಿಸುವುದರ ಮೂಲಕ ನೀವು ಅಮರತ್ವ ಪದವಿಯನ್ನು ಗಳಿಸುವಲ್ಲಿ ಸಫಲರಾಗುವಂತಿದ್ದರೆ ನನ್ನನ್ನು ಬಿಟ್ಟರೂ ಚಿಂತೆಯಿಲ್ಲ. ನಾನು ನನ್ನೆದೆಯಲ್ಲಿ ಕಲ್ಲಿಟ್ಟುಕೊಳ್ಳುವೆ. ಆದರೆ ಶಾರೀರಿಕ ಹಾನಿಯನ್ನುಂಟುಮಾಡಲಾರೆ. ಉತ್ತಮ ಪತ್ನಿ ತನ್ನ ಪತಿಯ ಒಳ್ಳೆಯದಕ್ಕಾಗಿ ಸರ್ವಸ್ವವನ್ನೂ ತ್ಯಜಿಸಲು ಸಿದ್ಧಳಿರುತ್ತಾಳೆ.

**ಗೋಪೀ** - ನನ್ನ ಪ್ರೇಮದಿಂದ ನೀವು ಯಾವುದನ್ನೂ ತ್ಯಜಿಸಲು ಬಯಸುತ್ತೀರೋ ಇದಕ್ಕಾಗಿ ನಾನು ಕೃತಜ್ಞನು. ನಾನು ನಿಮ್ಮಲ್ಲಿ ಭಿಕ್ಷೆ ಬೇಡಲು ಬಂದಿದ್ದೇನೆ. ಹಾಗಾಗಿ ನೀವು ಹರ್ಷಚಿತ್ತದಿಂದ ನನಗೆ ವನವಾಸ ಮಾಡಲು ಅನುಜ್ಞೆ ಮಾಡಿ.

**ರಾಣಿ** - ಹರ್ಷ ಪುರಸ್ಸರವಾಗಿ ಹೇಳುತ್ತಿದ್ದೇನೆ. ನೀವು ಅಮರವಿದ್ಯೆಯ ಅಧಿಕಾರಿಯಾಗಿ. ಇದನ್ನು ಬಯಸುತ್ತೇನೆ ಜನರು ಭರ್ತೃಹರಿಯ ಸಂಗಡ ನಿಮ್ಮ ಹೆಸರನ್ನೂ ಹೇಳುವಂತಾಗಲಿ - ನಾನು ಒಂದು ಭಿಕ್ಷೆ ಬೇಡಿದ್ದಲ್ಲಿ ಕೊಡುವಿರೇನು?

**ಗೋಪೀ** - ಏನದು?

**ರಾಣಿ** - ಎಂದು ನನಗೆ ಸಾವುಂಟಾಗುವುದೋ ಅಂದು ನಿಮ್ಮ ದರ್ಶನ ಭಾಗ್ಯ ಆಗಲೆಂದು

**ಗೋಪೀ -** ಹಾಗೇ ಆಗಲಿ .

**ಗೋಪೀ** - ಮಾತಾಶ್ರೀ! ಭಿಕ್ಷೆ ನೀಡಿ

**ಮೈನಾವತಿ** - ನಾನಿಂದು ಧನ್ಯಳಾದೆ. ನನ್ನ ಉದರದಿಂದ ಓರ್ವಭಕ್ತನ ಜನನವಾಗಿದೆ.

**ಗೋಪೀ -** ನನಗೆ ಭಿಕ್ಷೆ ನೀಡಿ

**ಮೈನಾ** - ನಾನು ನಿನಗೆ ಮೂರೂ ಶಿಕ್ಷೆಯ ಭಿಕ್ಷೆಯನ್ನು ನೀಡುವವಳಿದ್ದೇನೆ. ಒಂದೊಂದು ಶಿಕ್ಷೆಯೂ ಸಹ ಅತ್ಯಂತ ಬೆಲೆಬಾಳುವಂತಹದು.

**ಗೋಪೀ** - ಶಿಕ್ಷಾರ್ಜನೆಗಾಗಿಯೇ ನಾನು ವಜ್ರಭರಿತವಾದ ಗಣಿಯನ್ನು ತ್ಯಜಿಸಿದೆ. ನೀವು ನನಗೆ ಭಿಕ್ಷಾ ಪ್ರಧಾನ ಮಾಡಿ.

**ಮೈನಾ** - ನನ್ನ ಮೊದಲ ಶಿಕ್ಷೆ - ಯಾವಾಗಲೂ ಕೋಟೆಯ ಒಳಗೆ ಇರುವ ಶತ್ರುಗಳ ಆಕ್ರಮಣವಾಗದಿರಲಿ

**ಗೋಪೀ** - ನಿಮ್ಮ ಈ ರಹಸ್ಯಪೂರ್ಣ ಶಿಕ್ಷೆ ನನ್ನರಿವಿಗೆ ಬರಲಿಲ್ಲ ತಾಯಿ!

**ಮೈನಾವತಿ** - ಮನುಷ್ಯರಿಗೆ ಬ್ರಹ್ಮಚರ್ಯಕ್ಕಿಂತ ಮಿಗಿಲಾದ ಕೋಟೆ ಇಲ್ಲ. ರೋಗ- ಭಯ-ಬಾಧಾ-ವ್ಯಾಧಿ-ಚಿಂತಾ ಮತ್ತು ಅಶಾಂತಿ ರೂಪೀ ಶತ್ರುಗಳೂ ಆಕ್ರಮಣ ಮಾಡಲಾರವು. ಯಾರು ಬ್ರಹ್ಮಚಾರಿಯಲ್ಲವೋ ಅವನು ಭಕ್ತನಾಗಲಾರ -ಯೋಗಿಯೂ ಆಗಲಾರ.

ಯೋಗ ಪದವನ್ನು ಉತ್ತೀರ್ಣಿಸುವುದರ ಮೂಲಕ ನೀನು ಭಕ್ತನೆನಿಸಿಕೋ. ಬ್ರಹ್ಮಚರ್ಯದ ಕೋಟೆಯೊಳಗೆ ಭಕ್ತಿ ಮತ್ತು ಮನಸ್ಸು ವಿಹರಿಸುತ್ತದೆ.  ಆಗ ಅದಕ್ಕೆ ಯಾವ ಶತ್ರುವಿನ ಬಾಧೆಯೂ ಇರುವುದಿಲ್ಲ. ಇದೇ ನನ್ನ ಪ್ರಥಮ ಶಿಕ್ಷೆಯ ಸಾರಾಂಶ.

**ಗೋಪೀ** - ಕೃತಜ್ಞನಾದೆ ಮಾತಾ! ನಿಮ್ಮ ಈ ಋಣವನ್ನೆಂದೂ ತೀರಿಸಲಾರೆ. ನಿಮ್ಮ ಯೋಗ್ಯತೆಗೆ ಅನಂತ ನಮನಗಳು. ಎರಡನೇ ಶಿಕ್ಷೆ ಯಾವುದು?

**ಮೈನಾ** - ಯಾವಾಗಲೂ ಮೃಷ್ಟಾನ್ನ ಭೋಜನ ಮಾಡು.

**ಗೋಪೀ** - ಇದಂತೂ ಪರಿಸ್ಥಿತಿಗೆ ವಿರುದ್ಧವಾಗಿದೆ. ಯೋಗಿಗೆ ಕೆಲವು ಸಲ ಹುರಿದ ಕಡಲೆ ಭಾಗ್ಯವೂ ಲಭಿಸುವುದಿಲ್ಲ. ಇನ್ನು ಮೃಷ್ಟಾನ್ನಭೋಜನ!! ಪ್ರಾಯಶ: ಇದೂ ಸಹ ರಹಸ್ಯವಚನವಿರಬಹುದು.

**ಮೈನಾ** - ದಿನ - ರಾತ್ರಿಯ ೨೪ ಘಂಟೆಯ ಅವಧಿಯಲ್ಲಿ ಒಂದು ಸಲ ಮಾತ್ರ ಚೆನ್ನಾಗಿ ಹೊಟ್ಟೆ ಹಸಿಯುತ್ತದೆ. ಆ ಸಮಯದಲ್ಲಿ ಯಾವುದೇ ಸೇವಿಸಿದರೂ ಅದು ಮೃಷ್ಟಾನ್ನದಂತೆಯೇ ಇರುತ್ತದೆ. ಹಸಿವಿಲ್ಲದ ಭೋಜನವೂ ಮೃಷ್ಟಾನ್ನವಾದರೂ ಹುರಿದ ಕಡಲೆಗೆ ಸಮಾನವಿರುತ್ತದೆ.

ಹಾಗಾಗಿ ದಿನಕ್ಕೊಮ್ಮೆ ಹೊಟ್ಟೆ ಹಸಿಯುವ ಸಮಯದಲ್ಲಿ ಊಟಮಾಡು. ಇದು ನನ್ನ ಎರಡನೇ ಶಿಕ್ಷೆ.

**ಗೋಪೀ** - ನಿಮ್ಮ ಅನುಭವವಂತೂ ಸರ್ವೋಪರಿ ಇದೆ.

**ಗೋಪೀ** - ನಿಮ್ಮ ಮೂರನೇ ಶಿಕ್ಷೆ ಯಾವುದು?

**ಮೈನಾ** - ನಿದ್ರೆ ಬಂದಾಗ ಸುಪ್ಪತ್ತಿಗೆಯಲ್ಲಿ ಮಲಗುವುದು.

**ಗೋಪೀ** – ಈ ಶಿಕ್ಷೆಯೂ ಸಹ ರಹಸ್ಯಪೂರ್ಣವಾದುದೇ ನನ್ನಂತಹ ಸಾಮಾನ್ಯರು ಅರಿಯುವುದು ಅಸಂಭವವು. ಇದರರ್ಥವನ್ನು ವಿವರಿಸುವೆಯಾ ಮಾತಾ!

**ಮೈನಾ -** ಜನರು ಆಮಂತ್ರಣಕೊಟ್ಟು ನಿದ್ರೆಯನ್ನು ಆಮಂತ್ರಿಸುತ್ತಾರೆ. ಅವರಿಗೆ ಪಲ್ಲಂಗದಲ್ಲೂ ನಿದ್ರೆ ಬರುವುದಿಲ್ಲ. ಮಲಗುವ ಸಮಯವನ್ನು ಭಾವಿಸಿ ಮಲಗಬೇಕಷ್ಟೆ! ಈ ಅಭಿಪ್ರಾಯದಿಂದ ಸುಖದ ಸುಪ್ಪತ್ತಿಗೆಯಲ್ಲೂ ನಿದ್ರೆ

ಬರುವುದಿಲ್ಲ. ಆದರೆ ಯಾವಾಗ ಗಾಢವಾಗಿ ನಿದ್ರೆ ಬರುವುದೋ ಆ ಸಮಯದಲ್ಲಿ ಹೊಲದಲ್ಲಿದ್ದರೂ ಚನ್ನಾಗಿ ನಿದ್ರೆ ಬರುತ್ತದೆ. ಇದೆ ನನ್ನ ಮೂರನೆಯ ಶಿಕ್ಷೆ. ಯಾವಾಗ ಚನ್ನಾಗಿ ನಿದ್ರೆ ಬರುತ್ತದೋ ಆವಾಗಲೇ ನಿದ್ರೆ ಮಾಡುವುದು. ಪ್ರತಿಕಾಲವೂ ಆಲಸ್ಯಬಿಟ್ಟು ಕಾರ್ಯಕ್ಷೇತ್ರದ ಬಗ್ಗೆ ಗಮನವಿಡುವುದು.

**ಗೋಪೀ -** ಧನ್ಯವಾದಗಳು ಮಾತಾ! ನಿಮ್ಮ ಮೂರು ಶಿಕ್ಷೆಯನ್ನು ನಾನು ಅರ್ಥೈಸಿಕೊಂಡೆ. ನಿಮ್ಮ ಅಮೂಲ್ಯ ರತ್ನಗಳು ಸರ್ವದಾ ನನ್ನ ಬಳಿಯಲ್ಲೇ ಇರುತ್ತವೆ.

**ಮೈನಾ** - ಪಿಂಗಳಾ ರಾಣಿಯು ತನ್ನ ದುರಾಚರಿತದ ಮೂಲಕ ತನ್ನ ಪತಿ ಭರ್ತೃಹರಿಯನ್ನು ಯೋಗಿಯನ್ನಾಗಿಸಿದಳು. ಆದರೆ ಮೈನಾವತಿಯು ತನ್ನ ಸದಾಚರಣೆಯಿಂದ ಮಗನನ್ನು ಯೋಗಿಯನ್ನಾಗಿಸಿದಳು. ಈ ಪ್ರಪಂಚದಲ್ಲಿ ಒಳ್ಳೆಯವರಿಗಿಂತ ಒಳ್ಳೆಯವರೂ, ಕೆಟ್ಟವರಿಗಿಂತ ಕೆಟ್ಟ ಹೆಂಗಸರೂ ಇದ್ದಾರೆ.

**ಗೋರಖನಾಥ -** ಮಗೂ ಗೋಪೀಚಂದ್ರ!

**ಗೋಪೀ** - ಹಾ ಮಹಾಸ್ವಾಮಿಗಳೇ!

**ಗೋರಖ** - ನೀನು ನಿನ್ನ ರಾಣಿಯಲ್ಲಿ ಭಿಕ್ಷೆ ಬೇಡಿದೆ ಏನು?

**ಗೋಪೀ** - ಸತ್ಯವೇ ಸ್ವಾಮಿ! ಪರರ ಉಪಕಾರಕ್ಕಾಗಿ ಸ್ವಾರ್ಥತ್ಯಾಗ ಎಂಬ ಶಿಕ್ಷೆಯನ್ನು ಭಿಕ್ಷೆಯಾಗಿ ಪಡೆದೆ.

**ಗೋರಖ** - ತಾಯಿಯವರಿಂದ ಯಾವ ಭಿಕ್ಷೆ ಲಭಿಸಿತು?

**ಗೋಪೀ** - 1. ಬ್ರಹ್ಮಚರ್ಯದಲ್ಲಿರುವುದು. 2. ಯಾವಾಗ ಚನ್ನಾಗಿ ಹೊಟ್ಟೆಹ ಸಿಯುವುದೋ ಅವಾಗ ಭೋಜನ ಮಾಡುವುದು. ೩. ನಿದ್ರೆ ಬರುವ ಸಮಯದಲ್ಲಿ ಮಲಗುವುದೆಂದು ಮೂರು ಭಿಕ್ಷೆಯನ್ನು ನೀಡಿದರು.

**ಗೋರಖ** - ಉತ್ತಮವೇ! ನಿನಗೆ ಸಿದ್ಧಿಪ್ರಾಪ್ತಿಯಾಗಿ ನೀನೋರ್ವ ಸಿದ್ಧಪುರುಷನಾಗುವೆ. ಜಗತ್ತಿನಲ್ಲಿರುವ ಪ್ರತ್ಯೇಕ

ಸ್ತ್ರೀಯರು ಪ್ರವೃತ್ತಿ ಮಾರ್ಗಾನುಸರಣೆ ಮಾಡಿದರೆ ರಾಣಿ ಮೈನಾವತಿಯು ನಿವೃತ್ತಿಪಥದರ್ಶಕಳಾದಳು. ನಾನು ಕಂಡಂತೆ ನಿವೃತ್ತಿ ಮೂಲಕ ಪ್ರೇಮ ತೋರ್ಪಡಿಸಿಕೊಂಡವರಲ್ಲಿ ರಾಣೀ ಮೈನಾವತಿಯೇ ಮೊದಲಿನವಳು. ಮೈನಾವತಿಯು ಸುಮಿತ್ರಾರಾಣಿಯಂತೆ ಬ್ರಹ್ಮಪ್ರೇಮಿಯು. ನಿನ್ನ ತಾಯಿಯೇ ನಿಜವಾದ ತಾಯಿ. ಅವರಿಗೆ ನಾನು ಶ್ರದ್ಧಾಪೂರ್ವಕವಾಗಿ ನಮಸ್ಕರಿಸುತ್ತೇನೆ.

**ಗೋಪೀ** - ಪರಮಾತ್ಮ ಹೀಗೆ ಸೃಜನಮಾಡಲಿ ಎಲ್ಲಾ ತಾಯಂದಿರೂ ನನ್ನ ತಾಯಿಯಂತಾಗಲಿ.

**ಗೋರಖ** - ನೀವಿಬ್ಬರೂ ನನ್ನ ಸಂಗಡ 'ಸ್ಯಾಲಕೋಟೆ'ಗೆ ಬನ್ನಿ. ಸ್ಯಾಲಕೋಟೆಯ ರಾಜಕುಮಾರ ಪುರಾನಮಲ್ ದೊಡ್ಡ ವಿಪತ್ತಿಗೆ ಸಿಕ್ಕಿ ಹಾಕಿಕೊಂಡಿದ್ದಾನೆ. ಇವನನ್ನೂ ಸಹ ಪ್ರವೃತ್ತಿಮಾರ್ಗದಿಂದ ಹೊರತರಬೇಕಾಗಿದೆ. ಅದರ ನಂತರ ನೀವು ಮೂವರೂ ನನ್ನ ಸಂಗಡ ವಿಂಧ್ಯಾಚಲವನ್ನು ತಲಪಿ ಅಲ್ಲಿ ತಪಸ್ಸನ್ನಾಚರಿಸುವುದು ಮತ್ತು ಅಮರವಿದ್ಯೆಯನ್ನಧ್ಯಯಿಸುವುದು ನನ್ನ ಮೂಲಕವಾಗಿ ನೀವು ಮೂವರೂ ಸಿದ್ಧ ಪುರುಷರಾಗುವಲ್ಲಿ ಸಂದೇಹವಿಲ್ಲ.

**ಗೋಪೀ** - ಇಲ್ಲಿಯವರೆವಿಗೆ ಎಷ್ಟು ಜನ ಈ ಅಮರವಿದ್ಯೆಯನ್ನು ಅಧ್ಯಯನ ಮಾಡಿ ಸಿದ್ಧಿಯನ್ನು ಪಡೆದಿದ್ದಾರೆ?

**ಗೋರಖ** - ಹತ್ತಿರ-ಹತ್ತಿರ ಒಂದು ಸಾವಿರ

**ಗೋಪೀ** - ಈಗ ಅವರೆಲ್ಲಿದ್ದಾರೆ?

**ಗೋರಖ** - ಹಿಮಾಲಯದಲ್ಲಿ. ಕೆಲವು ಜನ ಸಂಚಾರಿಗಳೂ ಇದ್ದಾರೆ. ಆದರೆ ಇವರನ್ನು ಕಂಡುಹಿಡಿಯುವವರಾರೂ ಇಲ್ಲ. ಈ ಜನರು ಸಮಯಕ್ಕೆ ತಕ್ಕಂತೆ ತಮ್ಮ ಹೆಸರನ್ನು ಕೂಡ ಬದಲಾಯಿಸಿಕೊಂಡಿರುತ್ತಾರೆ.

**ಗೋಪೀ** - ಮರ - ಅಮರ ಶಬ್ದಗಳ ನಡುವಿನ ಅರ್ಥವೇನು?

ಮರಣಸ್ವಭಾವದಿಂದ ಕೂಡಿದವ ಮರ – ಯಾವತ್ಕಾಲವು ನಿತ್ಯಹರಿದ್ವರ್ಣದಿಂದ ಕಂಗೊಳಿಸುವ ಮೂರ್ತಿಯೇ ಅಮರ.

# ಮಾನವತೆ ಮತ್ತು ಜಾತೀಯತೆ

ಹಲವಾರು ಸಂವತ್ಸರದ ಪೂರ್ವದ ಘಟನೆ ಇದು. ಮಥುರಾ ಶ್ರೀಕೃಷ್ಣ ಜನ್ಮ ಭೂಮಿದಲ್ಲಿ "ಹೋಮ್" ಎಂಬುವರು ಕಲೆಕ್ಟರಾಗಿ ಕಾರ್ಯ ನಿರ್ವಹಿಸುತ್ತಿದ್ದರು, ಅವರ ಪತ್ನಿಯ ದೇಹಾಂತವಾಗಿತ್ತು. ಕೇವಲ 05 ವರ್ಷದ ಜೇಮ್ಸ್ ಎಂಬ ಬಾಲಕನಿದ್ದ ಅಷ್ಟೇ. ಯಾವಾಗ ಹೋಂ ಸಾಹೇಬರು ಮರಣಾಸನ್ನ ಸ್ಥಿತಿಗಿಳಿದರೋ, ಆಗ ತಮ್ಮ ಪರಮ ಮಿತ್ರರಾದ ಪಂಡಿತ್ ಕಮಲಕಿಶೋರ ಶಾಸ್ತ್ರೀಯವರನ್ನು ತಮ್ಮ ಬಳಿ ಕರೆಸಿಕೊಂಡು ತಮ್ಮ ಮಗನ ಕೈಯನ್ನು ಅವರ ಕೈಯಲ್ಲಿಡುತ್ತಾ – ಗೆಳೆಯ! ನಾನು ರಾಮನ ದರ್ಬಾರನ್ನು  ತಲುಪಲಿದ್ದೇನೆ. ನನ್ನ ಬಳಿ ಕೇವಲ ಮೂರೂವರೆ ಲಕ್ಷ ರೂಪಾಯಿ ಮಾತ್ರ ಇದೆ. ಇದನ್ನು ತೆಗೆದುಕೋ. ಈ ಬಾಲಕನನ್ನು ನಿನ್ನ ಮಗನೆಂದು ಭಾವಿಸಿ ಚೆನ್ನಾಗಿ ರಕ್ಷಿಸು, ಓದಿಸು. ಐ.ಸಿ.ಎಸ್. ಪರೀಕ್ಷೆಯಲ್ಲಿ ಈತ ಉತ್ತೀರ್ಣನಾಗುವಂತೆ ನೋಡಿಕೊಳ್ಳುವುದು ನಿನ್ನ ಜವಾಬ್ದಾರಿಯು ಎಂದು ಹೇಳಿ ಕಣ್ಣುಮುಚ್ಚಿದರು ಶಾಶ್ವತವಾಗಿ.

ಪಂಡಿತರ ಮನೆ ಹಳ್ಳಿಯಲ್ಲಿತ್ತು. ಇವರಿಗೆ ಜಮೀನ್ದಾರಿಯಿಂದ ವರ್ಷಕ್ಕೆ ಮೂವತ್ತು ಸಾವಿರ ರೂಪಾಯಿ ಲಾಭ ಲಭಿಸುತ್ತಿತ್ತು. ಸ್ವಂತಃ ಮಕ್ಕಳ ಸುಖ ಲಭಿಸಲಿಲ್ಲ. ಸಂತಾನ ಹೀನರಾದ ಇವರು ಜೇಮ್ಸನನ್ನೇ ತಮ್ಮ ಮಗನೆಂದು ಭಾವಿಸಿ ಅವನನ್ನು ಬೆಳೆಸಿದರು. ಈತನಿಗೆ ಲಲಿತ ಕಿಶೋರ ಎಂದು ನಾಮಕರಣವನ್ನು ಮಾಡಿದರು. ಲಲಿತನಿಗೆ ಶಿಕ್ಷೆ ನೀಡುವ ಸಲುವಾಗಿ ಮೂವರು ಶಿಕ್ಷಕರು ನಿಯುಕ್ತಿಯಾಗಿದ್ದರು. ಶಿಕ್ಷಣದ ಸಂಗಡವೇ ಸಂಸ್ಕೃತ-ಉರ್ದು-ಆಂಗ್ರೇಜಿ ಭಾಷಾ ಜ್ಞಾನವು ವಿಕಸಿತವಾಯಿತು. ಜೇಮ್ಸ್ ಒಮ್ಮೊಮ್ಮೆ ಪಂಚೆ ಜುಬ್ಬಾ ಧರಿಸಿದರೆ ಕೆಲವೊಮ್ಮೆ ಪ್ಯಾಂಟ್/ ಶರ್ಟನ್ನು ಧರಿಸುತ್ತಿದ್ದ. ಶುದ್ಧ ಹಿಂದಿ

ಭಾಷೆಯನ್ನರಿತ ಈತ ಹಿಂದೀ ಹುಡುಗರೊಡನೆ ಆಟೋಟಗಳಲ್ಲಿ ಪಾಲ್ಗೊಳ್ಳುತ್ತಿದ್ದ.

ಶಾಸ್ತ್ರಿಯವರನ್ನು ಪಿತಾಜೀ ಎಂದು ಅವರ ಧರ್ಮಪತ್ನಿಯನ್ನು ಅಮ್ಮನೆಂದೂ ಸಂಭೋಧಿಸುತ್ತಿದ್ದ. ಯಾವಾಗ ಲಲಿತನು ಎಂಟ್ರೆನ್ಸ್ ಪರೀಕ್ಷೆಯನ್ನು ಉತ್ತೀರ್ಣನಾದನೋ ಆ ಸಮಯದಲ್ಲಿ ಶಾಸ್ತ್ರಿಯವರು ತಮ್ಮ ಅಂತಮ ಘಟ್ಟವನ್ನು ತಲುಪಿದ್ದರು. ಒಂದು ದಿನ ತಮ್ಮ ಪತ್ನಿಯನ್ನು ಕರೆದು – ನೋಡು! ನನಗೆ ಈ ಮನೆಯ ಸಂಬಂಧ ಮುಗಿದಂತೆ ಕಾಣುತ್ತಿದೆ. ಅಳುವುದು ಗಿಳುವುದು ಏನೂ ಬೇಡ. ಲಲಿತನಿಗೆ ಐ.ಸಿ.ಎಸ್ ಪರೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಇನ್ನು ಮುಂದೆ ನಿನ್ನ ಜವಾಬ್ದಾರಿ. ಒಂದು ಮಾತು, ಲಲಿತನ ಶಿಕ್ಷಣಕ್ಕಾಗಿ ಅವನ ತಂದೆಯ ಧನವನ್ನು ಉಪಯೋಗಿಸುವುದು ಬೇಡ, ಅದು ಸರೀನೂ ಅಲ್ಲ.

ಲಲಿತನ ಉಚ್ಚಶಿಕ್ಷಣ ಮತ್ತು ಐ.ಸಿ.ಎಸ್ ಪರೀಕ್ಷೆ ವಿದೇಶದಲ್ಲೇ ನಡೆಯಲಿ. ಅದಕ್ಕೆ ತಕ್ಕ ವ್ಯವಸ್ಥೆ ಮಾಡು. ಈತನ ಶಿಕ್ಷಣಕ್ಕಾಗಿ ನಮ್ಮ ಜಮೀನು, ಮನೆ ಮಾರುವ ಸಂದರ್ಭ ಬಂದಲ್ಲಿ ಹಿಂದು-ಮುಂದೂ ನೋಡಬೇಡ. ನನ್ನ ಮಿತ್ರನಾದ ಹೊಂ ನ ಇಚ್ಛೆ ಪೂರ್ಣವಾಗಬೇಕಷ್ಟೇ. ಲಲಿತನನ್ನು ನನ್ನ ಮಗನೆಂದು ಭಾವಿಸಿ ಅವನಿಗೆ ಉತ್ತಮ ಶಿಕ್ಷಣ ಲಭಿಸುವಂತೆ ಮಾಡು – ಎಂದಿಷ್ಟೇ ಹೇಳಿ ಶಾಸ್ತ್ರಿಗಳು ಇಹಲೋಕವನ್ನು ತ್ಯಜಿಸಿದರು.

ಜೇಮ್ಸ್ ವಿದೇಶದಲ್ಲಿ 5 ವರ್ಷವಿದ್ದು, BA ಪರೀಕ್ಷೆಯನ್ನು ಆಕ್ಸ್ ಫರ್ಡ್ ವಿಶ್ವವಿದ್ಯಾಲಯದಲ್ಲಿ ಪಾಸು ಮಾಡಿ ನಂತರ I.C.S ಪರೀಕ್ಷೆಯಲ್ಲಿ ಉತ್ತೀರ್ಣನಾದ. ಅವನ ಧರ್ಮಮಾತಾ ಜೇಮ್ಸ್ ನಿಗೆ ಓದುವ ಸಲುವಾಗಿ ಪ್ರತಿ ತಿಂಗಳು ಸಾವಿರಾರು ರೂಗಳನ್ನು ಕಳುಹಿಸುತ್ತಿದ್ದಳು. ಆಕೆ ಜೇಮ್ಸ್ ನನ್ನು ಮಗನೆಂದೇ ಭಾವಿಸಿದ್ದಳು. ಮಗ ರೂ 500/- ಕೇಳಿದರೆ ಈಕೆ ರೂ 700/- ಕಳುಹಿಸುತ್ತಿದ್ದಳು. ಮಗನಿಗೆ ವಿದೇಶದಲ್ಲಿ ಯಾವುದೇ ತೊಂದರೆ ಬರಬಾರದೆಂಬ ಇಚ್ಛೆಯಿಂದ.

ಇತ್ತ ಗುಮಾಸ್ತರು ಆಕೆಯ ವಾರ್ಷಿಕ ಲಾಭಾಂಶವನ್ನು ತಮ್ಮದೆಂದೇ ಭಾವಿಸಿದರು. ಸ್ವಲ್ಪ ಹಣ ಕೊಟ್ಟರು. ಸ್ವಲ್ಪ ಖರ್ಚಿನಲ್ಲಿ ತೋರಿಸಿದರು. ಬಾಕೀ ಧನವನ್ನು ಬಾಕಿಯಾಗಿಯೇ ತೋರಿಸಿದರು. ಆ ವಾರಲ್ಲಿ ಮೂವರು ಜಮೀನ್ದಾರರಿದ್ದರು. ಅವರ ಹೆಸರು ಮಿಶ್ರಾ-ದೊಬೆ ಮತ್ತು ಲಾಲಾ ಎಂದು. ಇವರು ಈ ಮುದುಕಿಗೆ ಸಾಲ ಕೊಟ್ಟಂತೆ ಮಾಡಿ ಆಕೆಯ ಸಮಸ್ತ ಸಂಪತ್ತನ್ನು ಸಾಲದ ವಸೂಲಿ ಹೆಸರಲ್ಲಿ ಕಿತ್ತುಕೊಂಡರು. ಮೂರು ಬಾರಿ ಕಳ್ಳರು ಮನೆಗೆ ನುಗ್ಗಿ ಆ ಮನೆಯಲ್ಲಿದ್ದ ಸಾಮಾನನ್ನೆಲ್ಲಾ ಸಾಗಿಸಿದರು. ಉಳಿದಿದ್ದು ಕೇವಲ ಮನೆ ಮತ್ತು ಮುದುಕಿ ಮಾತ್ರ.

ಇದೇ ಸಮಯಕ್ಕೆ ಮಿ.ಜೇಮ್ಸ್ ಕಲೆಕ್ಟರಾಗಿ ಮಥುರಾ ನಗರಕ್ಕೆ ಆಗಮಿಸಿದರು. ಎರಡು ದಿನ ಅಲ್ಲಿದ್ದು ಸಂಚಾರದ ನಿರೀಕ್ಷಣೆಯ ವ್ಯವಸ್ಥೆಯನ್ನು ಮಾಡಿದ. ಸರ್ವ ಪ್ರಥಮವಾಗಿ ಹರೀಪುರಕ್ಕೆ ಆಗಮಿಸಿದ. ಎಲ್ಲಿ ಆತ ಲಲಿತನಾಗಿದ್ದು ತನ್ನ ಶಿಶುಕಾಲವನ್ನು ಕಂಡಿದ್ದ, ಆಟವಾಡುತ್ತಿದ್ದ. ಊರ ಹೊರಗೆ ಒಂದು ಮೈದಾನದಲ್ಲಿ ಟೆಂಟು ಹಾಕಿಸಿದ. ಮಾರನೇ ದಿವಸ ಬೆಳಿಗ್ಗೆಯೇ ಪಂಚೆ, ಕುರ್ತಾ ಧರಿಸಿ ಕೈಯಲ್ಲೊಂದು ಬೆತ್ತವನ್ನು ಹಿಡಿದುಕೊಂಡು ತನ್ನ ತಾಯಿಯ ದರ್ಶನಕ್ಕಾಗಿ ತೆರಳಿದ. ಮನೆಯೊಳಗೆ ಕಾಲಿರಿಸುತ್ತಲೇ ಕೂಗಿದ, ಅಮ್ಮ ಎಂದು.

ಲಲಿತ್ ನೀನು ಬಂದೆ ಏನು? ಎನ್ನುತ್ತಾ ಮುದುಕಿ ಹೊರಗೆ ಬಂದಳು. ತಾಯಿಯು ಮಗನನ್ನು ಆಲಂಗಿಸಿಕೊಂಡು ಪ್ರೇಮಾಶ್ರುಧಾರೆ ಇಬ್ಬರಲ್ಲೂ ಸಮಾನವಾಗಿತ್ತು. ಮಾತನಾಡಲು ಪ್ರಾರಂಭಿಸಿದರು.

**ತಾಯಿ** – ಮಗು ಲಲಿತ್, ನೀನು I.C.S. ಪರೀಕ್ಷೆ ಪಾಸಾದೆ, ಏನು?

**ಜೇಮ್ಸ್ -** ನಿಮ್ಮ ಕೃಪೆಯಿಂದ ಎಲ್ಲಾ ಮುಗಿಯಿತು, ಅಮ್ಮ

**ತಾಯಿ** – ನಾನಿಂದು ಋಣಮುಕ್ತಳಾದೆ. ನಿನ್ನ ತಂದೆ ಹೇಳುತ್ತಿದ್ದರು. ಲಲಿತನನ್ನು ವಿದೇಶಕ್ಕೆ ಕಳುಹಿಸಿ ಅಲ್ಲಿ ಉಚ್ಚ

ಶಿಕ್ಷಧಾರನಾಗಬೇಕೆಂದು. ಇದಕ್ಕಾಗಿ ಮನೆ/ ಜಮೀನು ಹರಾಜಾದರೂ ಚಿಂತೆ ಇಲ್ಲ ಎಂದು. ನೀನು ನಿನ್ನ ತಂದೆಯ ಕನಸನ್ನು ನನಸಾಗಿಸಿದೆ.

ತಾಯಿ ನೆಲದ ಮೇಲೆ ಕೂತೊಡನೆ ಜೇಮ್ಸ್ ಆಕೆಯ ತೊಡೆಯ ಮೇಲೆ ಮಲಗಿದ. ಅವನ ತಲೆಯನ್ನು ಸವರುತ್ತಾ , ಲಲಿತ್ ಸರಿಯೇನು? ಸೊಸೆ ಎಲ್ಲಿದ್ದಾಳೆ"? ಎಂದು ಕೇಳಿದಳು.

**ಜೇಮ್ಸ್** – ನಿಜವೇ ಅಮ್ಮ, ಅವಳು ಮಥುರಾದಲ್ಲಿರುವ ಬಂಗಲೆಯಲ್ಲಿದ್ದಾಳೆ. ನಿನ್ನನ್ನು ಪ್ರೇಮದಿಂದ ಕರೆದಿದ್ದಾಳೆ. ಇಂದಿನಿಂದ ನಿನ್ನ ನಿವಾಸ ನಮ್ಮ ಬಂಗಲೆಯಲ್ಲಿ. ಪ್ರತಿದಿನ ಯಮುನೆಯಲ್ಲಿ ಸ್ನಾನ ಮಾಡಿ ದ್ವಾರಕಾದೀಶನ ದರ್ಶನ ಮಾಡಿ.

**ತಾಯಿ** – ಒಳ್ಳೆಯದಾಯಿತು, ಮಗು. ನಿನ್ನ ಪತ್ನಿ ಮನದಲ್ಲಿ ನಾವೆಲ್ಲಾ ಆಂಗ್ರೇಜರು, ತಾಯಿ ಹಿಂದೂ ಸಮಾಜಕ್ಕೆ ಸೇರಿದವಳೆಂಬ ಭಾವನೆ ಉಂಟಾಗುವುದಿಲ್ಲವೇನು?

**ಜೇಮ್ಸ್** – ಇಲ್ಲ, ಅಮ್ಮ. ಇಲ್ಲಿಯ ವೃತ್ತಾಂತ ಪೂರ ತಿಳಿದಿದ್ದಾಳೆ. ನಿಮ್ಮ ಸೇವಾಭಾಗ್ಯವನ್ನು ಅಪೇಕ್ಷಿಸುತ್ತಿದ್ದಾಳೆ.

**ತಾಯಿ** – ನಿನಗಂತೂ ಹಸಿವಾಗಿರಬಹುದು.

**ಜೇಮ್ಸ್** – ಹೌದು, ಅಮ್ಮ. ಬಹಳ ಹಸಿವಾಗಿದೆ. ಈ ಐದು ವರುಷದಲ್ಲಿ ನಿಮ್ಮ ಕೈಯ ರೊಟ್ಟಿಯ ರುಚಿಯೇ ಲಭಿಸಲಿಲ್ಲ. ನಾನಲ್ಲಿ ಊಟಕ್ಕೆ ಕುಳಿತರೇ ನಿನ್ನ ರೊಟ್ಟಿಯೇ ಕಣ್ ಎದುರು ಬರುತ್ತಿತ್ತು

**ತಾಯಿ** – ನಿನಗೆ ಕಡೀ ಭಾತ್ ತುಂಬಾ ಇಷ್ಟವೆಂದು ಬಲ್ಲೆ. ಅದನ್ನೇ ತಯಾರಿಸುತ್ತೇನೆ ಇರು.

**ಜೇಮ್ಸ್** – ಹೌದು!ಹೌದು! ಲಾಡೇ ಕಡೀ-ಭಾತ್

ಮುದುಕಿಯು ಎದ್ದು ಕೈಯಲ್ಲೊಂದು ಪಾತ್ರೆ ತೆಗೆದುಕೊಂಡು ಮೊಸರನ್ನು ತರಲು ಪಕ್ಕದ ಮನೆಗೆ ತೆರಳಿದಳು.

ಇದೇ ಸಮಯದ ನಿರೀಕ್ಷೆಯಲ್ಲಿದ್ದ ಜೇಮ್ಸ್ ಮೇಲೆದ್ದು ಮನೆಯನ್ನು ನಿರೀಕ್ಷಿಸಿದ. ಎಲ್ಲೂ ಯಾವ ವಸ್ತುವೂ ಕಾಣಿಸಲಿಲ್ಲ. ನವಾಬೀ ಕತ್ತಿಗಳು-ಸೋಫಾ-ಅಲಮಾರಿ-ಪಲ್ಲಂಗ-ಉತ್ತಮ ವಸ್ತ್ರಗಳು ಇವು ಯಾವುದೂ ಕಾಣಲಿಲ್ಲ. ಕಳ್ಳರು ಮನೆ ಸಾರಿಸಿ ಗುಡಿಸಿ ಹೋಗಿದ್ದರು. ಇದರಿಂದ ಜೇಮ್ಸ್ ಗೆ ತುಂಬಾ ಆಘಾತವಾಯಿತು. ಕಣ್ಣಿಂದ ಅಶ್ರುಧಾರೆ ಹರಿಯಿತು. ತಲೆ ಮೇಲೆ ಕೈ ಹೊತ್ತು ಬಹು ಸಮಯದವರೆಗೆ ಅಲ್ಲೇ ಮ್ಲಾನಮುಖಿಯಾಗಿ ಕುಳಿತಿದ್ದ ತಾಯಿ ಅಡುಗೆ ಮಾಡುವವರೆಗೆ. ಅಡಿಗೆ ಸಿದ್ಧವಾಯಿತು. ಐದು ವರ್ಷದ ತರುವಾಯ ಇಂದು ನನಗೆ ಸಂತೃಪ್ತಿಯಾಯಿತು. ಈ ಭೋಜನ ಮಾಡಿ ಎಂದು ಹರ್ಷದಿಂದ ಊಟ ಮಾಡಿದ. ನಂತರ ಮಾತುಕಥೆ ಶುರುವಾಯಿತು.

**ಜೇಮ್ಸ್** – ಅಮ್ಮ! ಜಮೀನ್ದಾರಿಯಂತೂ ಚೆನ್ನಾಗಿ ನಡೆಯುತ್ತಿದೆ ತಾನೇ?

**ಅಮ್ಮ** – ಇಲ್ಲ ಮಗೂ, ಸಾಲಕ್ಕೆ ಕೈ ಬಿಟ್ಟು ಹೋಯಿತು.

**ಜೇಮ್ಸ್** – ಸಾಲವೇ? ಇಷ್ಟೊಂದು ಸಾಲ ತೆಗೆದುಕೊಳ್ಳುವ ಅವಶ್ಯಕತೆ ಏನಿತ್ತು?

**ಅಮ್ಮ** – ನಾನು ಸಾಲ ಪಡೆಯದಿದ್ದರೆ ನಿನಗೆ ಹೇಗೆ ಕಳುಹಿಸುತ್ತಿದ್ದೆ?

**ಜೇಮ್ಸ್** – ವಾರ್ಷಿಕ ಲಾಭಾಂಶ?

**ಅಮ್ಮ** – ಕೆಲಸಗಾರರು ಹೇಳಿದರು, ಅಕಾಲದ ಕಾರಣ ಲಾಭಾಂಶ ಲಭಿಸಲಿಲ್ಲ.

**ಜೇಮ್ಸ್** – ಈಗರ್ಥವಾಯಿತು. ನನ್ನ ಹೆಸರಲ್ಲಿ 3 ½ ಲಕ್ಷ ರೂಪಾಯಿ ಇತ್ತಲ್ಲ. ಸಾಲ ಯಾಕೆ ಮಾಡಿದೆ?

**ಅಮ್ಮ** – ನಿಮ್ಮ ತಂದೆ ಹೇಳಿದ್ದರು. ಆ ಹಣವನ್ನು ಮುಟ್ಟಲೂ ಬಾರದೆಂದು. ಆ ದುಡ್ಡು ಬ್ಯಾಂಕಿನಲ್ಲೇ ನಿನ್ನ ಹೆಸರಲ್ಲೇ ಸುರಕ್ಷಿತವಾಗಿದೆ.

**ಜೇಮ್ಸ್** – ಮನೆ ಸಾಮಾನುಗಳೆಲ್ಲಾ ಎಲ್ಲಿ ಹೋದವು?

**ಅಮ್ಮ** - ಮೂರು ಸಲ ಕಳ್ಳತನವಾಯಿತು, ಮಗೂ

**ಜೇಮ್ಸ್** – ನನ್ನ ಕಾರಣದಿಂದ ನಿಮಗೆ ಈ ದುರ್ದಶೆ ಉಂಟಾಯಿತು. ನನ್ನ ಕಾರಣ ರಾಜನಂತಿದ್ದವರು ಭಿಕಾರಿಯಾದಿರಿ, ಧಿಕ್ಕಾರವಿರಲಿ, ನನಗೆ.

**ಅಮ್ಮ** – ಇಲ್ಲ ಮಗು ಹಾಗೆನ್ನಬೇಡ. ನಾನಂತೂ ನನ್ನ ಪತಿಯ ಇಚ್ಛೆ – ನಿನ್ನ ತಂದೆಯ ಇಚ್ಛೆ ಮತ್ತು ನಿನ್ನ ಇಚ್ಛೆಯನ್ನು ಪೂರ್ಣಗೊಳಿಸುವಲ್ಲಿ ಸಫಲಳಾದೆ ಎಂಬುದೇ ಹರ್ಷದ ವಿಷಯ – ಇಂದು ನಿನ್ನನ್ನು ಈ ರೂಪದಲ್ಲಿ ನೋಡುತ್ತಾ ಎಷ್ಟು ಆನಂದವನ್ನು ಅನುಭವಿಸುತ್ತಿದ್ದೇನೆ ಗೊತ್ತಾ, ನಿನಗೆ! ಜಮೀನು-ಜಾಯಾದಾದಿನಿಂದೇನು ಸಾರ್ಥ್ಯ? ಸಮಸ್ತ ಸಂಪತ್ತನ್ನು ಧಾರೆ ಎರೆದು ನಿನ್ನನ್ನು ಪಡೆದೆ. ನೀನೇ ನನ್ನ ನಿಜವಾದ ಸಂಪತ್ತು. ಈಗ ನನಗೇನು ಬೇಕು ಹೇಳು. ದಿನಂಪೂರ್ತಿ ಎರಡು ಮುಷ್ಟಿ ಅನ್ನ. ನೀನಂತೂ ಕೊಟ್ಟೆ ಕೊಡುವೆ. ಒಂದು ವೇಳೆ ನಿನಗೆ ಕಷ್ಟವಾಗುವುದಾದರೆ ಹೇಳು. ನಾನು ಸದಾವ್ರುತಿಯಾಗಿ ಪಡೆದುಕೊಳ್ಳುವೆ.

**ಜೇಮ್ಸ್** – (ಕಣ್ಣೀರು ಬಿಡುತ್ತಾ) - ರಾಮ ರಾಮ. ಯಾವ ಮಾತನ್ನಾಡುತ್ತಿರುವೆ ಅಮ್ಮ! ಒಂದು ವೇಳೆ ನನ್ನಿಂದೇನಾದರೂ ಇಂತಹ ಕಾರ್ಯ ನಡೆದಲ್ಲಿ ನನಗೆ ನರಕದಲ್ಲೂ ಸ್ಥಾನ ಸಿಗದು. ನಡೆ ನನ್ನ ಜೊತೆ.

ಇಬ್ಬರೂ ಮನೆಗೆ ಬೀಗ ಹಾಕಿ ಮಥುರಾಗೆ ತೆರಳಿದರು. ಅಲ್ಲಿ ಜೇಮ್ಸ್ ತನ್ನ ನಿವಾಸದಲ್ಲಿ ಒಂದು ರೂಮನ್ನು ಅಣಿಗೊಳಿಸಿ ತಾಯಿಗೆ ನೆಲೆ ಕಲ್ಪಿಸುವುದಷ್ಟೇ ಅಲ್ಲದೇ ಮನೆ ಕೆಲಸದಲ್ಲಿ ತಾಯಿಗೆ ನೆರವಾಗಲು ಇಬ್ಬರು ನೌಕರರನ್ನೂ ಸಹ ನೇಮಕ

ಮಾಡಿದ. ತಾಯಿ ಅಡುಗೆ ಮನೆಯಲ್ಲಿ ಜೇಮ್ಸ್ ತಾನು ಪಾಲುವಹಿಸುತ್ತಿದ್ದ ಅಷ್ಟೇ. ಅಲ್ಲದೇ, ಪತ್ನಿ ಪಾಕಶಾಲೆಯಲ್ಲಿ ಸಹ. ಪತ್ನಿಯೂ ಸಹ ಅತ್ಯಂತ ಸುಶೀಲಭಾವದಿಂದ ತಾಯಿಯ ಸೇವೆಯನ್ನು ಮಾಡುತ್ತಿದ್ದಳು. ಎಲ್ಲರೂ ಆನಂದದಿಂದ ಸಹ ಜೀವನ ನಡೆಸಲಾರಂಭಿಸಿದರು.

ಇದರ ತರುವಾಯ ಕ್ರಿಮಿನಲ್ ಧಾರೆ 420 ಕ್ಕಂತರ್ಗತವಾಗಿ ಮೂವರು ಜಮೀನ್ದಾರರು, ಗೂಂಡಾಗಳು, - ಇವರ ಸೇವೆಯಲ್ಲಿದ್ದ ಬಾಕೀ ವಸೂಲೀ ಮಾಡುವ ಕರ್ಮಾಚಾರಿಗಳನ್ನೂ ಕೂಡ ಅರೆಸ್ಟ್ ಮಾಡಿ ಕಾರಾಗ್ರುಹದಲ್ಲಿರಿಸಿದ. ಒಂದು ತಿಂಗಳವರೆಗೆ ಬಂಧಿಯಾಗಿದ್ದ ಜಮೀನುದಾರರು ಕಲೆಕ್ಟರರಲ್ಲಿ ಒಂದು ವಿನಂತಿ ಪತ್ರವನ್ನು ಬರೆದರು. ಅದರಲ್ಲಿ ಹೂಜೂರ್! ಕೇವಲ ನಮ್ಮ ಕೊಟ್ಟ ಧನರಾಶಿಯನ್ನು ಹಿಂತಿರುಗಿಸಲಿ. ಬಡ್ಡಿ ಏನೂ ಬೇಡ. ಮತ್ತು ಜಮೀನನ್ನೂ ವಾಪಸ್ಸು ಕೊಡುತ್ತೇವೆ. ಒಂದು ವೇಳೆ ಧನ ರಾಶಿ ಸಲ್ಲಿಸದಿದ್ದರೂ ಚಿಂತೆ ಇಲ್ಲ. ಜಮೀನು ವಾಪಸ್ ಪಡೆಯಲಿ. ನಮ್ಮನ್ನು ಈ ರೀತಿ ಶಿಕ್ಷಿಸಬೇಡಿ. ದಯವಿಟ್ಟು ಬಿಡುಗಡೆ ಮಾಡಿ – ಎಂದು ಉಲ್ಲೇಖಿಸಲಾಗಿತ್ತು.

**ಗೂಂಡಾಗಳು ಸಹ** – ಸಾಹೇಬರೇ! ನಮ್ಮನ್ನು ದಯವಿಟ್ಟು ಕ್ಷಮಿಸಿ. ನಾವು ಅಮೂಲ್ಯ ಸಾಮಗ್ರಿಗಳು ನಷ್ಟವಾಗದಿರಲೆಂಬ ಭಾವನೆಯಿಂದ ಕದ್ದೆವು. ನಿಮ್ಮ ಆಗಮನದ ಪ್ರತೀಕ್ಷೆ ಮಾಡುತ್ತಿದ್ದೆವು ಅಷ್ಟೇ! ಆಜ್ಞೆ ಕೊಡಿ ಸಾಕು. ಮೊದಲಿನಂತೆಯೇ ಎಲ್ಲಾ ಸಾಮಾನುಗಳನ್ನ ರಿಸಿ ಮನೆಗೆ ಸುಂದರ ರೂಪವನ್ನು ನೀಡಲಿದ್ದೇವೆ. ನಾವು ನಿಮ್ಮ ತಂದೆಯವರ ಶುಭಚಿಂತಕರು ಸ್ನೇಹಿತರೂ ಕೂಡ. ಕಳ್ಳತನದ ಹೆದರಿಕೆಯಿಂದ ಈ ತರಹ ಕಾರ್ಯವನ್ನು ಮಾಡಿದೆವು. ದಯವಿಟ್ಟು ನಮ್ಮನ್ನು ಕ್ಷಮಿಸಿ – ಎಂದು ಕ್ಷಮಾಯಾಚನೆ ಮಾಡಿದರು. ಗುಮಾಸ್ತರೂ ಸಹ – ಸ್ವಾಮಿಗಳೇ ನಿಶ್ಚಿತವಾಗಿಯೂ ಈ ಸಮಯದವರೆಗೆ ಕೃಷಿ ಕ್ಲೇಶದಾಯಕವಾಗಿತ್ತು, ಈಗ ಹಾಗಿಲ್ಲ, ಮಳೆ ಚೆನ್ನಾಗಿ ಬಂದಿರುವ ಕಾರಣ ಫಸಲೂ ಸಹ ಉತ್ತಮವಾಗಿ ಬಂದಿದೆ. ಈ ವರ್ಷ ಬಾಕಿ ವರ್ಷಗಳ ಬಾಕಿ ಧನರಾಶಿಯೂ ನಿಶ್ಚಿತವಾಗಿ ಲಭಿಸುವುದಿದೆ.

ನಮಗೆ ಈ ಒಂದು ವರ್ಷ ಅವಧಿ ನೀಡಿ. ಈ ಅವಧಿಯಲ್ಲಿ ಇಂದಿನವರೆಗಿನ ಎಲ್ಲಾ ಧನರಾಶಿಯನ್ನು ಹಿಂತಿರುಗಿಸಲಿ ಎಂದು ವಿನಂತಿಸಿಕೊಂಡರು.

**ಜೇಮ್ಸ್ –** ಎಲ್ಲರನ್ನು ಎಚ್ಚರಿಕೆ ನೀಡಿ ಬಿಡುಗಡೆ ಮಾಡಿದ ಮತ್ತು ಜಮೀನ್ದಾರರಿಗೆ ಅವರ ಅಸಲು ಧನದೊಡನೆ ನ್ಯಾಯೋಜಿತ ಬಡ್ಡಿಯನ್ನು ಸಲ್ಲಿಸಿ ತಾಯಿಯನ್ನು ಸಾಲದಿಂದ ಮುಕ್ತನನ್ನಾಗಿಸಿದ ಮತ್ತು ಆ ವಾಪಸಾದ ಸಮಸ್ತ ಭೂಮಿಯನ್ನು ತಾಯಿಯ ಹೆಸರಿಗೆ ವರ್ಗಾಯಿಸಿದ. ಬದ್ಮಾಶ್ ಗೂಂಡಾಗಳು ಅಪಹರಿಸಿದ್ದ ಎಲ್ಲಾ ಸಾಮಾನುಗಳೂ ಮನೆಗೆ ಮರಳಿ ಬಂದವು. ಗುಮಾಸ್ತರೂ ಸಹ ಈ ತನಕ ತಿಂದಿದ್ದ ಧನರಾಶಿಯನ್ನು ನಿಧಾನವಾಗಿ ಹಿಂತಿರುಗಿಸಿದರು. ಹೀಗೆ ಜೇಮ್ಸ್ ತನ್ನ ಮಾತೃಋಣವನ್ನು ತೀರಿಸಿದ.

# ಗೋ ಭಕ್ತ ರಾಮಸಿಂಹ

ಈತ ಓರ್ವ ಸಿಪಾಯಿ (ಸೈನಿಕ) ಯಾಗಿದ್ದು, ಸರಕಾರಿ ಖಜಾನೆಯ ಸುರಕ್ಷಾ ಕಾರ್ಯ ನಿರ್ವಹಿಸಿದ್ದ. ಗೋಮಾತೆಯ ಪರಮಭಕ್ತನಾಗಿದ್ದು, ಆಕೆಯ ರಕ್ಷೆಗಾಗಿ ತನ್ನನ್ನೇ ಬಲಿಪಶುವಾಗಿಟ್ಟ ವೀರ.

ಸಬಲಗಡದ ಶಾಸಕೀಯ ಖಜಾನೆಯ ಕಾವಲು ಕಾಯುತ್ತಿದ್ದ ರಹೀಮ. ಆಗ ರಾಮಸಿಂಹ ಒಂದು ದೊನ್ನೆಯಲ್ಲಿ ಪಾಯಸ ಮತ್ತು ರೊಟ್ಟಿಯೊಂದಿಗೆ ಆ ಸ್ಥಾನಕ್ಕೆ ಬಂದ. ಇದನ್ನು ಕಂಡ ರಹೀಮನು ಮಾತನಾಡಲು ಪ್ರಾರಂಭಿಸಿದ.

**ರಹೀಮ** – ಏನಿದು ರಾಮಸಿಂಹ. ಈ ಪಾಯಸ ರೊಟ್ಟಿಯೊಡನೆ ಎಲ್ಲಿಗೆ ಹೋಗುತ್ತಿರುವೆ?

**ರಾಮಸಿಂಹ -** ಇದು ಅಗ್ರಾಸನವು

**ರಹೀಮ** – ಅಂದರೇನು?

**ರಾಮಸಿಂಹ** – ಯಾವಾಗ ನಾವು ರೊಟ್ಟಿಯನ್ನು ತಯಾರಿಸಲು ಪ್ರಾರಂಭಿಸುತ್ತೇವೋ ಆವಾಗ ಮೊದಲ ರೊಟ್ಟಿ ಗೋಮಾತೆಗಾಗಿ ಮೀಸಲಿಡುತ್ತೇವೆ. ಇದನ್ನೇ ಅಗ್ರಾಸನವೆಂದು ಕರೆಯುತ್ತೇವೆ.

**ರಹೀಮ –** ನೀನು ರೊಟ್ಟಿ ತಿಂದಿರುವೆಯಾ?

**ರಾಮಸಿಂಹ** – ಇಲ್ಲಿ ಗೋಮಾತಾ ಸೇವಿಸಿದ ನಂತರವೇ ನಮ್ಮ ಭೋಜನ ನಂತರವೇ ಬೇರೆಲ್ಲಾ ಕಾರ್ಯ

**ರಹೀಮ** – ನೀನು ಗೋವನ್ನು ತಾಯಿಯೆಂದು ತಿಳಿದಿರುವಿಯೇನು?

**ರಾಮ** – ಈಕೆ ತಾಯಿಯಷ್ಟೇ ಅಲ್ಲ, ಜಗನ್ಮಾತೆಯೂ ಸಹ. ನಾನು ಗೋವನ್ನು ಆರಾಧಿಸುತ್ತೇನೆ. ವೈತರಣೀ ನದಿ ಪಾರು ಮಾಡುವ ದೋಣಿ ಇದು.

**ರಹೀಮ –** ನಮ್ಮ ಮುಸಲ್ಮಾನಿ ಧರ್ಮಗ್ರಂಥದಲ್ಲಿ ಸಹ ಇದರ ಉಲ್ಲೇಖವಿದೆ. ಈ ಸಮಸ್ತ ಬ್ರಹ್ಮಾಂಡವು ಗೋವಿನ ಕೊಂಬಿನ ಮೇಲೆ ನಿಂತಿದೆ ಎಂದು.

ನಿನ್ನ ಇಷ್ಟ ದೇವನಾರು? ಯಾರನ್ನು ಪೂಜಿಸುವೆ?

**ರಾಮ –** ಗೋಮಾತೆಯನ್ನು ಸರ್ವದಾ ಆರಾಧಿಸುವವ ನಾನು.

**ರಹೀಮ** – ಹಾಗಾದರೆ, ಇಂದು ರಾತ್ರಿ ನಿನ್ನ ಗೋ ಭಕ್ತಿಯನ್ನು ತೋರಿಸು ನೋಡೋಣ.

**ರಾಮ –** ಅಂದರೆ?

**ರಹೀಮ** – ನಿನಗೆ ಗೊತ್ತಿರಲೇಬೇಕು ಇಂದು ಈದ್ ಎಂದು.

**ರಾಮ –** ಗೊತ್ತಿದೆ. ಆದರೆ?

**ರಹೀಮ –** ನಿನಗಿದು ತಿಳಿಯದೇ? ಇಲ್ಲಿಯ ತಹಶೀಲ್ದಾರ – ಕಲೆಕ್ಟ್ರ, ಠಾಣಾ ಪ್ರಭಾರಿ, ಮಂತ್ರಿ ಮತ್ತು ಹಲವಾರು ಸೈನಿಕರು ಮುಸಲ್ಮಾನರು

**ರಾಮ-** ಇದನ್ನರಿತಿರುವೆ. ಇದರಿಂದೇನು?

**ರಹೀಮ –** ತಾಲ್ಲೂಕ್ ಆಫೀಸ್ ಮುಂಭಾಗದಲ್ಲಿ ಪ್ರಾಂಗಣವಿದೆ. ಅದರ ಪಕ್ಕದಲ್ಲಿ ಠಾಣೆಯೂ ಇದೆ. ಇಂದು ಇದೇ ಪ್ರಾಂಗಣದಲ್ಲಿ ನಿನ್ನ ಗೋಮಾತೆಯ ಹತ್ಯೆಯಾಗಲಿದೆ.

**ರಾಮ** – ಯಾವಾಗ? ಯಾವ ಸಮಯದಲ್ಲಿ?

**ರಹೀಮ** – ಮಧ್ಯರಾತ್ರಿ ಹನ್ನೆರಡಕ್ಕೆ

**ರಾಮ** – ರಾತ್ರಿ ಹನ್ನೊಂದರಿಂದ ಕಾಯುವ ಪಾಳಿ ನಿನ್ನದು

**ರಹೀಮ** – ಹಾಗಾದರೆ, ನೀನು ನಿನ್ನ ಕಣ್ಣಾರೆ ನಿನ್ನ ಗೋಮಾತೆಯ ಹತ್ಯೆಯನ್ನು ನೋಡಲಿರುವೆ.

**ರಾಮ** – ತಾಲ್ಲೂಕಿನಲ್ಲಿ ಗೋ ಹತ್ಯೆಯಾಗುವ ವಿಚಾರ ಎಲ್ಲಾ ಅಧಿಕಾರಿಗಳಿಗೂ ತಿಳಿದಿದೆ ಏನು? ಅವರೆಲ್ಲಾ ಒಪ್ಪಿದ್ದಾರೆಯೇ?

**ರಹೀಮ** – ತಿಳಿಯದೇ ಏನು? ಎಲ್ಲಾ ಅಧಿಕಾರಿಗಳು ಮುಸಲ್ಮಾನರೇ. ಈ ವಿಷಯ ನಿರ್ಣಯವಾಗಿರುತ್ತದೆ.

**ರಾಮ** – ನನ್ನ ಸಮ್ಮುಖದಲ್ಲಿ ಗೋಮಾತೆಯ ಹತ್ಯೆ? ಇದಂತೂ ಅಸಂಭವ

**ರಹೀಮ** – ನಾನು ನಿನ್ನ ಗೋಮಾತೆಯ ಹತ್ಯೆ ಮಾಡುವುದನ್ನು ನೀನೇ ಕಣ್ಣಾರೆ ನೋಡುವಿಯಂತೆ.

**ರಾಮ** - ಹಾಗಾದರೆ ನೀನು ನಿನ್ನ ತಲೆಗೆ ಮರಣವಸ್ತ್ರವನ್ನು ಧರಿಸಿಕೊಂಡು ಬಾ.

**ರಹೀಮ** – ನಾನು ನೋಡುವೆ. ನಿನ್ನ ಪ್ರತಾಪವನ್ನು ಎಂದು ನಗುತ್ತಾ ಹೇಳಿ ಸುಮ್ಮನಾದ.

ರಾತ್ರಿ ಹನ್ನೊಂದು ಘಂಟೆಗೆ ಸೈನಿಕ ರಾಮಸಿಂಹ ವರದಿ ವಸ್ತ್ರ (ಸಮವಸ್ತ್ರ) ಧರಿಸಿ ಎರಡು ನಾಳವಿರುವ ಬಂದೂಕಿನೊಡನೆ ಕಾವಲು ಕಾಯಲಾರಂಭಿಸಿದ. ಆ ಸ್ಥಾನದಲ್ಲೇ ಹನ್ನೆರಡು ಕಾಡಕೂಸಿನಿಂದ ತುಂಬಿರುವ ಬಂದೂಕುಗಳೂ ಇದ್ದವು. ಅರ್ಧ ಘಂಟೆಯ ತರುವಾಯ ರಹೀಮ ಒಂದು ಸುಂದರ ಪ್ರೌಢ ಹಸುವಿನೊಡನೆ ಅಲ್ಲಿಗೆ ಬಂದ. ಪ್ರಾಂಗಣದಲ್ಲಿ ನೆಟ್ಟಿದ್ದ ಮರದ ಕಂಬಕ್ಕೆ ಕಟ್ಟಿ ಕತ್ತಿಯ ಅಲಗನ್ನು ನೋಡಿದ.

ಆ ಪ್ರಾಂಗಣದಲ್ಲಿ ಕುರ್ಚಿಗಳನ್ನು ಜೋಡಿಸಿದ್ದರು. ತಹಶೀಲ್ದಾರ್-ಕಲೆಕ್ಟರ್-ಪೊಲೀಸ್ ಅಧಿಕಾರಿ-ಮಂತ್ರಿ ಇವರೆಲ್ಲಾ

ಬಂದು ಕುಳಿತರು. ಅವರ ಸಂಗಡ ಕೆಲವು ನಗರದ ಗಣಮಾನ್ಯ ಮುಸಲ್ಮಾನರೂ ಸಹ ಕುಳಿತಿದ್ದರು. ಸುಮಾರು 14-15 ಜನರ ಉಪಸ್ಥಿತಿಯಿತ್ತು. ಅಲ್ಲಿ ಏಳು ಮುಸಲ್ಮಾನರು ಇವರೆಲ್ಲರ ಹಿಂದೆ ನಿಂತಿದ್ದರು. ಆಗ ಓರ್ವ ಮೌಲವೀ ಎದ್ದುನಿಂತು ಬಲಿಯ ಪ್ರಾರ್ಥನೆ ಮಾಡಿದ ಕತ್ತಿ ಹಿಡಿದ, ರಹೀಮ ಮುಂದುವರೆದ. ಆಗ...

**ರಾಮಸಿಂಹ –** ಎಚ್ಚರಿಕೆ, ರಹೀಮ. ಎಚ್ಚರಿಕೆ

**ರಹೀಮ** – ಏನು ಬೊಗಳುತ್ತಿರುವೆ?

**ರಾಮ** – ಕಡ್ಲೆಕಾಳೆಂದು ಭಾವಿಸಿ ಮೆಣಸಿನ ಕಾಳನ್ನು ತಿನ್ನಬೇಡ

**ರಹೀಮ** – ಶಾಂತನಾಗು

**ರಾಮ** – ತಹಶೀಲ್ದಾರ್ ಮಹಾಪ್ರಭುಗಳೇ! ಈ ನಗರ ಕೇವಲ ಮುಸಲ್ಮಾನರದಲ್ಲ. ಹಿಂದೂಗಳಿಗೂ ಸೇರಿದೆ.

**ತಹಶೀಲ್ದಾರ್** – ಏನಿದರರ್ಥ?

**ರಾಮ –** ಈ ನಗರದಲ್ಲಿ ಗೋಹತ್ಯೆ ಆಗಬಾರದೆಂದರ್ಥ

**ತಹಶೀಲ್ದಾರ್** – ಇದು ನನ್ನ ಆದೇಶ

**ರಾಮ** – ನಿಮ್ಮ ಆದೇಶವೇ ಶಿರೋಧಾರ್ಯವಲ್ಲ. ಕಲೆಕ್ಟರ್ ಸಾಹೇಬರ ಆದೇಶ ತೋರಿಸಿ

**ತಹಶೀಲ್ದಾರ್** – ಈ ತಾಲ್ಲೂಕಿಗೆ ನಾನೇ ಕಲೆಕ್ಟರ್, ಜಾರ್ಜ್ ಪಂಚಮನೂ ನಾನೇ ತಿಳಿಯಿತೇ, ಈಗ!

**ರಾಮ** – ನೀವು ಬೇಕಾದರೆ ಅಲ್ಲಾಹು ಆದರೂ ಸರಿ. ನಿಮ್ಮ ಆದೇಶ ಪಾಲನೀಯವಲ್ಲ. ಎಲ್ಲರೆದುರಿನಲ್ಲಿ ಇಂತಹ ಕೃತ್ಯ ನಡೆಯಲಾರದು.

**ಠಾಣಾಧಿಕಾರಿ** – ನಡೆಯುವುದರಲ್ಲಿ ಸಂದೇಹವಿಲ್ಲ. ಬಂದೂಕವನ್ನು ಅಲ್ಲಿಟ್ಟು ನೀನು ಹೊರಗೆ ಹೋಗು.

**ರಾಮ** – ನನ್ನ ಬಂದೂಕವನ್ನು ಯಾರು ತಾನೇ ಕಿತ್ತುಕೊಳ್ಳುವರು ನೋಡುವೆ

**ಠಾಣಾಧಿಕಾರಿ** – ಯಾರೋ ಏಕೇ? ನಾನೇ ತೆಗೆದುಕೊಳ್ಳುತ್ತೇನೆ

**ರಾಮ** – ಬನ್ನಿ, ಕಸಿದುಕೊಳ್ಳಿ

**ಮಂತ್ರಿ** – ನಿನಗೇನಾಗಿದೆ ರಾಮ? ನಿನ್ನ ಮೇಲಾಧಿಕಾರಿಗಳ ಸಂಗಡವೇ ಇಂತಹ ಮಾತು!

**ರಾಮ –** ಯಾವ ಮೂರ್ಖ ಇವರನ್ನು ಅಧಿಕಾರಿಯನ್ನಾಗಿ ಮಾಡಿದ! ಜನರ ಮನಸ್ಸಿಗೆ ನೋವು ಕೊಡುವವ ಅಧಿಕಾರಿಯೇನು?

**ಠಾಣಾಧಿಕಾರಿ** – ರಹೀಮ! ನೀನು ನಿನ್ನ ಕೆಲಸವನ್ನು ಮುಂದುವರೆಸು. ಈ ಕಾಫಿರ್ ಏನು ಬೇಕಾದರೂ ಬೊಗಳಲಿ.

ರಹೀಮ ಹಸುವಿನ ಹತ್ತಿರ ಹೋಗಿ ಕುತ್ತಿಗೆ ಕಡಿಯಲು ಕತ್ತಿ ಎತ್ತಿದ. ಆ ಕ್ಷಣದಲ್ಲಿ ರಾಮಸಿಂಹನ ಬಂದೂಕಿನಿಂದ ಹೊರಬಂದ ಗೋಲಿ ರಹೀಮನ ತಲೆಗೆ ಹೊಡೆದು ಅವನ ಪ್ರಾಣವನ್ನು ತೆಗೆದು ಹಾಕಿತು. ಹಿಡಿದುಕೋ ಅವನನ್ನು ಎಂದು ಕಿರಿಚುತ್ತಿದ್ದ ಠಾಣಾಧಿಕಾರಿ ರಾಮಸಿಂಗನ ಎರಡನೇ ಗೋಲಿಗೆ ಆಹಾರವಾದ. ತಹಶೀಲ್ದಾರ-ಮಂತ್ರಿ ಮೊದಲಾದವರೆಲ್ಲಾ ಎದ್ದು ಓಡಿಹೋಗಲು ಪ್ರಯತ್ನಿಸಿದರು. ಖಾಲಿ ಬಂದೂಕ ತೆಗೆದಿಟ್ಟು ಎರಡನೇ ಬಂದೂಕವನ್ನು ಹಿಡಿದು ತಹಶೀಲ್ದಾರರತ್ತ ಗುರಿ ಇಟ್ಟು – ಎಲ್ಲಿ ಓಡುವೆ, ಜಾರ್ಜ್ ಪಂಚಮ! ನಿನ್ನ ಕಲೆಕ್ಟರಿ ಚಟ್ನಿಯ ರುಚಿ ನೋಡುವುದಿಲ್ಲವೇ? ಎಂದು ಗುಂಡು ಹಾರಿಸಿದ. ಆ ಗುಂಡು ತಹಸೀಲ್ದಾರನ ತಲೆಗೆ ಹೊಕ್ಕಿತು, ಮೃತನಾದ. ಇದರ ನಂತರ ಓಡಿ ಹೋಗುವ ಕಾತುರವಿತ್ತು ಜನರ ಮನದಲ್ಲಿ. ಆದರೆ,

ರಾಮಸಿಂಹನಿಗೆ ಪುರುಸೊತ್ತೆಲ್ಲಿ? ತಡಾತಡ್ ಗೋಲಿಗಳು ಹಾರಿದವು. ಹನ್ನೊಂದು ಜನರು ಬಲಿಯಾದರು.

ಇದರ ತರುವಾಯ ರಾಮಸಿಂಹ ಹಸುವಿನ ಬಳಿ ಬಂದು ಕಾಲಿಗೆ ನಮಸ್ಕರಿಸಿ ಹಗ್ಗವನ್ನು ಬಿಚ್ಚಿ ಬಂಧನಮುಕ್ತನನ್ನಾಗಿಸಿದ. ಆ ಕ್ಷಣವೇ ಹಸು ಆ ಜಾಗ ಬಿಟ್ಟು ಓಡಿ ಹೋಯಿತು. ನಂತರ, ರಾಮಸಿಂಹ ತನ್ನೆದೆಗೆ ಗುಂಡು ಹೊಡೆದುಕೊಂಡು ಬಲಿಯಾದನು.

ಬೆಳಿಗ್ಗೆಯಾದೊಡನೇ ಈ ಸಮಾಚಾರ ನಗರದಲ್ಲಿ ಪ್ರಸರಿಸಿ ಘಟನಾ ಸ್ಥಳಕ್ಕೆ ಎಲ್ಲರೂ ಬರುವಂತೆ ಮಾಡಿತು. ಕೆಲವು ಹಿಂದೂಗಳು ಹುತಾತ್ಮನಾದ ರಾಮಸಿಂಗನಿಗಾಗಿ ಪಲ್ಲಕ್ಕಿ ಸಿದ್ಧಪಡಿಸಿದರು. ಒಬ್ಬ ಸೇಠು, 500 ರೂಪಾಯಿ ಬೆಲೆಬಾಳುವ ಶಾಲನ್ನು ರಾಮಸಿಂಗನ ಶರೀರಕ್ಕೆ ಹೊದಿಸಿದ. ನಾಲ್ಕು ಸಾಧುಗಳು ಶವವಾಹಕರಾದರು. ನಗರದ ಸಿಹಿ ತಿಂಡಿ ತಯಾರಿಸುವವರು ಬತ್ತಾಸೆಯನ್ನು, ಚಿನ್ನದಂಗಡಿಯವರು ಹಣವನ್ನೂ, ಹೂವು ಮಾರುವವರು ಹೂವನ್ನು ಶೇಖರಿಸಿಟ್ಟರು. ಯಾವಾಗ ಶವಯಾತ್ರೆ ಮುಂದುವರೆಯಿತೋ ಆಗ ಜಾಗಟೆ-ಗಂಟೆ ಶಂಖವಾದ್ಯಗಳು ಮೊಳಗುತ್ತಿತ್ತು. ಶವಯಾತ್ರೆ ಮುಂದೆ ಬಲಿಯಾಗಲಿದ್ದ ಪಶು ಬರುತ್ತಿತ್ತು. ದಾರಿಯುದ್ದಕ್ಕೂ ಹೂವು-ಬತಾಸೆ ನಾಣ್ಯಗಳನ್ನೆರಚಿದರು. ಈ ವಿಶಾಲ ಶವಯಾತ್ರೆಯಲ್ಲಿ ಅನೇಕ ಸಹೃದಯೀ ಮುಸಲ್ಮಾನರೂ-ಕ್ರಿಶ್ಚಿಯನ್ನರೂ ಸಹ ಪಾಲ್ಗೊಂಡಿದ್ದರು.

ಸ್ಮಶಾನ ಭೂಮಿಯಲ್ಲಿ ಯಾವಾಗ ಹೆಣವನ್ನಳಿಸಿದರೋ ಆಗ ಮಹಮ್ಮದ್ ಅಲಿಯು ಹೆಣದ ಮೇಲೆ ಗುಲಾಬಿ ಹೂವನ್ನಿಡುತ್ತಾ ಹೇಳಿದ, ಹಜರತ್ ಮುಹಮ್ಮದ್ ತನ್ನ ಲೇಖನದಲ್ಲಿ ಇಂತಹ ಪ್ರಾಣಿಗಳನ್ನು ಸುತರಾಂ ಕೊಲ್ಲಬಾರದು ಯಾವುದರಿಂದ ಸಾಮಾನ್ಯ ಜನತೆಗೆ ಆರಾಮ ಕೊಡುವುದೋ ಎಂದು ಬರೆದಿದ್ದಾರೆ. ಬಾದಷಾ ಅಕ್ಬರ್ ಬಾದಷಾ ಜಹಂಗೀರರು ಗೋ ಹತ್ಯೆ ವಿರುದ್ಧ ಕಾನೂನ್ನನ್ನೇ ಮಾಡಿದ್ದರು. ಆದರೆ, ದುಃಖದ ವಿಷಯವೇನೆಂದರೆ, ಕೆಲವು ಸ್ವಾರ್ಥೀ ಮುಸಲ್ಮಾನರು ಕೇವಲ ಹಿಂದೂ ಸೋದರರ

ಮನಕ್ಕೆ ದುಃಖವನ್ನುಂಟು ಮಾಡುವುದಕ್ಕಾಗಿಯೇ ಗೋಹತ್ಯಾ ಪಾಪಕರ್ಮವನ್ನು ಮಾಡುತ್ತಾರೆ. ಅವರನ್ನು ನಾನು ದ್ವೇಷಿಸುತ್ತೇನೆ – ಎಂಬುದಾಗಿ.

**ಪಾದರೀ ಯಂಗ್ ಸಾಹೇಬರು** – ಸರಕಾರ ಒಂದು ವೇಳೆ ಗೋ ಹತ್ಯೆ ಮಾಡಿಸುವ ಪಕ್ಷದಲ್ಲಿದ್ದಲ್ಲಿ, ವಿದೇಶದಲ್ಲಿ ತುಂಬಾ ಗೋ ಹತ್ಯೆಯಾಗುತ್ತಿತ್ತು. ಆದರೆ, ಅಲ್ಲಿ ಇದರ ನಾಮೋನಿಶಾನೆ ಇಲ್ಲ. ವಿದೇಶದಲ್ಲಿರುವ ರೈತರು ಪಶುಪಾಲನೆ ಮಾಡುತ್ತಾರೆ. ಆದರೆ, ಕೆಲವು ಚರ್ಮದ ವ್ಯಾಪಾರಿಗಳು ಚರ್ಮಕ್ಕಾಗಿ ಗೋ ಹತ್ಯೆ ಮಾಡುವುದನ್ನು ನಿಲ್ಲಿಸಿಲ್ಲ ಎಂಬುದೇ ದುಃಖದ ವಿಷಯವು. ನಾನು ರಾಮಸಿಂಹನ ವೀರತೆ ಮತ್ತು ಗೋಮಾತೆಯ ಬಗ್ಗೆ ಇರುವ ಗೌರವ-ಅಭಿಮಾನವನ್ನು ಮೆಚ್ಚುತ್ತೇನೆ.

ನಾನು ಏಸುವಿನಲ್ಲಿ ಪ್ರಾರ್ಥಿಸುತ್ತಾ ಠಾಕುರ್ ರಾಮಸಿಂಹನ ಕುಟುಂಬದ ನಿರ್ವಹಣೆಗಾಗಿ ಸ್ವಲ್ಪ ಧನರಾಶಿಯನ್ನು ಚಂದಾ ರೂಪದಲ್ಲಿ ಅರ್ಪಿಸಲು ಬಯಸುತ್ತೇನೆ – ಎಂದು ಹೇಳಿ 1000=00 ರೂಪಾಯಿಯನ್ನು ಕೊಟ್ಟನು. ಮುಹಮ್ಮದ್ ಅಲಿಯು ರೂ 3000-00 ವನ್ನು ಕೊಟ್ಟನು, ಮತ್ತು ಅಲ್ಲಿ ನೆರೆದಿದ್ದವರ ಕರೆಯಿಂದ ರೂ 15,000-00 ಸಂಗ್ರಹವಾಗಿತ್ತು. ಅದನ್ನು ರಾಮಸಿಂಹನ ಪರಿವಾರಕ್ಕೆ ಸಮರ್ಪಿಸಲಾಯಿತು.

## ಓಂ ಶಾಂತಿ!